ವಿದ್ಯಾರ್ಥಿನಿಲಯ ವಿಷಯಕ್ಕೆ ಬರುತ್ತೇನೆ. ಸಾವಿರಾರು ವಿದ್ಯಾರ್ಥಿಗಳಿಗೆ ದಾರಿ ದೀಪವಾದ ಉಚಿತ ವಿದ್ಯಾರ್ಥಿನಿಲಯ. ವಿದ್ಯಾರ್ಜನೆಗೆ ಆಶ್ರಯವಾಗಿದ್ದ ಉಚಿತ ವಿದ್ಯಾರ್ಥಿನಿಲಯದ ನಾಲ್ಕು ವರ್ಷಗಳ ಪ್ರಯೋಜನ ಪಡೆದ ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನ ಮದಕರಿನಾಯಕನ ಕೋಟೆಯಿಂದ ವಿದ್ಯಾರ್ಜನೆಗಾಗಿ ಮೈಸೂರಿಗೆ ಬಂದಂತಹ ಪದವಿ ವಿದ್ಯಾರ್ಥಿನಿಯ ನನ್ನ ತಂದೆಯವರ ಕಥೆ. ನನ್ನ ಪೂಜ್ಯ ಅಪ್ಪಾಜಿಯವರಾದ ಡಾ. ಮ.ನೀ ಮೃತ್ಯುಂಜಯರವರು ಮಹಾರಾಜ ಕಾಲೇಜಿನಲ್ಲಿ ಬಿ.ಎ ತರಗತಿಯಲ್ಲಿ ಓದುತ್ತಿದ್ದಾಗ ಜೆಎಸ್‌ಎಸ್ ಉಚಿತ ವಿದ್ಯಾರ್ಥಿನಿಲಯದಲ್ಲಿ ಇದ್ದರು. ಪದವಿ ಸ್ನಾತಕೋತ್ತರ ಪದವಿ ಪಡೆದು ಸರ್ಕಾರಿ ನೌಕರರಾಗಿ, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹಿಂದಿ ರೀಡರ್‌ರಾಗಿ ನಿವೃತ್ತಿ ಹೊಂದಿದ್ದರು. ಚಿತ್ರದುರ್ಗದಿಂದ ಬಂದಂತಹ ಅವರಿಗೆ ಜೋಳದ ರೊಟ್ಟಿ ಜೋಳದ ಮುದ್ದೆ ತಿಂದು ರೂಢಿಯಾಗಿತ್ತು. ಮೈಸೂರಿನ ಹಾಸ್ಟಲ್‌ನಲ್ಲಿ ಆ ದಿನಗಳಲ್ಲಿ ರಾಗಿ ಮುದ್ದೆ ಮಾಡುತ್ತಿದ್ದರು. ಅವರಿಗೆ ಸೇರುತ್ತಿರಲಿಲ್ಲ. ಮುಂದೊಂದು ದಿನ ಅವರ 50–60 ವರ್ಷದಲ್ಲಿ ಸಕ್ಕರೆ ಕಾಯಿಲೆಗೆ ಒಳಗಾದಾಗ ಪ್ರತಿ ದಿನ ಪೂಜ್ಯರನ್ನು ನೆನಯುತ್ತಿದ್ದರು. ವಿದ್ಯಾರ್ಥಿಯಾಗಿದ್ದಾಗ ರಾಗಿ ಮುದ್ದೆ ತಿನ್ನದೆ ಅಹಂಕಾರ ತೋರಿಸಿದ ನನಗೆ ಇಂದು ಸಕ್ಕರೆ ಕಾಯಿಲೆಗೆ ಮದ್ದಾಗಿ (ಔಷದಿಯಾಗಿ) ರಾಗಿ ಮುದ್ದೆ ತಿನ್ನುತ್ತಿದ್ದೇನೆ ಎಂದು ನಮ್ಮೊಂದಿಗೆ ಹೇಳಿಕೊಳ್ಳುತ್ತಿದ್ದರು. ಕೊಳ್ಳೇಗಾಲ ತಾಲ್ಲೂಕು ಕಾಮಗೆರೆಯ ಮಾಜಿ ಶಾಸಕರಾದ ದಿವಂಗತ ನಾಗಪ್ಪ, ಪೋಲೀಸ್ ಇಲಾಖೆಯಲ್ಲಿದ್ದು ನಿವೃತ್ತಿರಾದ ರೇವಣ ಸಿದ್ದಪ್ಪ ಹಾಗೂ ಜಾತ್ರಾ ಮಹೋತ್ಸವಗಳಲ್ಲಿ ಹೆಚ್ಚು ಲವಲವಿಕೆಗಳಿಂದ ಓಡಾಡುತ್ತಿದ್ದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿದ್ದಪ್ಪನವರು ನನ್ನ ತಂದೆಯ ಪದವಿ ಸಹ ವಿದ್ಯಾರ್ಥಿಗಳಾಗಿದ್ದರು (ಕ್ಲಾಸ್‌ಮೆಟ್ಸ್). ಅವರಿಗೆ ಮಠದ ಎಲ್ಲಾ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆ ತಲುಪುತ್ತಿತ್ತು. ಜಾತ್ರಾ ಮಹೋತ್ಸವದಲ್ಲಿ ನಡೆಯುವ ಹಿರಿಯ ವಿದ್ಯಾರ್ಥಿ ವೇದಿಕೆಯ ಸಭೆಗೆ ತಪ್ಪದೇ ಹಾಜರಾಗುತ್ತಿದ್ದರು.

ಎರಡನೇ ಬಾರಿಗೆ ಪೂಜ್ಯರ ದರ್ಶನ ಪಡೆದುದು : 1986ರಲ್ಲಿ ನಮ್ಮ ತಂದೆಯುವರು ಪೂಜ್ಯರ ಆರ್ಶಿವಾದವನ್ನು ಪಡೆಯಲು ಮಠಕ್ಕೆ ನಮ್ಮನ್ನು ಕರೆದುಕೊಂಡು ಹೋಗಿದ್ದರು. ಮೊದಲ ಬಾರಿಗೆ ಪೂಜ್ಯರನ್ನು ಕಂಡ ನಾವುಗಳು ಧನ್ಯರಾದೆವು. ಅವರ ಕೃಪಾರ್ಶಿವಾದದಿಂದ ನಾವು ನಾಲ್ಕೂ ಮಕ್ಕಳು ಒಳ್ಳೆಯ ವಿದ್ಯಾವಂತರಾದೆವು. ಮುಂದೆ ನನ್ನ ಅಕ್ಕ ಶ್ರೀಮತಿ ಮಂಜುಳಾ ಜಂಗವ್ ಮೈಸೂರು ಜೆಎಸ್‌ಎಸ್ ಸರಸ್ವತಿಪುರಂನಲ್ಲಿ ಪ್ರಾಥಮಿಕ ಶಾಲೆಯಲ್ಲಿ ನಾಲ್ಕು ವರ್ಷ ಹಾಗೂ ನಂಜನಗೂಡು ತಾ: ಹುಲ್ಲಹಳ್ಳಿಯಲ್ಲಿ ಸುಮಾರು 9 ವರ್ಷಗಳ ಕಾಲ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದರು. ಹಾಗೂ 28–08–1986 ಅಂದಿನ ಕರ್ನಾಟಕ ಮುಖ್ಯಮಂತ್ರಿಯಾಗಿದ್ದ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಆಗಮಿಸಿದ್ದ ಕಾರ್ಯಕ್ರಮದಲ್ಲಿ – ಪೂಜ್ಯ ರಾಜೇಂದ್ರ ಮಹಾಸ್ವಾಮಿಗಳವರ 70ನೇ ಜನ್ಮದಿನಾಚರಣೆಯಲ್ಲಿ ಕೆಲಸ ನಿರ್ವಹಿಸಿದ್ದಾರೆ. ನಾನು ಶ್ರೀ ರಾಮಕೃಷ್ಣ ಹೆಗ್ಗಡೆಯವರು ಆಗಮಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆನು. ಈ ಕಾರ್ಯಕ್ರಮದಲ್ಲಿ ಪೂಜ್ಯರು ಚಿನ್ನದ ಕಿರೀಟವನ್ನು ದರಿಸಿಕೊಂಡಿದ್ದ ದೃಷ್ಯ ಕಣ್ಣಿಗೆ ಕಟ್ಟಿದಂತಿದೆ.

ಇದೇ ರೀತಿ ನನ್ನ ತಮ್ಮ ಡಾ. ಎಂ. ವೀರಭದ್ರಸ್ವಾಮಿ, ಎಂ.ಎಸ್ಸಿ ಪದವಿ ಪಡೆದು ಜೆಎಸ್‌ಎಸ್ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು ಇಲ್ಲಿ ನಾಲ್ಕು ವರ್ಷಗಳ ಕಾಲ ರಸಾಯನಶಾಸ್ತ್ರ ಪ್ರಾಧ್ಯಾಪಕನಾಗಿ ಕೆಲಸ ಮಾಡಿ ನಂತರ ಬೆಂಗಳೂರಿನ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೇವೆ ಸಲಿಸಿದ್ದರು. ಕಾರಣಾಂತರದಿಂದ ಸಂಸ್ಥೆ ತೊರೆದು ಒಂದು ವರ್ಷ ವಿದೇಶದಲ್ಲಿ ಕೆಲಸ ಮಾಡಿ ಬೆಂಗಳೂರಿಗೆ ಹಿಂತಿರುಗಿ ಪಿಇಎಸ್ ಕಾಲೇಜಿನಲ್ಲಿ ರಸಾಯಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದಾರೆ. ಅವರಿಗೆ ಜೆಎಸ್‌ಎಸ್ ಸಂಸ್ಥೆ ಎಂದರೆ ಬಹಳ ಅಭಿಮಾನ. ಈಗಿನ ಕಾಲೇಜು ಶಿಕ್ಷಣ ನಿರ್ದೇಶಕರಾದ ಪ್ರೊ. ಟಿ.ಡಿ ಸುಬ್ಬಣ್ಣನವರ ಶಿಷ್ಯರಾಗಿದ್ದರು. ಇಂದಿಗೂ ಬಿಡುವಿನ ವೇಳೆಯಲ್ಲಿ ಸಂಸಾರ ಸಮೇತ ಜಾತ್ರಾ ಮಹೋತ್ಸವಕ್ಕೆ ಸಕ್ರಿಯವಾಗಿ ಭಾಗವಹಿಸುತ್ತಾರೆ.

ಈ ಕಾಲೇಜಿನಲ್ಲಿ ಹದಿನಾರು ವರ್ಷಗಳಿಂದ ಪೂಜ್ಯರ ಜಯಂತಿ ಮಹೋತ್ಸವಗಳಲ್ಲಿ ಕೆಲಸ ಮಾಡಿದ ನಾನು ಈ ವರ್ಷ ವಿಶೇಷವಾಗಿ ಪರಮಪೂಜ್ಯ ಜಗದ್ಗುರು ಡಾ ರಾಜೇಂದ್ರ ಮಹಾಸ್ವಾಮಿಗಳವರ 100ನೇ ಜನ್ಮಶತಮಾನೋತ್ಸವದ ಸಮಿತಿಯ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ ಎಂದರೆ, ಇದು ನನ್ನ ಪೂಜ್ಯ ಅಪ್ಪಾಜಿಯವರಾದ ಡಾ. ಮ ನೀ ಮೃತ್ಯುಂಜಯರವರ ಕನಸು ನನಸಾದ ದಿನ. ನನ್ನ ಅಳಿಲು ಸೇವೆ ಆ ದೇವರಿಗೆ ಮೆಚ್ಚಿಗೆಯಾದರೆ ಜನ್ಮ ಸಾರ್ಥಕ.

## ಶೀರ್ಷಿಕೆ - ಸುತ್ತೂರಿನ ಸಿರಿ

ಬಸವದತ್ತ ಮಹದೇವ ಪ್ರಸಾದ್ ಸಿ.ಎಸ್.
ಸಹಾಯಕ ಪ್ರಾಧ್ಯಾಪಕರು

ನೋಡ ಬನ್ನಿರಿ, ನೋಡ ಬನ್ನಿರಿ ಸುತ್ತೂರ ।
ಈ ಸುತ್ತೂರ, ಈ ಸುತ್ತೂರ ಸಿರಿಯ ॥ ॥ಪ॥

ವಿದ್ಯೆಯ ಆಗರ ಭಕ್ತಿಯ ಭಂಡಾರ ।
ಕಾಯಕದರಿವ ಅರುಹಿದ ಸುತ್ತೂರ ।
ಮಹದೇಶ್ವರರಿಂದ ಕಾಯಕ ಮಾಡಿಸಿದ ।
ಅರಸು ಕುಲವ ಅನುಗ್ರಹಿಸಿದ ಗುರುಪರಂಪರೆಯ
॥ ನೋಡ ಬನ್ನಿರಿ ॥

ಆದಿಗುರು ಶಿವರಾತ್ರೀಶ್ವರರ ತಪೋಭೂಮಿಯ ।
ಮಂತ್ರ ಮಹರ್ಷಿಗಳ ಸಾಧನೆಯ ಕೇಂದ್ರವಿದು ।
ರಾಜ ಗುರುತಿಲಕ ರಾಜೇಂದ್ರರ ಕರ್ಮಭೂಮಿಯ ।
ಜಗತ್ಪ್ರಸಿದ್ಧ ಜಗದ್ಗುರುಗಳ ನೆಲೆಯಿದು ।
॥ ನೋಡ ಬನ್ನಿರಿ ॥

ಸಾಧನೆಗೈಯುವವರಿಗೆ ಸಾಧಕ ಭೂಮಿಯಿದು ।
ವಿದ್ಯೆಯ ನರಿವರ್ಗೆ ವಿದ್ವತ್ ಗಣಿಯಿದು ।
ದಾಸೋಹಕ್ಕೆ ಅಕ್ಷಯ ಭಂಡಾರವಿದು ।
ವಿದ್ಯಾದಾನಕ್ಕೆ ವಿಖ್ಯಾತಿ ಪಡೆದಿಹ ಸುತ್ತೂರ ।
॥ ನೋಡ ಬನ್ನಿರಿ ॥

ಅಕ್ಷರ, ಅನ್ನ, ಆರೋಗ್ಯದಾನ ।
ದೇಶ ವಿದೇಶಗಳಲಿ ಕಲಿಕೆಯ ಸ್ಥಾನ ।
ಕಾಯಕ ನೀಡುವ ಭವ್ಯ ಭವನ ।
ಜಗದ್ಗುರು ಶ್ರೀ ಶಿವರಾತ್ರೀಶ್ವರರ ವಿದ್ಯಾಭವನ ।
॥ ನೋಡ ಬನ್ನಿರಿ ॥

## ಗುರು ವಂದನೆ

ಜ್ಯೋತಿ ಎನ್
ಪ್ರಥಮ ಬಿ.ಬಿ.ಎಂ.



ಅಸಾಧ್ಯವಲ್ಲವೇ ನನ್ನಲ್ಲಿರುವ ಅಜ್ಞಾನ
ಸಾಧ್ಯವಲ್ಲವೇ ಗುರುವೇ ನಿಮ್ಮಲ್ಲಿರುವ ಸುಜ್ಞಾನ
ಅಸಾಧ್ಯಕ್ಕೆ ಸಾಧ್ಯ ಗುರುವೇ ನಿಮ್ಮ ಶಕ್ತಿ
ಸಾಧ್ಯಕ್ಕೆ ಸಾಧನವೇ ನಿಮ್ಮ ಭಕ್ತಿ
ಗುರು ಭಕ್ತಿಗಾಗಿ ಗುರುವೇ ನಿಮಗೆ ಸಾವಿರ
ನಮನ,
ನಿಜ, ಗುರುವೇ ನೀವು ಅಸಾಧ್ಯಕ್ಕೊಂದು
ಸಾಧನೆಯ ಸಾಧನ

ಅರಿವಿಲ್ಲದ ತಿಳಿ ಮನದಿ ಉಳಿವಿಲ್ಲದ ಜ್ಞಾನ
ಉಳಿವಿಗಾಗಿ ಅರಿವಿಲ್ಲದ ಕಲ್ಲೊಂದರ ಆಗಮನ,
ಆಗಮನದಿ ಅಜ್ಞಾನದ ಅಲೆಗಳ ನಿರ್ಗಮನ
ನಿರ್ಗಮನದ ಸ್ಫೂರ್ತಿಯೆ ಕಾಲಿಟ್ಟ ಗುರು ನೀವು
ನಿಮ್ಮ ಋಣಕ್ಕಾಗಿ ಮುಡಿಪೆಂದಿಗೂ ನಮ್ಮ
ಜೀವವು

ಇವನರಿಯದ ಗುಟ್ಟಿಲ್ಲ,
ಇವನ ಗುಟ್ಟನ್ನು ಯಾರು ಅರಿತಿಲ್ಲ,
ಬಚ್ಚಿಟ್ಟಿದ್ದನ್ನೆಲ್ಲಾ ಇವ ಬಿಚ್ಚಿಡೋಲ್ಲ,
ಬಿಚ್ಚಿಟ್ಟಿದ್ದನ್ನೆಲ್ಲಾ ಇವ ಬಚ್ಚಿಡೋಲ್ಲ
ಸರಿ ಸಮವಿಲ್ಲ ಇವನಿಗೆ, ಕನ್ನಡದ ಆ ದೈವ,
ಇವನೊಬ್ಬ ನಿಗೂಢತೆಯ ನಿಜ ದೈವ

# "ಮಾತೃ ಭಾಷೆ [ಕನ್ನಡ] ಹೃದಯ English Brain (ಮಿದುಳು)"



ದಿವ್ಯಶ್ರೀ ಹೆಚ್.ಸಿ
ದ್ವಿತೀಯ ಬಿ.ಬಿ.ಎಂ.

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶ್ರೀ ರಾಜೇಂದ್ರ ಮಹಾಸ್ವಾಮಿಗಳ ಅಡಿದಾವರೆಗಳಿಗೆ ನಮಿಸಿ, ಸಮಾಜದ ಶ್ರೇಯೋಭಿವೃದ್ಧಿಯನ್ನೇ ಮನದ ಗುರಿಯನ್ನಾಗಿಸಿಕೊಂಡಿರುವ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳಿಗೆ ನಮಸ್ಕರಿಸುತ್ತಾ..... 2015-16ನೇ ಸಾಲಿನ ವಾರ್ಷಿಕ ಸಂಚಿಕೆ "ದರ್ಪಣ"ಕ್ಕೆ ನನ್ನ ಆಸೆಗಳನ್ನು ಹಂಚಿಕೊಳ್ಳುವ, ಭಾವನೆಗಳನ್ನು ಅಕ್ಷರ ರೂಪದಲ್ಲಿ ವ್ಯಕ್ತಪಡಿಸುವ ಪ್ರಕ್ರಿಯೆಯಲ್ಲಿ ನಾನು ಭಾಗಿಯಾಗಲು ಇಚ್ಛಿಸುತ್ತಿದ್ದೇನೆ.

ಕನ್ನಡ ಮಾತೃ ಭಾಷೆಯಾಗಿ ತನ್ನ ಸ್ಥಾನಮಾನವನ್ನು ಉಳಿಸಿಕೊಳ್ಳುವಲ್ಲಿ ಸೋತಿದೆ. ಪ್ರಾಥಮಿಕ ಶಿಕ್ಷಣದಲ್ಲಿ ಭಾಷಾ ಮಾಧ್ಯಮದ ಆಯ್ಕೆ ಮಗುವಿಗೆ ಮತ್ತು ತಂದೆ ತಾಯಿಗಳಿಗೆ ಬಿಟ್ಟಿದ್ದು ಎಂಬ ಸುಪ್ರೀಂಕೋರ್ಟ್‌ನ ಅಭಿಪ್ರಾಯದಂಥ ತೀರ್ಪಿನಿಂದಾಗಿ ಮಾತೃಭಾಷೆ ನಲುಗುತ್ತಿದೆ. ತೀರ್ಪನ್ನು ಪ್ರಶ್ನಿಸಿದರೆ ನ್ಯಾಯಾಂಗ ನಿಂದನೆ ಮಾಡಿದಂತಾಗುವುದು. ನ್ಯಾಯಾಂಗ ನಿಂದನೆಯ ಭೀತಿಗೆ ಹೆದರುವ ನಾವು ನಮ್ಮ ಮಾತೃ ಭಾಷೆಯನ್ನು ಉಳಿಸಿಕೊಳ್ಳಲು ಇನ್ನೆಂಥ ಹೋರಾಟ ಮಾಡಬಲ್ಲೆವು? ನಮ್ಮ ಮಾತೃ ಭಾಷೆಯನ್ನು ಉಳಿಸಿಕೊಳ್ಳಲು ಹೋರಾಡುವ ಹಕ್ಕು ನಮಗಿದೆ. ಅಂದ ಮೇಲೆ ಮಾತೃ ಭಾಷೆಯ ಪರವಾಗಿರುವವರು ಮಾತೃ ಭಾಷೆಯ ಉಳಿವಿಗಾಗಿ, ಸಂಘಟಿತರಾಗಿಯೂ, ವೈಯಕ್ತಿಕವಾಗಿಯೂ ದನಿಯೆತ್ತಬಹುದು, ಹೋರಾಟ ಮಾಡಬಹುದು. ಅದರಿಂದ ಮಾತೃ ಭಾಷೆಗಾಗಿ ಸಂವಿಧಾನ ತಿದ್ದುಪಡಿ ಆಗಬೇಕೆಂಬ ಬೇಡಿಕೆಗೆ ಬಲ ಬರುತ್ತದೆ.

ಮಾತೃ ಭಾಷೆ ಕನ್ನಡಕ್ಕಾಗಿ ಕಾನೂನು ಹೋರಾಟದಲ್ಲಿ ಮೂಲ ಸೌಕರ್ಯ ಇಲದ್ದಕ್ಕಾಗಿ ಇಂಗ್ಲಿಷ್ ಶಾಲೆಗಳನ್ನು ಆರಂಭಿಸುವುದಕ್ಕೆ ಅನುಮತಿ ನೀಡಲು ಹಿಂದೆ ಮುಂದೆ ನೋಡುತ್ತಿರುವ ರಾಜ್ಯ ಸರ್ಕಾರದ ಧೋರಣೆಯನ್ನು ಹೈಕೋರ್ಟ್ ಪ್ರಶ್ನಿಸಿದೆ. ಈ ನೆಲದ ಕಾನೂನಿನಂತೆ ಈ ನೆಲದ ಭಾಷೆಗಳೂ ಗೌರವಕ್ಕೆ ಅರ್ಹ ಅಲ್ಲವೇನು ಎಂದು ಮಾತೃ ಭಾಷೆ ಪರವಾಗಿರುವವರ ಪ್ರಶ್ನೆಯನ್ನು ಸರ್ಕಾರ, ಸರ್ಕಾರದ ವಕೀಲರು ಕೇಳಲಾಗುವುದಿಲ್ಲ. ಹೊಸ ಶಾಲೆಗಳಿಗೆ ಅನುಮತಿ ಕೊಡುವಾಗ ಮೂಲ ಸೌಕರ್ಯಗಳು ಇವೆಯೋ ಇಲ್ಲವೋ ಎಂಬುದನ್ನು ಸರ್ಕಾರ ಪರಿಶೀಲಿಸ ಬೇಕು. ಒಟ್ಟಾರೆ ಸಮಸ್ಯೆಯ ತಿರುಳಾದ ಭಾಷಾ ಮಾಧ್ಯಮಕ್ಕೆ ತಳಕು ಹಾಕಿರುವುದು ಸರಿಯೇ?

ಕನ್ನಡದ ಸಂದರ್ಭದಲ್ಲಿ ಮಾತೃ ಭಾಷೆಯನ್ನು ಉಳಿಸಬೇಕಾದ ಮಾತೇಯರೆ ಮಾತೃ ಭಾಷೆಯನ್ನು ಕೊಲ್ಲುತ್ತಿದ್ದಾರೆ. ನಾಳೆ ನಾಡ ಹಿರಿಯರಾಗುವ ಇಂದಿನ ಎಳೆಯರ ಮಾತೆಯರು ಭಾಷಾ ಮಾಧ್ಯಮ ಎಂದರೇನೆಂದು ಅರಿಯದ ಮುಗ್ಧ ಮಕ್ಕಳನ್ನು ಪಟ್ಟು ಹಿಡಿದು ಇಂಗ್ಲಿಷ್ ಕಲಿಸುವ ಮತ್ತು ಇಂಗ್ಲಿಷ್ ಸಂಸ್ಕೃತಿಯನ್ನು ಅರೆದು ಕುಡಿಸುವ ಕಾನ್ವೆಂಟ್ ಸ್ಕೂಲ್‌ಗಳಿಗೆ ಕಳಿಸಿ ಮಕ್ಕಳ ಕನಸುಗಳನ್ನು ಹೊಸಕಿ ಹಾಕುತ್ತಿದ್ದಾರೆ. ಮನೆಯಲ್ಲಿ ಇಂಗ್ಲಿಷ್ ಪರವಾಗಿ ನಿಲ್ಲುವ ಅಮ್ಮಂದಿರ ಮುಂದೆ ಅಪ್ಪಂದಿರು ಅಸಹಾಯಕರಾಗುತ್ತಿದ್ದಾರೆ. ಅಮ್ಮಂದಿರಿಗೆ ಇಂಗ್ಲಿಷಿನ ಮೇಲೆ ಅಷ್ಟೇಕೆ ವ್ಯಾಮೋಹ? ಏಕೆಂದರೆ ಕನ್ನಡ ಮಾಧ್ಯಮದ ಮಕ್ಕಳಿಗೆ ಕೆಲಸ ಸಿಗುವುದಿಲ್ಲ. ಬದುಕಲು ಭಿಕ್ಷಾ ಪಾತ್ರೆ ಹಿಡಿಯಬೇಕಾಗುತ್ತದೆ ಎಂಬ ಮಕ್ಕಳ ಭವಿಷ್ಯದ ಚಿಂತೆ ಅವರ ಮನದಲ್ಲಿ ಭೂತವಾಗಿ ಅವರನ್ನು ಹೆದರಿಸುತ್ತಿದೆ. ಇದರಲ್ಲಿ ಜಾಗತೀಕರಣ ಕಾಣದ ಕೈಯೂ ಇದೆ.

ಕೆಲವರಿಗೆ ಮಕ್ಕಳನ್ನೂ ಇಂಗ್ಲಿಷ್ ಮಾಧ್ಯಮ ಶಾಲೆಗೆ ಕಳಿಸುವುದು ಪ್ರತಿಷ್ಠೆಯ ಸಂಕೇತವಾಗುತ್ತದೆ. ಬಹಳಷ್ಟು ಜನರು ತಮ್ಮ ಮಕ್ಕಳ ಭವಿಷ್ಯಕ್ಕೆ ಭದ್ರ ಬುನಾದಿ ಹಾಕುವ ಹುಮ್ಮಸ್ಸಿನಲ್ಲಿ ಎದೆಯ ದನಿಗೆ, ಹೃದಯದ ಮಾತಿಗೆ ಕಿವಿಗೊಡುವುದಿಲ್ಲ. ಮಾತೃ ಭಾಷೆ ತಾಯ ಮೊಲೆ ಹಾಲು ಕುಡಿಯುತ್ತ, ಅಂಬೆಗಾಲಿಡುತ್ತ ಕಲಿಯುವ ಭಾಷೆಯಾದರೆ, ಇಂಗ್ಲಿಷ್ ಡಿಕ್ಷನರಿ ನೋಡಿ ಕಲಿಯುವ ಭಾಷೆ. ಮಾತೃ ಭಾಷೆಯ ಸ್ಥಾನ ಹೃದಯದಲ್ಲಿ, ಇಂಗ್ಲಿಷ್‌ನ ಸ್ಥಾನ ಮಿದುಳಿನಲ್ಲಿ. ಆದರೆ ಇಂದಿನ ನಾಗರೀಕ ಸಮಾಜಕ್ಕೆ ಹೃದಯಕ್ಕಿಂತ ಮಿದುಳೇ ಮುಖ್ಯ, ಸುಪ್ರೀಂ ನಿಲುವು ಕೂಡ ಮಿದುಳೇ ಮುಖ್ಯ ಎಂಬಂತಿರುವುದು ವಿಪರ್ಯಾಸ.

"ಇಂಗ್ಲಿಷ್‌ನ ಮರುಭೂಮಿಯಲ್ಲಿ ಇಂಗಿ ಹೋಗುತ್ತಿದೆ. ಕನ್ನಡದ ಪುಣ್ಯಪ್ರಭ" ಎಂದರು ಕುವೆಂಪು. ಈ ಮಾತು ಬಂದಿದ್ದು ಅವರ ಹೃದಯದಿಂದ ಮಿದುಳಿನಿಂದಲ್ಲ.

---

## ಹೆಣ್ಣೆಂಬ ತಾಯಿ



ಇಂದಿಗೂ ನಮಗೊಂದು
ಪ್ರಸಿದ್ಧ ಗೌರವವಿದೆಯೆಂದರೆ
ಅದು ನಮಗಲ್ಲ
ನಮ್ಮಲ್ಲಿರುವ ಅಮ್ಮ ಅನ್ನೊ ನಮ್ಮ ತಾಯ್ತನಕ್ಕೆ

ಬೇಡದ ದಿನಗಳಲ್ಲಿ
ಪ್ರಾರ್ಥಿಸದ ಜಾಗವಿಲ್ಲ
ಸತ್ತದ ಮರಗಳಿಲ್ಲ
ತೀರಿಸದ ಹರಕೆಗಳಿಲ್ಲ
ಮಾಡದ ಪೂಜೆಗಳಿಲ್ಲ

ಇನ್ನು ಹುಟ್ಟದ ಚಿಗುರಿಗಾಗಿ
ಪಡುವ ಕಷ್ಟಗಳೆಷ್ಟೋ
ನೋವಲು ನಗುವ ಪರಿತಾಪವೆಷ್ಟೊ
ಕೆಲವೊಮ್ಮೆ ಬೇಕೆಂದರೂ ದಕ್ಕಲ್ಲ
ದಕ್ಕಿದರೂ ಕೆಲವರಿಗದು ಬೇಕಾಗಿಲ್ಲ
ಏಕೆಂದರೆ ಅದು ಹೆಣ್ಣು ಎಂಬ ಕಾರಣಕ್ಕೆ

ದೀಪ ಸಿ.
ದ್ವಿತೀಯ ಬಿ.ಎ. [ಹೆಚ್.ಇ.ಕೆ.]

## ವಿದ್ಯಾರ್ಥಿ ಗುರಿ ಮುಟ್ಟಿದ ಆ ಕ್ಷಣ

ಕನಸ ನೆನಪಿಸುವ ದಿನ
ಹೊಸ ಬೆಳಕು ಸೂಸುವ ದಿನ
ಹೊಸ ದಿನ ಹೊಸತನ ತರುವ ದಿನ
ಸೂರ್ಯೋದಯ ಸವಿಯುವ ದಿನ
ದಿನವ ಕಳೆಯುವ ಸಂತೋಷದ ಕ್ಷಣ
ಸವಿನೆನಪಿನ ಸ್ಮರಣೀಯ ದಿನ
ನನ್ನ ನಾನೇ ಮರೆತು ತೇಲಾಡುವ ಕ್ಷಣ
ಸಂತಸದ ಚಿಲುಮೆಯ ಉಕ್ಕಿಸುವ ಸುದಿನ
ನನ್ನ ಗುರಿ ನಾನು ತಲುಪಿದ ಶುಭ ದಿನ



# ಆಕಾಶದಲ್ಲಿ ಚಂದ್ರನೇ ಇರದಿದ್ದರೆ?

ದಿವ್ಯಶ್ರೀ ಹೆಚ್.ಸಿ
ದ್ವಿತೀಯ ಬಿ.ಬಿ.ಎಂ.

ಹೀಗೊಂದು ಊಹೆ ಮಾಡಿಕೊಳ್ಳೋಣ. ನಮ್ಮ ಎಷ್ಟೋ ಸುಂದರ ಕಲ್ಪನೆಗಳಿಗೆ ಕಾರಣನಾದ ಚಂದ್ರ ಆಕಾಶದಲ್ಲಿ ಇರಲೇ ಇಲ್ಲ ಎಂದಾದರೆ ಏನಾಗುತ್ತಿತ್ತು? ಮಗುವಿಗೆ ಊಟ ಮಾಡಿಸಲು 'ಅಮ್ಮಂದಿರು' ಇನ್ನೊಂದಿಷ್ಟು "Creative Idea"ಗಳನ್ನು ಹುಡುಕಬೇಕಿತ್ತು. ಕವಿಗಳಿಗೆ ಕವನ ಬರೆಯಲು ಒಂದಿಷ್ಟು ಸರಕು ಕಡಿಮೆಯಾಗುತ್ತಿತ್ತು. ಪ್ರಿಯತಮೆಯನ್ನು ಚಂದಿರನಿಗೆ ಹೋಲಿಸುವ ಭಾಗ್ಯವನ್ನು ಪ್ರಿಯತಮ ಕಳೆದುಕೊಳ್ಳುತ್ತಿದ್ದ.

ಇದೆಲ್ಲವೂ ಸಾಮಾನ್ಯ ಊಹೆಗಳಾದವು. ಇದೇ ವಿಷಯವನ್ನು ವೈಜ್ಞಾನಿಕವಾಗಿ ಚರ್ಚಿಸಬಹುದು. ಒಂದು ವೇಳೆ ಭೂಮಿಯ ಮೇಲೆ ಏನಾದರೂ ಚಂದಿರನೇ ಇಲ್ಲದಿದ್ದರೆ ಏನಾಗುವುದು ಎನ್ನುವುದು ಒಂದು ಕುತುಹಲಕಾರಿ ಚರ್ಚೆ.

ಮೊದಲಿಗೆ ಒಮ್ಮೆ ಚಂದ್ರನ ಹುಟ್ಟಿದ ಹಿನ್ನೆಲೆಯನ್ನು ಮೆಲುಕು ಹಾಕಿಕೊಳ್ಳೋಣ. ನಮ್ಮ ಭೂಮಿ ಹುಟ್ಟಿದ್ದು 4.56 ಬಿಲಿಯನ್ ವರ್ಷಗಳ ಹಿಂದೆ, ಇದಾದ ನಂತರ ಚಂದ್ರ ಹುಟ್ಟಿದ್ದು ಪ್ರಾರಂಭದಲ್ಲಿ ಸಂಶೋಧನೆಗಳ ಪ್ರಕಾರ ಭೂಮಿ ಹುಟ್ಟಿ 30 ಮಿಲಿಯನ್ ವರ್ಷಗಳ ನಂತರ ಚಂದ್ರ ಹುಟ್ಟಿದ. ಪ್ರಾರಂಭದಲ್ಲಿ ಭೂಮಿಯು ಈಗಿರುವ ರೀತಿಯಲ್ಲಿ ಇರಲಿಲ್ಲ. ಅದು "ಮ್ಯಾಗ್ಮಾದ" ಸರೋವರವಾಗಿತ್ತು. "ಮ್ಯಾಗ್ಮಾ" ಎಂದರೆ ಈಗ ಭೂಮಿಯಲ್ಲಿ ಭೂಗರ್ಭದಲ್ಲಿ ಮಾತ್ರ ಇರುವ ಸುಡುವ ಗಟ್ಟಿ ದ್ರವ. ವಿಜ್ಞಾನಿಗಳು ಮಂಡಿಸುವ ವಾದದ ಪ್ರಕಾರ ಆ ಸಮಯದಲ್ಲಿ ಮಂಗಳ ಗ್ರಹದಷ್ಟು ದೊಡ್ಡದಾದ ವಸ್ತುವೊಂದು ಒಮ್ಮೆ ಭೂಮಿಗೆ ಬಂದು ಅಪ್ಪಳಿಸಿತು. ಈ ರಭಸಕ್ಕೆ ಭೂಮಿಯಲ್ಲಿದ್ದ ಮ್ಯಾಗ್ಮಾದ ಕೆಲ ಭಾಗವು ಹೊರಚಿಮ್ಮಿ ಭೂಮಿಯ ಕಕ್ಷೆಯಲ್ಲಿ ಸೇರಿಕೊಂಡಿತು. ಕ್ರಮೇಣ ಈ ವಸ್ತುವು ಚಂದ್ರನಾಗಿ ಮಾರ್ಪಾಡಾಯಿತು. ಚಂದ್ರ ಹುಟ್ಟಿದಾಗ ಆತ ಭೂಮಿಗೆ ಅತಿ ಹತ್ತಿರದಲ್ಲಿ ಅಂದರೆ ಸುಮಾರು 20–30 ಸಾವಿರ kmಗಳಷ್ಟು ದೂರದಲ್ಲಿದ್ದ ನಂತರ ಕ್ರಮೇಣ ದೂರ ಸರಿದ ಈಗ 3,80,000 km ದೂರದಲ್ಲಿದ್ದಾನೆ.

ಚಂದ್ರ ಭೂಮಿಯ ಉಪಗ್ರಹ. ನಮಗೆ ತಿಳಿದಿರುವ ಹಾಗೆ ಭೂಮಿಯು ತನ್ನ ಅಕ್ಷದಲ್ಲಿ ಸುತ್ತುತ್ತಾ ಸೂರ್ಯನ ಸುತ್ತಲೂ ಸುತ್ತುತಿರುತ್ತದೆ. ಭೂಮಿಯ ಚಲನೆಯು ಅದರ ಅಕ್ಷದಲ್ಲಿ ಸ್ಥಿರವಾಗಿಡುವ ಕೆಲಸವನ್ನು ಚಂದ್ರ ಮಾಡುತ್ತಾನೆ. ಭೂಮಿಗೆ ಚಂದ್ರನಂತಹ ಉಪಗ್ರಹ ಇರದಿದ್ದರೆ ಅದರ ಚಲನೆಯಲ್ಲಿ ಸ್ಥಿರತೆ ಇರುತ್ತಿರಲಿಲ್ಲ. ಹಾಗಾದಾಗ ವಿಪರೀತ ಭೌಗೋಳಿಕ ವೈಪರಿತ್ಯಗಳು ಉಂಟಾಗುವ ಸಾಧ್ಯತೆಗಳಿದ್ದವು.

ಉದಾಹರಣೆಗೆ ಸಮಭಾಜಕ ರೇಖೆಯ ಹತ್ತಿರ ಬರುವ ಸಾಧ್ಯತೆಯು ಇತ್ತು. ಹಾಗಾದಾಗ ಜೀವಿಗಳು ಬದುಕುವುದು ಕಷ್ಟವಾಗುತ್ತಿತ್ತು. ಚಂದ್ರನಿರುವ ಕಾರಣ ಈಗ ಭೂಮಿಯಲ್ಲಿ ಈ ಅಪಾಯವಿಲ್ಲ. ಜೊತೆಗೆ ಭೂಮಿಯಲ್ಲಿ ವಿಪರೀತ ಹವಾಮಾನ ವೈಪರಿತ್ಯಗಳು ಉಂಟಾಗದೆ ಇರುವುದಕ್ಕೂ ಚಂದ್ರನೆ ಕಾರಣ.

**ಉದಾಹರಣೆ:**– ಉಷ್ಣಾಂಶದಲ್ಲಿ ಒಮ್ಮೆಲೆ ವಿಪರೀತ ಏರಿಕೆಯಾಗುವುದು ಅಥವಾ ತೀವ್ರ ಕುಸಿತ ಕಾಣುವುದು ಇವು ಭೂಮಿಯ ಮೇಲೆ ಸಂಭವಿಸುವುದು ಕಡಿಮೆ ಭೂಮಿಯನ್ನು ಹೊರತುಪಡಿಸಿ ಹಲವಾರು ಗ್ರಹಗಳಲ್ಲಿ ನಾವು ಈ ವೈಪರಿತ್ಯವನ್ನು ಕಾಣಬಹುದು. ಈ ಕಾರಣದಿಂದಾಗಿ ನಮ್ಮಲ್ಲಿ ಬಹುಕೋಶಿಯ ಜೀವಿಗಳ ಉಗಮವಾಗಿತ್ತು. ಸಾಗರದ ವಾತಾವರಣದ ಮೇಲೆ ಚಂದ್ರನು ತುಂಬ ಸೂಕ್ಷ್ಮವಾದ ಪರಿಣಾಮಗಳನ್ನು ಬೀರುತ್ತಾನೆ. ನಿಮಗೆ ತಿಳಿದಿರುವ ಹಾಗೆ ಅಮಾವಾಸ್ಯೆಯಿಂದ ಹುಣ್ಣಿಮೆಯ ದಿನಗಳಲ್ಲಿ ಸಮುದ್ರದ ಉಬ್ಬರ ಮತ್ತು ಅಲೆಗಳ ಏರಿಳಿತಗಳಲ್ಲಿ ಬಹಳಷ್ಟು ವ್ಯತ್ಯಾಸ ಉಂಟಾಗುತ್ತದೆ. ಒಂದು ವೇಳೆ ಚಂದಿರ ಇರದಿದ್ದರೆ "ಅಲೆಗಳ ಏರಿಳಿತ" ಸಾಧ್ಯವಾಗುತ್ತಿರಲಿಲ್ಲ.

ಒಟ್ಟಾರೆ ಭೂಮಿಯ ಮೇಲೆ ಜೀವಿಗಳ ಉಗಮದಲ್ಲಿ ಚಂದ್ರ ಬಹಳ ಪಾತ್ರವಹಿಸಿದ್ದಾನೆ. ಮುಖ್ಯವಾಗಿ ಬಹುಕೋಶಿಯ ಜೀವಿಗಳ ಉಗಮ ಸಾಧ್ಯವಾದದ್ದು ಚಂದ್ರನಿಂದಲೇ ಎನ್ನಬಹುದು. ಆದ್ದರಿಂದ ಒಂದು ವೇಳೆ ಚಂದಿರ ಇಲ್ಲದೆ ಇದ್ದರೆ ನಾವು ಮತ್ತು ನೀವು ಬಹುಶಃ ಇಲ್ಲಿರುತ್ತಿರಲಿಲ್ಲ.

## ಮಳೆರಾಯನಿಗೆ ಮೊರೆ

ಪದ್ಮಪ್ರಿಯ
ದ್ವಿತೀಯ ಬಿ.ಕಾಂ.

ಬಾರೋ ಬಾರೋ ಮಳೆರಾಯ
ಮರ್ತ್ಯಕೇ ಇಳಿಯೋ ಮಹನೀಯ ॥
ನೀನು ಬಂದರೆ ಭೂಮಿ ಹಸಿರು
ಸ್ಥಿರವಾಗುವುದು ಜೀವಿಗಳ ಉಸಿರು
ಸುರಿಸಿದರೆ ತಂಪಾದ ನೀರು
ಹರಿಯುವವು ಹೊಳೆ ಹಳ್ಳ ಜೋರು ॥
ಬಾರದಿರೆ ನೀನು ಬರಗಾಲ
ಅನ್ನ, ನೀರು ಸಿಗದೆ ಅಳಿಗಾಲ
ರೈತ ಮಾಡುವನು ಎಲ್ಲ ಕಡೆ ಸಾಲ
ಕೊನೆಗೆ ಬರುವುದು ಕೊರಳಿಗೆ ಶೂಲ ॥
ಪಶುಗಳಿಗಿಲ್ಲ ತಿನ್ನಲು ಮೇವು
ಅನುಭವಿಸುವವು ಮೂಕ ನೋವು
ಕಸುವು ಇಲ್ಲದೆ ದನಗಳ ಸಾವು
ರೈತರ ಬಾಳಿನಲಿ ಬರೀ ನೋವು ॥
ಖಾಸಗಿಯವರಲಿ ಮಾಡಿದ ಸಾಲ
ಅಸಲು ಬಡ್ಡಿ ಸೇರಿ ಆಗಿದೆ ಹನುಮಂತನ ಬಾಲ
ಹೇಳತೀರದು ಮಧ್ಯವರ್ತಿಗಳ ಮೋಸದ ಜಾಲ
ಎಂದು ಬರುವುದೋ ರೈತರ ಬದುಕಿಸುವ ಕಾಲ? ॥



## ಗಾಂಧೀಜಿ

ಎನ್. ಗೀತಾಂಜಲಿ
ದ್ವಿತೀಯ ಬಿ.ಎ. [ಹೆಚ್.ಇ.ಕೆ.]

**ಗಾಂ** : ಗಾಂಭೀರ್ಯ ನಡೆಯುಳ್ಳ
**ಧೀ** : ಧೀಮಂತ ವ್ಯಕ್ತಿ ಎನಿಸಿದ
**ಜೀ** : ಜೀವನಕ್ಕೆ ಅಳವಡಿಸಿಕೊಳ್ಳುವ ಸೂತ್ರಗಳನ್ನು
ಜಾರಿಗೆ ತಂದ ಮಹಾತ್ಮ



## ಆದರ್ಶ ಅಧ್ಯಾಪಕ

ಮಗುವೆಂಬ ಹೊಕ್ಕೆ
ಶಾಲೆಯೆಂಬ ಬೇಲಿ ಹಾಕಿ
ಬೋಧನೆ ಎಂಬ ನೇಗಿಲಿನಿಂದ ಉತ್ತಿ
ಅಕ್ಷರವೆಂಬ ಬೀಜ ಬಿತ್ತಿ
ನೀತಿ ನಿಯಮಗಳ ನೀರು ಹಾಯಿಸಿ
ಸುಜ್ಞಾನ ಶಿಕ್ಷಣದಿಂದ ಹದಮಾಡಿ
ಅಜ್ಞಾನ ಕಳೆಯನ್ನು ಕಿತ್ತು
ಆಲಸ್ಯ, ಸೋಮಾರಿತನಗಳೆಂಬ ರೋಗಗಳಿಗೆ
ಚಟುವಟಿಕೆಯೆಂಬ ಔಷಧಿ ಸಿಂಪಡಿಸಿ
ಚೈತನ್ಯ ಪೂರ್ಣ ಸತ್ಪ್ರಜೆ ಎಂಬ
ಬೆಳೆಯನ್ನು ಬೆಳೆಯುವ ನವಸಮಾಜದ
ಸೃಷ್ಟಿ ಕರ್ತನಾದ ಕೃಷಿಕನೆಂದರೆ
ಅವರೇ ಅಧ್ಯಾಪಕ

# ಇಂದಿನ ಯುಗಕ್ಕೆ ಹಣ ಮುಖ್ಯವೋ? ಶಿಕ್ಷಣ ಮುಖ್ಯವೋ?



ಗೀತಾಂಜಲಿ ಎನ್.
ದ್ವಿತೀಯ ಬಿ.ಎ.[ಹೆಚ್.ಇ.ಕೆ.]

ಹಣ ಎಂಬ ಎರಡಕ್ಷರದಲ್ಲಿ ಎಂತಹ ಶಕ್ತಿ ಅಡಗಿದೆ ಅದೇ ರೀತಿಯಲ್ಲಿ 'ಸ್ನೇಹ' ಎಂಬ ಎರಡಕ್ಷರದಲ್ಲಿ ಮತ್ತು ಶಿಕ್ಷಣದ ಅಧಿಪತಿಯಾಗಿರುವ 'ಗುರು' ಎಂಬ ಎರಡಕ್ಷರ ದಲ್ಲಿಯೂ ಎಲ್ಲ ಶಕ್ತಿಯೂ ಅಡಗಿವೆ. ಸ್ನೇಹ ಮತ್ತು ಗುರುಗಳಿಗಿಂತ ಹಣವೇ ಮುಖ್ಯ ಎಂದು ಹೇಳುವ ಈ ಕುರುಡು ಸಮಾಜಕ್ಕೆ ನಾನು ಯಾವ ಕಹಳೆಯನ್ನು ಊದಲಿ.

"ಹಣ ಎಂದೊಡನೆ ಹೆಣವೂ ಬಾಯಿ ಬಿಡುತ್ತದೆ" ಎಂಬ ಗಾದೆ ಮಾತು ಸತ್ಯವಾದರೂ ನಾವು ನೀವು ಗಾದೆಗಳಿಗೆ ಒತ್ತುಕೊಟ್ಟು ಎಲ್ಲಾ ವಿಧದಲ್ಲಿಯೂ ಮುಂದು ವರಿಯುತ್ತಿರುವ ಇಂದಿನ ಯುಗದಲ್ಲಿ ಹಣವನ್ನು ಮೇಲೆ ಮಾಡುವುದು ಸಮಂಜಸವಲ್ಲ.

ಆಂಗ್ಲ ಭಾಷೆಯ ಗಾದೆಯಾದ "Man made money but money did not make man" ಎಂಬಂತೆ ಮನುಷ್ಯನ ಅಗಾಧ ಜ್ಞಾನ ಶಕ್ತಿ ಎಲ್ಲಿ? ಹಣವೆಲ್ಲಿ? ಎಂದು ಕೆಲವರು ಹೇಳುತ್ತಾರೆ: ಯಾವುದಾದರೊಬ್ಬ ವ್ಯಕ್ತಿ ಖಾಸಗಿಯಾಗಿ ವಿದ್ಯೆ ಕಲಿಯಬೇಕಾದ್ದಲ್ಲಿ ಅಥವಾ ಉದ್ಯೋಗ ಪಡೆಯಬೇಕಾದ್ದಲ್ಲಿ ಹಣ ಕೇಳುತ್ತಾರೆ. ಹಣವಿಲ್ಲದಿದ್ದಲ್ಲಿ ವಿದ್ಯಾಭ್ಯಾಸವಿಲ್ಲ ಮತ್ತು ಉದ್ಯೋಗವಿಲ್ಲ. ಇದಕ್ಕೆ ಒಂದು ಸಂದರ್ಭ ತಿಳಿಯೋಣ. ನಾನು ಪಿಯುಸಿ ತರಗತಿಯನ್ನು ಓದುತ್ತಿದ್ದ ವೇಳೆಯಲ್ಲಿ ನಾನು ಮತ್ತು ನನ್ನ ಜೊತೆಗಾತಿ ಖಾಸಗಿ ಶಾಲೆಯಲ್ಲಿ ಓದುತ್ತಿದ್ದೆವು. ನನ್ನ ಪ್ರೀತಿಯ ಸ್ನೇಹಿತೆ ಆರ್ಥಿಕವಾಗಿ ತುಂಬ ಹಿಂದಿದ್ದಳು. ಆದರೆ ಅವಳು ಬುದ್ಧಿವಂತಿಕೆಯಲ್ಲಿ ಮತ್ತು ಗುಣದಲ್ಲಿ ನಾನು ಮತ್ತು ನಮ್ಮ ಇತರ ಸ್ನೇಹಿತರಿಗಿಂತ ಇಡೀ ಸಂಸ್ಥೆಗೆ ಸಿರಿವಂತಳಾಗಿದ್ದಳು. ಅವಳ ಈ ನಡತೆಯನ್ನು ನೋಡಿ ಬೆನ್ನು ತಟ್ಟುತ್ತಿದ್ದರು. ಹೀಗೆ ಮುಂದಿನ ವರುಷ ಶಾಲೆಗೆ ಪ್ರವೇಶ ಪಡೆಯಲು ನನ್ನ ಸ್ನೇಹಿತೆಗೆ ಹಣದ ಕೊರತೆ ಇತ್ತು. ಅವಳು ವಿದ್ಯೆಯನ್ನು ಮೊಟಕುಗೊಳಿಸುವ ಚಿಂತೆಯಲ್ಲಿದ್ದಳು. ಆಗ ನನ್ನ ಸ್ನೇಹಿತೆಗೆ ಅಭಯ ಹಸ್ತವನ್ನು ನೀಡಿದವರು ಮತ್ತ್ಯಾರು ಅಲ್ಲ ಆ ಶಾಲೆಯ ಮುಖ್ಯಸ್ಥರು, ಅವಳಲ್ಲಿದ್ದ ಒಳ್ಳೇಯ ಗುಣ, ಒಳ್ಳೇಯ ನಡತೆ, ಒಳ್ಳೇಯ ಸ್ವಭಾವ ಹಾಗೂ ಶಾಲೆಯ ಉತ್ತಮ ವಿದ್ಯಾರ್ಥಿನಿ ಆಗಿದ್ದ ಕಾರಣದಿಂದ.

ಒಳ್ಳೆಯ ನಡತೆ, ಒಳ್ಳೆಯ ಗುಣಗಳು ಹಣವನ್ನು ಗೆಲ್ಲುತ್ತದೆ ಎಂಬುದನ್ನು ತಿಳಿದುಕೊಂಡಳು. ಅಷ್ಟೇ ಏಕೆ? ನಾವು ದಿನನಿತ್ಯ ರಸ್ತೆಯಲ್ಲಿ ನೋಡುತ್ತಿರುವ ಆಕೃತಿಗಳು (ಕಟ್ಟಡಗಳು ಬಣ್ಣ ಫಲಕಗಳು ಆಕೃತಿಯ ಚಿತ್ರಗಳು, ಶಿಲ್ಪ ಕಲೆಗಳು ಇತ್ಯಾದಿ) ಯಾರಿಂದ ಸೃಷ್ಟಿ ಆದವು? ನಾವು ನೋಡುತ್ತಿರುವ ದೂರದರ್ಶನ (TV) ವಾಗಲೀ ನಾವು ಕೇಳುತ್ತಿರುವ ರೇಡಿಯೋ ಆಗಲೀ ದೂರವಾಣಿಯಾಗಲೀ, ಕಂಪ್ಯೂಟರ್ ಆಗಲೀ ವಿಮಾನಗಳಾಗಲೀ ಇವುಗಳನ್ನು ಕಂಡು ಹಿಡಿದವರು ಹಣವಂತರಲ್ಲ ಗುರುವಿನ ವಿದ್ಯೆಯನ್ನು ಪಡೆದ ವಿದ್ಯಾವಂತರು.

ಮಾನವ ಸಂಘ ಜೀವಿ ನಿಜ. ಆದರೆ ಅವನಿಗೆ ಯಾವ ಸಮಯದಲ್ಲಾಗಲೀ ಅವನನ್ನು ಬದುಕಿಸುವುದು, ಹಣವಲ್ಲ? ಮಾನವ ತನ್ನ ಬುದ್ಧಿ ಶಕ್ತಿಯಿಂದ ಜೀವನದಲ್ಲಿ ಕಲಿತಿರುವ ವಿದ್ಯೆ ಎಂದರೆ ವೈದ್ಯಕೀಯ ಶಿಕ್ಷಣ ಅಷ್ಟೇ ಮಾತ್ರ ಯಾಕೆ? ಇಡೀ ಭೂಲೋಕದಲ್ಲಿ ಮಾತ್ರವಲ್ಲದೆ ದೇವ ಮಾನವರಾದ ಹಣದ ದೇವತೆಯಾದ ಲಕ್ಷ್ಮೀಗೂ ಮತ್ತು ವಿದ್ಯಾದೇವತೆಯಾದ ಶಾರದಾಂಬೆಗೂ ಪರಸ್ಪರ ಚರ್ಚೆಯಾಗಿ ಶಾರದಾಂಬೆ ಜಯಶಾಲಿಯಾದ ವಿಚಾರವನ್ನು ಪುರಾಣಗಳಲ್ಲಿ ಓದಿದ್ದೇವೆ.

ಆದರೆ **'ಹಣವೆಂಬುದು ತೃಣ'** ಅದರಿಂದಲೂ ಕೆಲವು ಮಹತ್ವದ ಘಟನೆಗಳು ಸಂಭವಿಸುತ್ತವೆ. ಆದರೆ ನನ್ನ ಪ್ರಕಾರ ವಿದ್ಯೆಗೆ ಹೋಲಿಸಿದ್ದಲ್ಲಿ ಹಣ ನಶ್ವರವಾಗಿದೆ.

# ಯಶಸ್ಸಿನ ಪಂಚಸೂತ್ರಗಳು



ರಮ್ಯ ಎಂ.
ತೃತೀಯ ಬಿ.ಎ. [ಹೆಚ್.ಇ.ಜಿ.]

1) **ಆತ್ಮವಿಶ್ವಾಸ** :

ಯಶಸ್ಸಿನ ಮೊದಲ ಮೆಟ್ಟಿಲೇ ಆತ್ಮವಿಶ್ವಾಸ. ಆತ್ಮವಿಶ್ವಾಸವು ಯಶಸ್ಸಿನ ಕೀಲಿ ಕೈ. ಆತ್ಮವಿಶ್ವಾಸವುಳ್ಳ ಯಾವುದೇ ವ್ಯಕ್ತಿ ಕೆಲಸದಲ್ಲಿ ಯಶಸ್ವಿಯಾಗಬಲ್ಲ. ಇದರ ಕೊರತೆಯಾದರೆ ಜೀವನದಲ್ಲಿ ಏನನ್ನು ಸಾಧಿಸಲಾಗದು. ವಿದ್ಯಾರ್ಥಿಗಳು ನಾನು ಚೆನ್ನಾಗಿ ಅಧ್ಯಯನ ಮಾಡುತ್ತೇನೆ; ಚೆನ್ನಾಗಿ ಪರೀಕ್ಷೆ ಬರೆಯುತ್ತೇನೆ ಎಂಬ ಆತ್ಮವಿಶ್ವಾಸ ವೃದ್ಧಿಸಿಕೊಂಡಾಗ ಅವರು ಪರೀಕ್ಷೆಯನ್ನು ಧೈರ್ಯದಿಂದ ಎದುರಿಸಿ ಪಾಸಾಗುತ್ತಾರೆ. ದುರಹಂಕಾರವು ಆತ್ಮವಿಶ್ವಾಸವಾಗಲಾರದು. ನಿಮ್ಮ ಬಗ್ಗೆ ಮೊದಲು ನಿಮಗೆ ಗೌರವ ಇರಲಿ. ಇನ್ನೊಬ್ಬರಲ್ಲಿರುವ ಗುಣ ನನ್ನಲ್ಲಿಲ್ಲ ಎಂಬ ಕೀಳರಿಮೆ ಬೆಳಸಿಕೊಳ್ಳದೆ ನನ್ನಲ್ಲಿರುವ ಗುಣ ಅವರಲ್ಲಿಲ್ಲ ಎಂಬ ಭಾವನೆಯಿಂದ ಹೆಮ್ಮೆಪಡಿ.

2) **ಪ್ರಾಮಾಣಿಕತೆ** :

ಯಶಸ್ಸಿನ ಎರಡನೇ ಮೆಟ್ಟಿಲು ಪ್ರಾಮಾಣಿಕತೆ. ಕರ್ತವ್ಯದಲ್ಲಿ ಪ್ರಾಮಾಣಿಕತೆ ಬೆಳೆಸಿಕೊಳ್ಳಿ. ನಾನು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂಬ ನಂಬಿಕೆ ಇರಲಿ. ಪಾಸಾಗಬೇಕೆಂದು ಅಡ್ಡ ಮಾರ್ಗ ಹಿಡಿಯದಿರಿ. ಅವು ತಾತ್ಕಾಲಿಕ ಸಂತೋಷ ನೀಡಿದರೂ ಶಾಶ್ವತವಲ್ಲ.

3) **ಶ್ರದ್ಧೆ** :

ಯಶಸ್ಸಿನ ಮೂರನೆಯ ಮೆಟ್ಟಿಲು ಶ್ರದ್ಧೆ. ಮಾಡುವ ಕೆಲಸದಲ್ಲಿ ಶ್ರದ್ಧೆ, ನಂಬಿಕೆ ಇರಲಿ. ಶ್ರದ್ಧೆಯೇ ಯಶಸ್ಸಿನ ಜೀವಾಳ. ಶ್ರದ್ಧೆಯಿಂದ ಓದಿದರೆ ಪಾಸು ಖಚಿತ! ಸಂಕುಚಿತ ಭಾವನೆ ಬಂದರೆ ನೀವು ಖಂಡಿತ ಮುಂದೆ ಬರಲಾರಿರಿ.

4) **ಪರಿಶ್ರಮ** :

ಯಶಸ್ಸಿನ ನಾಲ್ಕನೆಯ ಮೆಟ್ಟಿಲು ಪರಿಶ್ರಮ. ಸತತ ಪರಿಶ್ರಮದಿಂದ ಅಸಾಧ್ಯವಾದುದನ್ನು ಸಾಧ್ಯ ಮಾಡಿ ತೋರಿಸಬಹುದು. ಗುರಿ ಸಾಧಿಸಲು ಪ್ರಯತ್ನ ಪಡದೆ ಯಾರು ಗುರಿ ತಲುಪಲಾರರು. ಆದರೆ ದಡ್ಡನಿಗೂ ಕಷ್ಟಪಟ್ಟು ಸಾಧನೆ ಮಾಡಿದರೆ ಗುರಿ ಮುಟ್ಟಲು ಸಾಧ್ಯ. ಸೋಲು ಬಂದಾಗ ನಿರಾಶರಾಗದಿರಿ, ಸೋಲನ್ನು ಪ್ರಯತ್ನದಿಂದ ಗೆಲುವಿನ ಜೋಪಾನ ಮಾಡಿಕೊಳ್ಳಿ.

5) **ಸಮಯ ಪ್ರಜ್ಞೆ** :

ಯಶಸ್ಸಿನ ಕೊನೆಯ ಮೆಟ್ಟಿಲು ಸಮಯ ಪ್ರಜ್ಞೆ. ಯಾವ ಸಮಯಕ್ಕೆ ಯಾವ ಕೆಲಸ ಮಾಡಬೇಕು ಎಂಬುದರ ತಿಳುವಳಿಕೆ ಅಗತ್ಯ. ಓದುವ ಸಮಯಕ್ಕೆ ಓದಬೇಕು, ಆಡುವ ಸಮಯಕ್ಕೆ ಆಡಬೇಕು.

ಸಮಯದ ಮಹತ್ವವನ್ನು ತಿಳಿದುಕೊಂಡು ಅದನ್ನು ಪ್ರಜ್ಞೆಯಲ್ಲಿಟ್ಟುಕೊಂಡು ಸಮಯಾನುಸಾರ ಕಾರ್ಯ ನಿರ್ವಹಿಸಿದಲ್ಲಿ ಹಿಡಿದ ಕಾರ್ಯದಲ್ಲಿ ಯಶಸ್ಸು ಖಚಿತ. ಸಾಮಾನ್ಯ ಮನುಷ್ಯನು ಮಾಡುವ ಎರಡರಷ್ಟು ಕೆಲಸವನ್ನು ಸಮಯ ಪ್ರಜ್ಞೆಯುಳ್ಳ ವ್ಯಕ್ತಿ ಮಾಡುತ್ತಾನೆ. ಜೀವನದ ಒಂದೊಂದು ನಿಮಿಷವು ಅತ್ಯಮೂಲ್ಯವಾದುದು. ಇಂದಿನ ಕೆಲಸವನ್ನು ನಾಳೆಗೆ ಮುಂದೂಡದೆ ಇಂದೇ ಮಾಡಿ ಮುಗಿಸುವುದು ಸಮಯ ಪ್ರಜ್ಞೆಯ ಲಕ್ಷಣ.

"ಒಂದೊಂದು ಕ್ಷಣವನ್ನು ಹಾಳುಮಾಡದೆ ವಿದ್ಯೆಯನ್ನು, ಹಾಗೂ ಒಂದೊಂದು ಕ್ಷಣವನ್ನು ಹಾಳುಮಾಡದೆ ಸಂಪತ್ತನ್ನು ಗಳಿಸಬೇಕು. ಕಳೆದು ಹೋದ ಕಾಲ ಹಾಗೂ ವ್ಯರ್ಥವಾದ ಸಂಪತ್ತು ಮತ್ತೆ ಸಿಗುವುದಿಲ್ಲ."

# ಅಮ್ಮ ಸಹನಾಮೂರ್ತಿ





ಪದ್ಮಪ್ರಿಯ
ದ್ವಿತೀಯ ಬಿ.ಕಾಂ.

ಅಮ್ಮ ಎಂದರೆ ಕೇವಲ ಅಡುಗೆ ಮಾಡುವುದಕ್ಕೆ, ಗಂಡ ಮಕ್ಕಳು ಮನೆ ನೋಡಿಕೊಳ್ಳುವುದಕ್ಕೆ ಇರುತ್ತಾಳೆ ಎಂಬ ನಂಬಿಕೆ ಅನೇಕರದ್ದು. ಆದರೆ ಅಮ್ಮ ಎಲ್ಲದಕ್ಕೂ ಮುಖ್ಯ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಕೆಲವು ಮಕ್ಕಳು ಅಮ್ಮನನ್ನು ಕೇವಲವಾಗಿ ನೋಡುತ್ತಾರೆ. ಅಮ್ಮನನ್ನು ಕೋಪದಿಂದ ಬೈದು ಮನೆಯಿಂದ ಹೊರಹಾಕುವ ಬಗ್ಗೆಯೂ ಯೋಚಿಸುತ್ತಾರೆ. ಅಮ್ಮನ ಬದಲು ಕೆಲಸದವರನ್ನು ಇಟ್ಟುಕೊಳ್ಳುತ್ತೇವೆ ಎಂದು ಗರ್ವದಿಂದ ಹೇಳಿ ಕೆಲಸದವರನ್ನು ಇಟ್ಟುಕೊಳ್ಳುತ್ತಾರೆ.

ಕೆಲಸದವರು ಮನೆಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬಹುದು, ರುಚಿಯಾಗಿ ಅಡುಗೆಯನ್ನು ಮಾಡಿ ಹಾಕಬಹುದು. ಆದರೆ ಮಕ್ಕಳಿಗೆ ಕೈತುತ್ತು ಹಾಕಿ ಊಟ ಮಾಡಿಸುವುದಿಲ್ಲ, ಪ್ರೀತಿಯಿಂದ ನೋಡಿಕೊಳ್ಳುವುದಿಲ್ಲ, ಕಥೆ ಹೇಳುವುದಿಲ್ಲ ಯಾಕೆ ಹೇಳಿ? ಕೆಲಸದವರು ಅಮ್ಮನ ಸ್ಥಾನ ತುಂಬಲು ಸಾಧ್ಯವಿಲ್ಲ.

ಮಕ್ಕಳು ಏನೇ ಅಂದರೂ ಮನಸ್ಸಿಗೆ ನೋವಾಗುವಂತೆ ನಡೆದುಕೊಂಡರೂ ತಾಯಿ ತನ್ನ ಮಕ್ಕಳ ಮೇಲೆ ಯಾವತ್ತೂ ಕೋಪ ಮಾಡಿಕೊಳ್ಳುವುದಿಲ್ಲ. ನಾವು ಅಮ್ಮನ ಮೇಲೆ ಕೋಪ ಮಾಡಿಕೊಳ್ಳಬಾರದು. ಅವಳು ಏನೇ ಮಾಡಿದರೂ ನಮ್ಮ ಒಳ್ಳೆಯದಕ್ಕೆ ಮಾಡುತ್ತಾಳೆ. ನಾವು ಇನ್ನೊಂದು ಸಾರಿ ತಪ್ಪು ಮಾಡಬಾರದೆಂಬುದು ಅವಳ ಉದ್ದೇಶವಾಗಿರುತ್ತದೆ.

ಅಮ್ಮ ಸಹನಾ ಮೂರ್ತಿ. ಅವಳು ಊಟ ಮಾಡುತ್ತಿರುವಾಗ, ನಿದ್ದೆ ಮಾಡುತ್ತಿರುವಾಗ ಅಥವಾ ಇನ್ನಾವುದೇ ಸಮಯದಲ್ಲಾದರೂ ಮಗು ಅತ್ತರೆ ಅದಕ್ಕೆ ಹಾಲುಣಿಸಿ ಉಪಚರಿಸುತ್ತಾಳೆ. ಎತ್ತಿಕೊಂಡು ಸುತ್ತಾಮುತ್ತಾ ತಿರುಗಾಡಿಸಿ ಸಮಾಧಾನಪಡಿಸಿ ಮಗು ಮಲಗಿದ ನಂತರವೇ ಅವಳು ನಿದ್ದೆ ಮಾಡುತ್ತಾಳೆ. ಮಗು ಅಳುವುದರಿಂದ ಸರಿಯಾಗಿ ಊಟ ಮಾಡುವುದಕ್ಕೂ ಆಗುವುದಿಲ್ಲ ಎಂದು ಮಗುವನ್ನು ಹೊಡೆಯುವುದಿಲ್ಲ. ಒಂದು ವೇಳೆ ಹಾಗೇ ವರ್ತಿಸಿ ಕೆಲ ಹೊತ್ತು ಮಾತ್ರ ತಾಯಿ ಹೃದಯ ಮಂಜಿನಂತೆ. ಬಹು ಬೇಗ ಕೋಪ ಕರಗಿ ಹೋಗುತ್ತದೆ. ಜಗತ್ತಿನಲ್ಲಿ ಕೆಟ್ಟ ಮಕ್ಕಳಿರುತ್ತಾರೆಯೇ ಹೊರತು ಕೆಟ್ಟ ತಾಯಿ ಇರುವುದಿಲ್ಲ. ನಾನು ನನ್ನ ಅಮ್ಮನನ್ನು ತುಂಬಾ ಪ್ರೀತಿಸುತ್ತೇನೆ. ನೀವು ನಿಮ್ಮ ಅಮ್ಮನನ್ನು ಪ್ರೀತಿಸಿ ದಿನದ 24 ಗಂಟೆಗಳಲ್ಲಿ ಅಮ್ಮನಿಗಾಗಿ ಒಂದು ಗಂಟೆಯಾದರೂ ಮೀಸಲಿಡಿ. ಅಮ್ಮ ಅಪ್ಪನ ಮನಸ್ಸಿಗೆ ನೋವುಂಟು ಮಾಡಬೇಡಿ.

# ಯೋಧ ಮತ್ತು ಇಂದಿನ ಯುವ ಜನತೆ





ದೀಪ ಸಿ.
ದ್ವಿತೀಯ ಬಿ.ಎ. [ಹೆಚ್.ಇ.ಕೆ.]

ಒಂಭತ್ತು ಸ್ನೇಹಿತರು ದೇಶ ಕಾಯುತ್ತ ಕಾಯುತ್ತ ಮಂಜಿನ ಪರ್ವತದಡಿ ಪ್ರಾಣಾರ್ಪಣೆ ಮಾಡಿದರೆ ಕೊನೆಯವರಾಗಿ ಹನುಮಂತಪ್ಪ ಸೇರಿಕೊಂಡರು. ಪ್ರತಿಕೂಲ ಪರಿಸ್ಥಿತಿಯಲ್ಲೂ ಮೆಲ್ಲಗೆ ಮಿಡಿಯುತ್ತಿದ್ದ ದೇಶ ಪ್ರೇಮವನ್ನು ತುಂಬಿಕೊಂಡಿದ್ದ ಹನುಮಂತಪ್ಪನವರ ಹೃದಯ ಕೋಟ್ಯಾಂತರ ಮನಸುಗಳನ್ನು ಕರಗಿಸಿತು. ಬದುಕನ್ನು ಹೊಸ ದೃಷ್ಟಿಕೋನದಿಂದ ನೋಡುವ ಹುಮ್ಮಸ್ಸನ್ನು ಹೆಚ್ಚಿಸಿತು.

ನೂರ ನಲವತ್ನಾಲ್ಕು ಗಂಟೆಗಳ ಕಾಲ ಅಕ್ಷರಶಃ ಪೂರ್ಣವಾಗಿ ಹಿಮದ ಪದರವನ್ನು ಹೊದ್ದು ಮಲಗಿದ್ದ ಯೋಧರ ಮೈ ಮೇಲಿಂದ ಅದು ಸರಿದ ಕೂಡಲೇ ತಲೆಯೆತ್ತಿದ್ದ ದೃಶ್ಯ ನೋಡುತ್ತಿದ್ದಂತೆ ಎದೆ ಬಡಿತ ನಿಂತಂತೆ ರೋಮಾಂಚನಗೊಂಡೆ. ಜೊತೆಗೆ ಗೊತ್ತೇ ಆಗದಂತೆ ಕಣ್ಣೀರಿನ ಹನಿ ಕೆನ್ನೆಯ ಮೇಲೆ ಹೊಳೆಯಾಗಿ ಹರಿಯುತ್ತಿತ್ತು. ಉದ್ಯೋಗದ ಅವಧಿಯಲ್ಲಿ ಮಾಡುವ ಕೆಲಸ ಬಿಟ್ಟು ಕಾಲೇಜಿನಲ್ಲಿ ಕ್ಲಾಸ್‌ಗೆ ಹೋಗದೆ, ಫೇಸ್ ಬುಕ್‌ನಲ್ಲೋ, ವಾಟ್ಸ್‌ಆ್ಯಪ್‌ನಲ್ಲೋ, ಮತ್ತೊಂದರಲ್ಲೋ ಮತ್ತೊಬ್ಬರ ಮೇಲೆ ವಿಷಕಾರುವ ಸಣ್ಣ ಸಣ್ಣ ಕಾಮೆಂಟುಗಳಿಗೋ ಗಂಟೆಗಟ್ಟಲೆ ಬಡಿದಾಡುವ, ಕಛೇರಿಯಲ್ಲಿ ವೈ-ಫೈ-ಕನೆಕ್ಟ್ ಆಗದಿದ್ದರೆ, ಫೋನಲ್ಲಿ ನೆಟವರ್ಕ್ ಸಿಗದಿದ್ದರೆ, ಯಾವುದೋ ಕಾಲ್ ಬರಲು ತಡವಾದಾಗ ಪ್ರಾಣ ಹೋದಂತೆ ಚಡಪಡಿಸುವ, ಬಸ್ಸ್ ಹತ್ತು ನಿಮಿಷ ತಡವಾಗಿ ಬಂದಾಗ, ಟ್ರಾಫಿಕ್‌ನಲ್ಲಿ ಹಸಿರು ದೀಪ [ಗ್ರೀನ್ ಸಿಗ್‌ನಲ್] ಬಂದ ತಕ್ಷಣ ಮುಂದಿರುವ ಗಾಡಿ ಚಾಲಕನು ಚಾಲನೆ ಮಾಡಲು ಹತ್ತು ಸೆಕೆಂಡು ಹೆಚ್ಚು ಸಮಯ ತೆಗೆದುಕೊಂಡರೆ ಕಿವಿ ತೂತಾಗುವಂತೆ ಹಾರ್ನ್ ಮಾಡುವ, ಐದನೇ ತರಗತಿಯ ಮಗಳು ಸಹಪಾಠಿಗಿಂತ ಒಂದು ಮಾರ್ಕ್ಸ್ ಕಡಿಮೆ ತೆಗೆದಿದ್ದಕ್ಕೆ ಒತ್ತಡದಲ್ಲಿ ರಾತ್ರಿ ನಿದ್ರೆ ಬಿಟ್ಟು ಮರುದಿನ ತಲೆ ನೋವಿನಿಂದ ನರಳುವ ನಾವು ಮತ್ತು ನಮ್ಮಂತೆ ಮನಸ್ಥಿತಿ ಉಳ್ಳ ಬಹುಸಂಖ್ಯಾತ ಜನರ ಸಮಸ್ಯೆಯಾಗಿದೆ.

ಅಷ್ಟೆ ಅಲ್ಲ ಹತ್ತು ದಿನ ಅಥವಾ ಎರಡು ತಿಂಗಳಿಂದ ಮೆಸೇಜ್ ಮಾಡಿದವರು ಅಮರ ಪ್ರೇಮಿಯಾಗಿ ಅದನ್ನು ವಿರೋಧಿಸಿದ ಅಪ್ಪ-ಅಮ್ಮ ವಿಲನ್‌ಗಳಾಗಿ ಕಂಡು ಅವರಿಗೆ ಬುದ್ಧಿ ಕಲಿಸಲು "ವಿಷ ಕುಡಿದೊ, ನೀರಿಗೆ ಬಿದ್ದೊ, ಫ್ಯಾನಿಗೆ ನೇತಾಡುವ" ಹದಿಹರೆಯದವರ ಮೂರ್ಖ ಹುಡುಗ-ಹುಡುಗಿಯರು. ವೈದ್ಯಕೀಯ ಸ್ನಾತಕೋತ್ತರ ಸೀಟು ಸಿಗದಿದ್ದಕ್ಕೆ ರೈಲಿಗೆ ತಲೆಕೊಟ್ಟಿದ್ದು, ಮುಖದಲ್ಲೊಂದು ಮೊಡವೆ ಆಗಿದ್ದಕ್ಕೆ ನಾಯಕಿ ಕಾಲೇಜಿಗೆ ಹೋಗದ ಚಿಕ್ಕ ವಯಸ್ಸಿನಲ್ಲಿ ನೋಡಿದ ಚಲನಚಿತ್ರ ನೆನಪೂ ಆಯಿತು!

ಸ್ವಲ್ಪ ಯೋಚಿಸೋಣ "ಒಬ್ಬ ವೀರ ಯೋದ ಇಪ್ಪತ್ತು ಸಾವಿರದ ಐನೂರು ಅಡಿ ಎತ್ತರದಲ್ಲಿ, ಮೈನಸ್ 55-60 ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶದಲ್ಲಿ ಇಪ್ಪತ್ತೈದು ಅಡಿ ಹಿಮದ ಕೆಳಗೆ ಸಿಕ್ಕಿ ಹಾಕಿಕೊಂಡೂ ತನ್ನ ಇಚ್ಛಾ ಶಕ್ತಿಯಿಂದ ಬದುಕಿರುತ್ತಾರೆ". ಆದರೆ ನಾಳ್ಕೇ ದಿನಕ್ಕೆ ಮರೆತು ಹೋಗುವ ಚಿಕ್ಕ ಪುಟ್ಟ ಕಾರಣಕ್ಕಾಗಿ ಯುವಕರು ಯುವತಿಯರು ಆತ್ಮಹತ್ಯೆಗೆ ಶರಣಾಗುತ್ತಾರೆ.

ಬಹುಶಃ ಇದಕ್ಕಿಂತ ದೊಡ್ಡ ದುರಂತ ಮತ್ತೊಂದು ಇರಲಾರದು. ಆರು ದಿನ ಬದುಕಿಗಾಗಿ ಹನುಮಂತಪ್ಪ ಅವರ ಹಿಮದಡಿಯ ಹೋರಾಟ "ಭಾರತೀಯ ಸೈನಿಕರ

ಮನೋಬಲಕ್ಕೊಂದು ಗಟ್ಟಿಯಾದ ಸಾಕ್ಷಿ".

ಒಂಭತ್ತು ಸೈನಿಕರೊಡನೆ ದೇಶ ಕಾಯುತ್ತ ಮಂಜಿನ ಪರ್ವತದಡಿ ಪ್ರಾಣಾರ್ಪಣೆ ಮಾಡಿದರೆ ಕೊನೆಯವರಾಗಿ ಪ್ರತಿಕೂಲ ಪರಿಸ್ಥಿತಿಯಲ್ಲಿ ಅವರನ್ನು ಸೇರಿಕೊಂಡು "ಯೋದರು ಬೆನ್ನಿಗೆ ಕಟ್ಟಿಕೊಳ್ಳುವ ಆಕ್ಸಿಜನ್ ಸಿಲಿಂಡರ್ 200 ಲೀಟರ್ ಸಾಮರ್ಥ್ಯದಾಗಿದ್ದು 45 ನಿಮಿಷ ಮಾತ್ರ ಅದನ್ನು ಬಳಕೆ ಮಾಡಬಹುದು. ಆದರೆ ಹನುಮಂತಪ್ಪ ಕೊಪ್ಪದ 6 ದಿನಗಳ ಕಾಲ ಹಿಮದ ರಾಶಿಯಡಿ ಬದುಕಿದ್ದು ಮಾತ್ರ ವಿಜ್ಞಾನಕ್ಕೂ ನಿಲುಕದ ಅದ್ಭುತ ಸತ್ಯವಾಗಿದೆ". ಪರ್ವತವಾಗಿಸುವ ಬಹುತೇಕ ಜನರು ಎವರೆಸ್ಟ್ ಅನ್ನೋ ಎವರೆಸ್ಟ್‌ಗೇ ಸವಾಲು ಹಾಕಿದ ಹನುಮಂತಪ್ಪ ಅವರ ಮುಂದೆ ಸಣ್ಣವರು ನಾಚಿ ತಲೆ ತಗ್ಗಿಸಬೇಕಾಗಿದೆ. ಯಾವುದಾದರೂ ಕೆಲಸ ಮಾಡಬೇಕಾದರೆ ಅದರಲ್ಲಿ ಅತ್ಯಂತ ಸುಲಭವಾದುದನ್ನು ಆಯ್ಕೆ ಮಾಡಿಕೊಳ್ಳುವ ನಮಗೂ ಆಯ್ಕೆಯ ಮೂಲಕವೇ ಸಾವಿನ ಹೆಬ್ಬಾಗಿಲಿಗೆ ಹೋಗುವ ಇಂತಹ ಸೈನಿಕರಿಗೂ ಎಷ್ಟು ವ್ಯತ್ಯಾಸ? ಸಮಸ್ಯೆಗಳಿಂದ ರಕ್ಷಣೆ ಕೊಡು ಎಂದು ನಾವು ಪ್ರಾರ್ಥನೆ ಮಾಡುವುದು ಬೇಡ, ಆದರೆ ಅವನ್ನು ಎದುರಿಸುವಾಗ ಭಯಪಡದಿರುವಂತೆ ಧೈರ್ಯ ತುಂಬು ಎಂದು ಪ್ರಾರ್ಥಿಸಬೇಕು. "ಸಮಸ್ಯೆ ಬಾರದಿದ್ದರೆ ಒಳ್ಳೆಯದು, ಕೆಟ್ಟ ಪರಿಸ್ಥಿತಿ ಬಾರದಿದ್ದರೆ ಒಳ್ಳೆಯದು" ಎಂದು ಯಾವಾಗಲೂ ಹೇಳಿದ್ದನ್ನೇ ಹೇಳುವವರಿಗೆ ನನ್ನದೊಂದು ಪ್ರಶ್ನೆ? ನಮ್ಮ ಬದುಕಿನ ಪರಿಸ್ಥಿತಿಗಳು ಸಿಯಾಚಿನ್ ಸೋನಂ ಚೆಕ್-ಪೋಷ್ಟನ ಪರಿಸ್ಥಿತಿಗಿಂತ ಭೀಕರವಾಗಿಯೇ?

ಅಷ್ಟಕ್ಕೂ ಕಷ್ಟಗಳೇ ಮನುಷ್ಯನನ್ನು ನಿಜವಾದ ಅರ್ಥದಲ್ಲಿ ಯಶಸ್ಸಿನತ್ತ ಕೊಂಡೊಯ್ಯುತ್ತದೆ. ಕನ್ನಡ ನಾಡು ಕಂಡ ಶ್ರೇಷ್ಠ ಶಿಕ್ಷಣ ತಜ್ಞರಾದ "ಎಚ್ ನರಸಿಂಹಯ್ಯ ನವರ" ಆತ್ಮಕಥೆಯ ಹೆಸರೇ "ಹೋರಾಟದ ಹಾದಿ" ಬಹುತೇಕ ಸಾಧಕರೆಲ್ಲರ ಹಾದಿಯೂ ಹೋರಾಟದ್ದೇ.

"ಜಿರಾಫೆಯ ಕಥೆ ಗೊತ್ತಿರುವುದೇ? ಜಿರಾಫೆಯು ತನ್ನ ಮರಿಗೆ ಆಗ ತಾನೇ ಹುಟ್ಟಿ ಭೂಮಿಯ ಮೇಲೆ ಬಂದಾಕ್ಷಣ ಆಗುವ ಮೊದಲ ಅನುಭವ ಎರಡು ಮೀಟರ್ ಎತ್ತರದಿಂದ ದೊಪ್ಪನೆ ಬಿದ್ದಕ್ಷಣ ಅದರಿಂದ ಚೇತರಿಸಿಕೊಂಡು ಆ ಮರಿ ಏಳುವ ಮರಿಗೆ ತಾಯಿ ಜಿರಾಫೆ ಅದನ್ನು ಒದೆಯುತ್ತದೆ. ಮರಿ ಮತ್ತೆ ಒದ್ದಾಡುವ ಏಳುತ್ತ ಮತ್ತೆ ಅದೇ ರೀತಿ ಹಲವು ಬಾರಿ ಮಾಡಿದ ಜಿರಾಫೆ ಕೊನೆಯ ಬಾರಿ ಮತ್ತೊಮ್ಮೆ ಒದೆಯುತ್ತದೆ. ಅಷ್ಟು ಸೋತು ಸುಣ್ಣವಾದರು ಮರಿ ಮತ್ತೇಳುತ್ತದೆ. ಆಗ ತಾಯಿ ಜಿರಾಫೆ ಒದೆಯುವುದು ನಿಲ್ಲಿಸುತ್ತದೆ. ಇದರ ಅರ್ಥ ಬೇಟೆಗಾರರಿಂದ ತಪ್ಪಿಸಿಕೊಳ್ಳಲು ಮೊದಲು ತಕ್ಷಣ ಎದ್ದು ನಿಂತು ಓಡಲು ಶುರು ಮಾಡುವುದು. ಅಂದರೆ ಎಷ್ಟೇ ಕಷ್ಟ ಬಂದರು ಎದ್ದು ನಿಂತು ಮುನ್ನಡೆ ಎಂದು ಅರ್ಥ. ಕೆಲವೊಮ್ಮೆ ಒಳ್ಳೆಯದನ್ನು ಕಲಿಸಬೇಕಾದರೆ ಕೊಂಚ ಒರಟಾಗಿಯೂ ಇರಬೇಕಾಗುತ್ತದೆ. ಅದಕ್ಕಾಗಿಯೆ ಬದುಕು ನಮ್ಮೊಂದಿಗೆ ಕೆಲವು ಬಾರಿ ಮುನಿಸಿಕೊಂಡಾಗ ವಿನಯ ಪೂರ್ವಕವಾಗಿ ಅದಕ್ಕೆ ಸ್ಪಂದಿಸಬೇಕಾಗುತ್ತದೆ.

'ನಮ್ಮ ಸೈನಿಕರು ದೇಶ ಬಾಂಧವರಿಗೋಸ್ಕರ ಅಂಥ ರಿಸ್ಕ್ ತೆಗೆದುಕೊಳ್ಳಲು ತಯಾರಾಗಿರುವಾಗ ನಮಗೆ ನಮ್ಮದೆ ಬದುಕಿಗೋಸ್ಕರ ಒಂದಿಷ್ಟು ಕಷ್ಟಗಳನ್ನೆ ಎದುರಿಸಲಾಗುವುದಿಲ್ಲವೆ?'

ಜಗತ್ತಿನಲ್ಲಿ ಮಹಾನ್ ವ್ಯಕ್ತಿಗಳಾಗಿ ಹುಟ್ಟಿದವರು ಯಾರು ಯಾರು ಇಲ್ಲ. ಆದರೆ ದೊಡ್ಡ ದೊಡ್ಡ ಸವಾಲು ಗಳನ್ನು ಕಷ್ಟಗಳನ್ನು ಎದುರಿಸಿದಾಗ ಸಾಮಾನ್ಯ ವ್ಯಕ್ತಿಗಳು ಮಹಾನ್ ವ್ಯಕ್ತಿಯಾಗಿದ್ದಾರೆ. ನನ್ನದೆ ಬದುಕಿನಲ್ಲಿ ಒಂದು ಘಟನೆಯು ಇದೆ. ನಮ್ಮ ಕಾಶ್ಮೀರದಲ್ಲಿ ಪಾಕಿಸ್ತಾನದವರು ದಾಳಿ ಮಾಡಿದ 2001ನೇ ವರ್ಷದಲ್ಲಿ ಕಾಶ್ಮೀರ ಮತ್ತು ಪಾಕಿಸ್ತಾನ ಉಗ್ರರು ದಾಳಿಗೆ ದೇಶಕ್ಕಾಗಿ ಹೋರಾಡುತ್ತಿದ್ದ ಸೈನಿಕರಲ್ಲಿ ನನ್ನ ಚಿಕ್ಕಪ್ಪ ಒಬ್ಬರು. ಅವರು ಯುದ್ಧ ಮುಗಿಸಿ ಊರಿಗೆ ವಾಪಸ್ ಆಗಿದ್ದು ಅವರ ಪಾರ್ಥಿವ ಶರೀರ ಮಾತ್ರ, ಮಗನ ಪರಿಸ್ಥಿತಿ ನೋಡಿ ತಾಯಿ ಹೃದಯಘಾತಗೊಂಡು ಕೊನೆ ಉಸಿರೆಳೆದರು.

ಇನ್ನೊಂದೆಡೆ ಇದಕ್ಕೆ ವ್ಯತಿರಿಕ್ತವೆಂಬಂತೆ ಪರೀಕ್ಷೆ ಫೇಲಾದರೆ, ಖರ್ಚಿಗೆ ದುಡ್ಡು ಕೊಡದಿದ್ದರೆ, ಬುದ್ಧಿ ಮಾತು ಹೇಳಿದರೆ ಸಾಯುವ ಯುವಕ/ಯುವತಿಯರಿದ್ದಾರೆ. ಬೆಳೆ ಹಾಳಾದರೆ ಸಾಯುವ ರೈತರಿದ್ದಾರೆ. ವೈಮನಸ್ಸಿನಿಂದ ಸಾಯುವ ಗಂಡ ಹೆಂಡತಿಯರಿದ್ದಾರೆ. ಪ್ರೀತಿ-ಪ್ರೇಮದ ವಿಫಲತೆಯಿಂದ ಸಾಯುವವರಿದ್ದಾರೆ.

'ಇಂತ ವೀರ ಯೋಧರಿಗೆ ಜನ್ಮ ಕೊಟ್ಟ ಭಾರತ ಮಾತೆಗೆ ನನ್ನ ಪುಟ್ಟ ನಮನಗಳು'. ಹನುಮಂತಪ್ಪ ಅವರಂತೆ ವೀರ ಯೋಧರು ನಮ್ಮ ದೇಶಕ್ಕಾಗಿ ತಮ್ಮ ಪ್ರಾಣವನ್ನು ಲೆಕ್ಕಿಸದೆ ಹೋರಾಟ ಮಾಡಿ ತಮ್ಮ ಪ್ರಾಣ ತ್ಯಾಗ ಮಾಡಿದ ಯೋಧರಿಗೆ ಈ ನನ್ನ ಪುಟ್ಟ ಲೇಖನವನ್ನು ಅರ್ಪಿಸುತ್ತೇನೆ.

# ಪ್ರತಿಯೊಂದು ಸಾಧನೆಗೂ ಉತ್ಸಾಹವೇ ಸ್ಫೂರ್ತಿ



ಈ ಗೀತಾಂಜಲಿ
ದ್ವಿತೀಯ ಬಿ.ಎ. [ಹೆಚ್.ಇ.ಕೆ.]

ಒಬ್ಬ ಮನುಷ್ಯ ಜಗತ್ತಿನಲ್ಲಿ ಏನನ್ನಾದರೂ ಸಾಧಿಸುತ್ತಾನೆ ಎಂದರೆ ಹಾಗೇ ಜಗತ್ತಿನಲ್ಲಿ ಮನುಷ್ಯನಿಂದ ಏನಾದರೂ ಸಾಧನೆ ಆಗಿದೆ ಎಂದರೆ ಅದು ಉತ್ಸಾಹ ಲವಲವಿಕೆಯಿಂದಲೇ ಎಂದು ಹೇಳಬಹುದು. ಈ ಉತ್ಸಾಹ ಲವಲವಿಕೆ ಎಲ್ಲಿ ಇರುತ್ತದೆಯೋ ಅಲ್ಲೆಲ್ಲಾ ಪ್ರಯತ್ನ, ಶಕ್ತಿ, ಧೈರ್ಯ, ಶೌರ್ಯ, ಸಾಹಸಗಳಿರುತ್ತದೆ. ಜೊತೆಗೆ ಯಾವುದೇ ದೊಡ್ಡ ಕೆಲಸವಾಗಲಿ, ಚಿಕ್ಕ ಕೆಲಸವಾಗಲಿ ಎಲ್ಲಾ ಕೆಲಸದ ಹಿಂದೆ ಈ ಉತ್ಸಾಹ ಇದ್ದೇ ಇರುತ್ತದೆ. ಉದಾಹರಣೆಗೆ : ಒಬ್ಬ ಕನಸುಗಾರ ಒಂದು ಕನಸು ಕಾಣಬೇಕಾದರೆ ಉತ್ಸಾಹ ಇರಬೇಕು. ಹಾಗೇ ಒಬ್ಬ ವಿದ್ಯಾರ್ಥಿ ಓದಿ ಒಂದು ಉನ್ನತ ಮಟ್ಟದ ಯಶಸ್ಸು ಗಳಿಸಲು ಅವನಲ್ಲಿ ಛಲದ ಜೊತೆ ಉತ್ಸಾಹವೂ ಬೇಕೆ ಬೇಕು.

ಈ ಉತ್ಸಾಹವನ್ನು ತಿಳಿದು ನಡೆಯುವವನು ಜೀವನದಲ್ಲಿ ಸೋಲನ್ನು ಅನುಭವಿಸಲಾರನು. ಯಾರು ಈ ಉತ್ಸಾಹವನ್ನು ಕಳೆದುಕೊಂಡು ತಮ್ಮ ಜೀವನ ಇಷ್ಟೇ, ಹಾಗೇ, ಹೀಗೆ ಎಂತೆಲ್ಲಾ ಯೋಚಿಸಿಸುವವರು ಅವರು ಶವಕ್ಕೆ ಸಮಾನರಾಗುತ್ತಾರೆ. ಜನಸಾಮಾನ್ಯರು ಹೇಳುವಂತೆ "ಚಿತೆ ಸತ್ತವರನ್ನು ಸುಟ್ಟರೆ, ಚಿಂತೆ ಬದುಕಿರುವವರನ್ನು ಸುಡುತ್ತದಂತೆ" ಎಂಬ ಮಾತಿನಂತೆ ಉತ್ಸಾಹ ಇಲ್ಲದೇ ಇರುವವರ ಬಾಳು ಚಿತೆಗೆ ಸಮವಾಗಬಹುದು ಎನ್ನಬಹುದು. ಈ ಉತ್ಸಾಹ ಇಲ್ಲದಿರುವಂತಹ ಪ್ರತಿಯೊಂದು ಪ್ರತಿಭೆಯಿಂದ ಏನೊಂದು ಆಗಲಾರದು. ಆತ ನಿರುತ್ಸಾಹಿಯಾಗಿಯೇ ಉಳಿಯುತ್ತಾನೆ. ಅದಕ್ಕಾಗಿ ಈ ಒಂದು ಮಾತನ್ನು ಹೇಳಬಹುದು. "ಈ ಜಗತ್ತು ಎನ್ನುವುದು ಉತ್ಸಾಹಶಾಲಿ ಆದವರಿಗೆ ಸೇರುತ್ತದೆ".

ಈ ಉತ್ಸಾಹ ಶಾಲಿಯಾದವರು ತಮ್ಮ ವಿಶ್ರಾಂತಿಯನ್ನು ಬಯಸುವುದಿಲ್ಲ. ಅವರು ಯಾವಾಗಲೂ ತಮ್ಮ ಸಂಪರ್ಕದಲ್ಲಿ ಬಂದವರೆಲ್ಲರಲ್ಲಿ ಉತ್ಸಾಹವನ್ನು ತುಂಬಲು ಬಯಸುತ್ತಾರೆ. ಅವರ ಜೊತೆ ಇದ್ದವರು ಕೂಡಾ ತನ್ನಂತೆ ಉತ್ಸಾಹಿ ಶಾಲಿಗಳಾಗಬೇಕೆಂದು ಅಪೇಕ್ಷಿಸುತ್ತಾರೆ. ಅವರ ಜೀವನವನ್ನು ಸಂತೋಷದಿಂದ ಕಳೆಯಲು ಬಯಸುತ್ತಾರೆ. ಅವರಲ್ಲಿ ಉಂಟಾಗುವ ನಾನಾ ಬಗೆಯ ಸಂಕಷ್ಟಗಳಿಗೆ ದಾರಿ ಹುಡುಕುತ್ತಾರೆ. ಏನೇ ಆದರೂ ಕೂಡ ನಗುವಿನ ಮುಖವನ್ನು ಹೊಂದಿ ಸಂತೋಷದಿಂದ ಇರುತ್ತಾರೆ. ಅವರು ಯಾವುದೇ ಆರ್ಥಿಕ ಸಮಸ್ಯೆಗಳಿಗೆ ಕುಗ್ಗುವುದಿಲ್ಲ ಹಾಗೆಯೇ ಅವರು ಯಾವಾಗಲೂ ಪುರಂದರ ದಾಸರ ಒಂದು ಕೀರ್ತನೆಯಂತೆ ಬಂದಿದ್ದೆಲ್ಲಾ ಬರಲಿ ಶ್ರೀನಿವಾಸನ ದಯೆಯೊಂದಿರಲಿ ಎಂಬುದಾಗಿ ಯಾವ ಕಷ್ಟ-ಕಾರ್ಪಣ್ಯಗಳಿಗೂ ಹೆದರದೆ, ಕುಗ್ಗದೆ, ಧೈರ್ಯವಾಗಿ ಉತ್ಸಾಹಭರಿತರಾಗಿಯೇ ಇರುತ್ತಾರೆ.

ಪ್ರತಿಯೊಬ್ಬರ ಜೀವನದಲ್ಲಿಯೂ ಈ ಉತ್ಸಾಹಗೊಳ್ಳುವಂಥದ್ದು ಏನಾದರೊಂದು ಇದ್ದೆ ಇರಬೇಕು. ಅದು ಯಾವ ರೀತಿಯಲ್ಲಾದರೂ ಸರಿಯೇ, ಒಬ್ಬ ಮನುಷ್ಯ ಉತ್ಸಾಹಿಯಾಗಿಯೇ ಇರುತ್ತಾನೆ. ಶ್ರೀಮಂತಿಕೆ, ಐಷಾರಾಮಿ ಜೀವನಗಳು ಮನುಷ್ಯನಿಗೆ ಸುಖ, ಸಂತೋಷವನ್ನು ತಂದು ಕೊಡುವುದಿಲ್ಲ. ಅವುಗಳನ್ನು ಮೀರಿದಂತಹ ಯಾವುದೋ ಒಂದು ವಸ್ತು ಇದೆ. ಅದು ಅವರ ಉತ್ಸಾಹವೂ ಆ ವಸ್ತುವಿನ ಶೋಧದಲ್ಲಿ ತೊಡಗಿರುತ್ತದೆ. ಅದನ್ನು ಸಾಧಿಸುವ ಪ್ರಯತ್ನದಲ್ಲಿಯೇ ಅವರು ತಲ್ಲೀನರಾಗಿ ಆನಂದವನ್ನು ಕಾಣುತ್ತಾರೆ. ಈ ಉತ್ಸಾಹ ಎನ್ನುವುದು ಸಾಂಕ್ರಾಮಿಕವಾಗಿರುತ್ತದೆ. ಅದು ತಾನು ಎಲ್ಲೆಲ್ಲಿ ಹೋಗುತ್ತದೆಯೋ ಅಲ್ಲೆಲ್ಲಾ ಸೂರ್ಯನ ಕಿರಣಗಳು ಹೇಗೆ ಭೂಮಿಯಲ್ಲಿ ಎಲ್ಲಾ ಕಡೆ ಬೀಳುತ್ತದೆಯೋ ಹಾಗೇ ಈ ಉತ್ಸಾಹವೂ ಕೂಡ ಪ್ರಕಾಶವನ್ನು ಬೀರುತ್ತದೆ. ಹಾಗೆಯೇ ಅಲ್ಲೆಲ್ಲಾ ಇರುವಂತಹ ನೋವು, ಬೇಸರ, ದುಃಖ, ಕಷ್ಟ ಎಲ್ಲವನ್ನು ಹೊಡೆದೋಡಿಸಿ ಲವಲವಿಕೆಯನ್ನು ಮೂಡಿಸುತ್ತದೆ.

ಕೆಲಸ ಎಷ್ಟೇ ಕಷ್ಟಕರವಾಗಿದ್ದರೂ, ಎಷ್ಟೇ ಬೃಹತ್‌ದಾಗಿದ್ದರೂ ಕೂಡ ಇದರ ಮೂಲಕ ಎಲ್ಲವೂ

ಸುಗಮವೆ ನಿಸುತ್ತದೆ. ಮನುಷ್ಯನಲ್ಲಿ ಸದ್ಗುಣಗಳೆಷ್ಟೇ ಇದ್ದರೂ ಕೂಡ ಉತ್ಸಾಹ ಇಲ್ಲದಿದ್ದರೆ ಆ ಸದ್ಗುಣಗಳಿಗೆ ಪ್ರೇರಕ ಶಕ್ತಿಯೇ ಇಲ್ಲದಂತಾಗುತ್ತದೆ. ಎಲ್ಲಾ ಶಾಸ್ತ್ರಗಳಿಗಿಂತಲೂ ಉತ್ಸಾಹವೇ ಹೆಚ್ಚು ಎನ್ನಬಹುದು. ಜೀವನದಲ್ಲಿ ಏನೆಲ್ಲಾ ಇದ್ದರೂ ಕೂಡ ಅದರ ಜೊತೆ ಈ ಉತ್ಸಾಹವೂ ಬೇಕೆ ಬೇಕು. ಉತ್ಸಾಹ-ಲವಲವಿಕೆ ಎನ್ನುವುದು ಮನುಷ್ಯನ ಸಾಧನೆಗೆ ಸ್ಫೂರ್ತಿ, ಹಾಗೇ ಆತನ ಪ್ರೇರಕ ಶಕ್ತಿ ಎಂದು ಹೇಳಬಹುದು. ಇಂದಿನ ಸಮಾಜದಲ್ಲಿ ಒಬ್ಬ ಪುರುಷನ ಸಾಧನೆಗಳಿಗೆ ಸಮಾನವಾಗುವಂತೆ ಮಹಿಳೆಯರು ಕೂಡ ಸಾಧನೆಗೈಯುತ್ತಿದ್ದಾಳೆ. ಏಕೆಂದರೆ ಇಂದು ಮಹಿಳೆಯರು ಕೂಡ ಉತ್ಸಾಹಿಗಳಾಗಿ ತಮ್ಮ ಜೀವನ ತಾವು ರೂಪಿಸಿಕೊಳ್ಳಬೇಕೆಂಬ ಛಲದಿಂದ ಹಾಗೆಯೇ ಇಂದು ಒಬ್ಬ ವ್ಯಕ್ತಿ ತನ್ನ ಗುರಿಯನ್ನು ತಾನು ತಲುಪಲು ಛಲ, ಸ್ಥೈರ್ಯ, ಆಸಕ್ತಿಗಳು ಆತನಲ್ಲಿ ಎಷ್ಟು ಮುಖ್ಯವೋ ಅಷ್ಟೇ ಪ್ರಮಾಣದ ಉತ್ಸಾಹವೂ, ಲವಲವಿಕೆಯು ಇದ್ದರೆ ಮಾತ್ರ ಆತ ಗುರಿ ತಲುಪಲು ಸಾಧ್ಯ. ಒಟ್ಟಿನಲ್ಲಿ ಎಲ್ಲವೂ ಇದ್ದು ಉತ್ಸಾಹ ಇಲ್ಲದಿದ್ದರೆ, ಏನೂ ಇಲ್ಲದಂತೆ. ಉತ್ಸಾಹ ಇದ್ದು, ಇನ್ನುಳಿದ ಬೇರೆ ಯಾವುದೇ ಇಲ್ಲದಿದ್ದರೂ, ಎಲ್ಲವೂ ಇದ್ದಂತೆ.

ಇದಕ್ಕೆ ಒಂದು ಸೂಕ್ತ ಉದಾಹರಣೆಯೆಂದರೆ ಹಡಗಿನಲ್ಲಿ ಪ್ರಯಾಣ ಮಾಡುತ್ತಿದ್ದ ವ್ಯಕ್ತಿಯೊಬ್ಬನು ಕಡಲ ಮಧ್ಯದಲ್ಲಿ ತನ್ನ ದೋಣಿ ಸಮುದ್ರದ ಅಲೆಗೆ ಕೆಟ್ಟು ಹೋದ ಬಳಿಕ ಹಲವು ವರ್ಷಗಳ ನಂತರ ದಡಕ್ಕೆ ಬಂದು ಸೇರಿದ. ಕೆಲವೇ ದಿನಗಳಲ್ಲಿ ದಡ ಸೇರಬೇಕೆಂಬ ಯೋಚನೆಯೊಂದಿಗೆ ಸಮುದ್ರಕ್ಕಿಳಿದವನಿಗೆ ಹಡಗು ಕೆಟ್ಟ ಬಳಿಕ ತೆಗೆದುಕೊಂಡು ಹೋಗಿದ್ದ ಆಹಾರ ಮುಗಿದು ಹೋಯಿತು. ತಿನ್ನಲು ಆಹಾರವಿಲ್ಲದೆ, ವೈದ್ಯೋಪಚಾರಗಳು ಇಲ್ಲದೆ ಗಾಳಿಯಿಂದ ತೇಲುತ್ತ ಆ ಹಡಗು ಒಂದು ದ್ವೀಪ ಸೇರಿತ್ತು. ಅಲ್ಲಿ ತುಂಬಾ ಅವನು ನಿಶ್ಯಕ್ತನಾಗಿದ್ದ ಆದರು ಅವನು ಬದುಕಿದ ಕಾರಣ ಅವನ ಉತ್ಸಾಹ ನಾನು ಬದುಕಬೇಕೆಂಬ ಆತನ ಛಲ, ಧೈರ್ಯ, ಸಾಹಸ ಮತ್ತು ಹಾಗೇ ಲವಲವಿಕೆಯಾಗಿದೆ ಎನ್ನಬಹುದು. ಆತ ತಾನು ದಡ ಸೇರಬೇಕೆಂದು ಅಲ್ಲಿದ್ದಂತಹ ನೀರಡಿಕೆ (ಅ) ಆಮೆಗಳನ್ನು ಹಾಗೇ ಕೈಗೆ ಸಿಕ್ಕಿದ ಎಲ್ಲಾ ಪ್ರಾಣಿಗಳ ರಕ್ತ ಕುಡಿದು ಬದುಕಿ ಮತ್ತೆ ಅಲ್ಲಿಂದ ಮರದ ದಿಮ್ಮಿಗಳ ಸಹಾಯದಿಂದ ಬಂದು ದಡ ಸೇರಿದನು. ಇಂಥ ಘಟನೆಯಿಂದ ನಮಗೆ ತಿಳಿಯುವುದು ಏನೆಂದರೆ ಎಂಥಹ ಕಷ್ಟ ಪರಿಸ್ಥಿತಿಯಲ್ಲಿಯೂ ನಮ್ಮ ಉತ್ಸಾಹ ಮತ್ತು ಛಲದಿಂದ ಹೇಗಾದರೂ ಬದುಕಬಹುದು. ನಮ್ಮ ಜೀವನವನ್ನು ಸುಖಮಯಗೊಳಿಸಿಕೊಂಡು ಸಾಗಬಹುದು.

## ನಿಮಗಿದು ತಿಳಿದಿರಲಿ

ಕಾವ್ಯಶ್ರೀ ಪಿ.
ತೃತೀಯ ಬಿ.ಕಾಂ.

1. ಮಾನವನ ದೇಹದಲ್ಲಿ 72,000 ನರಗಳಿವೆ.
2. ಆರೋಗ್ಯವಂತ ಮನುಷ್ಯನು ಒಂದು ದಿನಕ್ಕೆ 24,480 ಬಾರಿ ಉಸಿರಾಡುತ್ತಾನೆ.
3. ಒಬ್ಬ ಮನುಷ್ಯನು ತನ್ನ ಇಡೀ ಜೀವಮಾನದಲ್ಲಿ 23 ಕೋಟಿ ಸಲ ಕಣ್ಣು ರೆಪ್ಪೆ ಬಡಿಯುತ್ತಾನೆ.
4. ಮಾನವನ ಹೃದಯ ಒಂದು ದಿನಕ್ಕೆ 12,000 ಲೀಟರ್ ರಕ್ತವನ್ನು ಪಂಪು ಮಾಡುತ್ತದೆ.
5. ಮಾನವನ ಮೆದುಳಿನಲ್ಲಿ ಸುಮಾರು 10,000 ದಿಂದ 1,00,000 ವರೆಗೂ ನರಗಳಿವೆ.
6. ಮಾನವನ ಮೆದುಳಿನಲ್ಲಿ ಸರಿ ಸುಮಾರು 25 ಮಿಲಿಯನ್‌ಗೂ ಹೆಚ್ಚು ನರಕೋಶಗಳಿವೆ.
7. ಮಾನವನ ದೇಹದಲ್ಲಿ ಸರಾಸರಿ ಸುಮಾರು 100 ಬಿಲಿಯನ್‌ಗೂ ಹೆಚ್ಚು ಜೀವ ಕೋಶಗಳಿವೆ.
8. ನಮ್ಮ ದೇಹದಲ್ಲಿರುವ 72.48 ಕಿ.ಮೀ ಉದ್ದದ ನರಗಳು ಘಂಟೆಗೆ 360 ಕಿ.ಮೀ. ವೇಗದಲ್ಲಿ ಮಾಹಿತಿ ರವಾನಿಸುತ್ತದೆ.
9. ಒಂದೇ ದಿನದಲ್ಲಿ ನಮ್ಮ ದೇಹದಲ್ಲಿ 2 ಬಿಲಿಯನ್ ಜೀವ ಕಣಗಳು ಹುಟ್ಟಿ ಸಾಯುತ್ತವೆ.
10. ಒಂದು ಮಿಲಿ ಗ್ರಾಂ ತೇವಾಂಶ ಮಣ್ಣಿನಲ್ಲಿ ಸುಮಾರು 2500 ಮಿಲಿಯನ್ ಬ್ಯಾಕ್ಟೀರಿಯಾಗಳಿರುತ್ತವೆ.

# ಸೋಲು-ಗೆಲುವು






**ಪೂಜಾ ಎಂ.**
ದ್ವಿತೀಯ ಬಿ.ಎ. [ಹೆಚ್.ಇ.ಜಿ.]

ನಮ್ಮ ಜೀವನದಲ್ಲಿ ದಿನವೂ ಅನೇಕ ಅನುಭವಗಳಾಗುತ್ತವೆ. ಕೆಲವು ಸೋಲಿನದಾಗಿರಬಹುದು. ಇನ್ನೂ ಕೆಲವು ಗೆಲುವಿನದಾಗಿರಬಹುದು. ನಾವು ಸೋತಾಗ ಎಂದಿಗೂ ದುಃಖಪಡಬಾರದು, ಧೈರ್ಯಗುಂದಬಾರದು. ಏಕೆಂದರೆ ನಮ್ಮಲ್ಲಿರುವ ಕೊರತೆಯನ್ನು ನಮಗೆ ಸ್ಪಷ್ಟವಾಗಿ ಮನದಟ್ಟಾಗುವಂತೆ ಮಾಡುವುದೂ ಸಹ ಒಂದು ರೀತಿಯ ಸೋಲೆ ಆಗಿದೆ. ನಾವು ಒಮ್ಮೆ ಸೋತಾಗ ನಮ್ಮ ಕೊರತೆಗಳನ್ನು ತಿಳಿದುಕೊಂಡು ಅವನ್ನು ನೀಗಿಸಿಕೊಂಡು ನಾವು ಪರಿಪೂರ್ಣರಾಗಲು ಅದು ಸಹಾಯ ಮಾಡುತ್ತದೆ. ಇದರಿಂದ ನಾವು ಇನ್ನೂ ಹೆಚ್ಚಿನ ರೀತಿಯಲ್ಲಿ ಮಾನಸಿಕವಾಗಿ ಸಿದ್ಧರಾಗಿ ಗೆಲುವಿನೆಡೆಗೆ ಹೆಜ್ಜೆ ಇಡಲು ಸೋಲೊಂದು ಮೆಟ್ಟಿಲಾಗುತ್ತದೆ. ಆಂಗ್ಲಭಾಷೆಯಲ್ಲಿ ಅದನ್ನು "Failure is the stepping stone for success" ಎನ್ನುವರು. ಹಾಗೆಂದ ಮಾತ್ರಕ್ಕೆ ನಾವು ಯಾವಾಗಲೂ ಸೋಲಲೇ ಬೇಕೆಂದರ್ಥವಲ್ಲ. ನಮ್ಮ ಕೈಯಲ್ಲಾಗುವ ಪ್ರಯತ್ನವನ್ನು ಶಕ್ತಿಮೀರಿ ಮಾಡಬೇಕು.

ಗೆಲುವಿನ ಹಾದಿಯಲ್ಲಿ ನಮಗೆ ಅನೇಕ ಕಲ್ಲು ಮುಳ್ಳುಗಳು, ಎಡರು ತೊಡರುಗಳಿದ್ದರೂ ಸಹ ನಾವು ಧೈರ್ಯದಿಂದ ಮುನ್ನುಗ್ಗಿದರೆ ಗುರಿ ತಲುಪಲು ಸಾಧ್ಯ. ಗೆಲುವಿನ ಹಾದಿಯಲ್ಲಿ ಬರುವ ಕಷ್ಟಗಳನ್ನು ನೋಡಿ ಎದುರಿಸಲಾರದೇ ಕುಗ್ಗಬಾರದು. ಅವನ್ನು ಆತ್ಮ ವಿಶ್ವಾಸದಿಂದ ಎದುರಿಸಲು ಪ್ರಯತ್ನಿಸತೊಡಗಿದರೆ ದೂರವಾಗುತ್ತವೆ. ಆಗ ಖಂಡಿತ ನಮಗೆ ಗೆಲುವು ಸಿಗುತ್ತದೆ. ಗೆದ್ದ ನಂತರ ನಾವು ಗೆದ್ದೆವೆಂದು ಬೀಗದೆ ಸಹಜ ರೀತಿಯಲ್ಲಿ ನಡೆದುಕೊಳ್ಳಬೇಕು. ಗೆಲುವಿನಿಂದ ನಾವು ಪಡುವ ಸಂತೋಷ ಬೇರೆಯವರಿಗೆ ನೋವನ್ನು ಉಂಟು ಮಾಡಬಾರದು.

ಒಮ್ಮೆ ಸ್ವಾಮಿ ವಿವೇಕಾನಂದರು ಕಾಶಿಯ ಬೀದಿಯೊಂದರಲ್ಲಿ ನಡೆದು ಹೋಗುತ್ತಿದ್ದರು. ಇದ್ದಕ್ಕಿದ್ದಂತೆಯೇ ಕೋತಿಗಳ ಗುಂಪೊಂದು ಬಂದವು. ಕಾಶಿಯಲ್ಲಿನ ಕೋತಿಗಳೆಂದರೆ ಹೇಳಬೇಕೆ! ಅವು ಗಾತ್ರದಲ್ಲಿಯೂ ದೊಡ್ಡವು ಮತ್ತು ಬಹಳ ತುಂಟ ತನ್ನದ್ದಾಗಿದ್ದವು. ಅವೆಲ್ಲವೂ ಸೇರಿಕೊಂಡು ಸ್ವಾಮಿಜಿಯುವರನ್ನು ಹೆದರಿಸಿದವು. ಅವರು ಜೋರಾಗಿ ಓಡ ತೊಡಗಿದರು. ಒಮ್ಮೆಲೆ ಅವರಿಗೆ ಹಿಂದಿನಿಂದ ಯಾರೋ ಒಬ್ಬ ವ್ಯಕ್ತಿ "ಓಡಬೇಡಿ ಹಿಂದೆ ತಿರುಗಿ ಅವನ್ನು ಹೆದರಿಸಿ ಓಡಿಸಿ" ಎಂದು ಹೇಳಿದಂತೆ ಕೇಳಿಸಿತು. ಆಗ ಹಿಂದೆ ತಿರುಗಿದ ಸ್ವಾಮೀಜಿ ಅವನ್ನು ಕೋಲಿನಿಂದ ಹೆದರಿಸಿ ಓಡಿಸಿದಾಗ ಅವು ತಮ್ಮ ಪಾಡಿಗೆ ಬಾಲ ಮುದುರಿಕೊಂಡು ಹೊರಟು ಹೋದವು. ಇದೇ ರೀತಿಯಲ್ಲಿ ನಾವು ನಮ್ಮ ನಿರಂತರ ಪ್ರಯತ್ನ ಆತ್ಮ ವಿಶ್ವಾಸದಿಂದ ಕಷ್ಟಗಳನ್ನು ಎದುರಿಸಬೇಕಾಗಿದೆ. ಗೆಲುವಿಗೋಸ್ಕರ ನಿರಂತರ ಪ್ರಯತ್ನ ಬಹುಮುಖ್ಯವಾದದ್ದು. ಇದನ್ನು ನಾವು ಸಮುದ್ರದ ಅಲೆಗಳನ್ನು ನೋಡಿ ಕಲಿಯಬೇಕು. ಬಂಡೆಗಳು ನಿರಂತರವಾಗಿ ತನ್ನನ್ನು ಎಷ್ಟೇ ಹಿಂದಕ್ಕೆ ತಳ್ಳಿದರೂ ಸಹ ಮತ್ತೆ ಮತ್ತೆ ಮುಂದಕ್ಕೆ ಬರುವಂತಹ ಅದರ ಪ್ರಯತ್ನ ಅಪೂರ್ವವಾದದ್ದು. ಈ ರೀತಿಯಲ್ಲಿ ನಾವು ಗೆಲುವಿನ ದಡ ತಲುಪಲು ಇತರರನ್ನು ಅವಲಂಬಿಸದೆ ಸ್ವಪ್ರಯತ್ನ, ಆತ್ಮ ವಿಶ್ವಾಸ, ಧೈರ್ಯ ಹಾಗೂ ನಿರಂತರವಾದ ಪ್ರಯತ್ನದಿಂದ ಮುನ್ನುಗುವುದು ಇಂದಿನ ಆಧುನಿಕ ಯುಗದಲ್ಲಿ ಅತೀ ಅವಶ್ಯಕವಾಗಿದೆ.

# ವಿದ್ಯಾರ್ಥಿಯ ಜವಾಬ್ದಾರಿ

ಪೂಜಾ ಎಂ.
ದ್ವಿತೀಯ ಬಿ.ಎ. [ಹೆಚ್.ಇ.ಜಿ.]



ಪ್ರತಿ ಜೀವಿಗೂ ಹುಟ್ಟು ಉಚಿತ ಸಾವು ಖಚಿತ ಆದ್ದರಿಂದ ಹುಟ್ಟು ಸಾವುಗಳ ನಡುವೆ ಈ ಜೀವನವನ್ನು ಸದುಪಯೋಗಪಡಿಸಿಕೊಳ್ಳಬೇಕು. ಪ್ರತಿಯೊಂದು ಜೀವಿಯೂ ತನಗೆ ಬುದ್ಧಿ ಶಕ್ತಿ ಇಲ್ಲದೆ ಇದ್ದರೂ ಸಹ ಬೇರೆಯವರಿಗೆ ಉಪಕಾರ ಮಾಡಿ ತನ್ನ ಸಾರ್ಥಕ ಮಾಡಿಕೊಳ್ಳುತ್ತದೆ. ಅಂತಹುದರಲ್ಲಿ ಮಾನವರಾಗಿ ಹುಟ್ಟಿ ಬುದ್ಧಿ ಶಕ್ತಿಯನ್ನು, ಎಲ್ಲಾ ತರಹದ ಸೌಲಭ್ಯವನ್ನು ಪಡೆದಿರುವ ನಾವು ಬೇರೆಯುವರಿಗೆ ಉಪಕಾರ ಮಾಡುವುದಿರಲಿ, ಸದ್ಯಕ್ಕೆ ನಮ್ಮ ಜವಾಬ್ಧಾರಿಯನ್ನು ಅರಿತು ಅದನ್ನು ನಿಭಾಯಿಸುವಷ್ಟರಲ್ಲೇ ನಮ್ಮ ಕೊನೆಯ ಘಟ್ಟ [ಸಾವು] ತಲುಪಿ ಬಿಟ್ಟಿರುತ್ತೇವೆ. ಆದರೆ ವಿದ್ಯಾರ್ಥಿಗಳಾದ ನಾವು ಕೆಲವು ಜವಾಬ್ದಾರಿಗಳನ್ನು ಹೊತ್ತು ಜೀವನದಲ್ಲಿ ಮುಂದೆ ನಡೆಯಬೇಕು.

ವಿದ್ಯಾರ್ಥಿಯ ಜವಾಬ್ದಾರಿ ಎಂದರೆ ಕೇವಲ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕೆಲಸಕ್ಕೆ ಹೋಗುವುದು ಎಂದರ್ಥವಲ್ಲ. ಸ್ನೇಹಿತರೆ ನಮಗೆ ಮುಖ್ಯವಾದ ಇನ್ನೊಂದು ಜವಾಬ್ದಾರಿ ಇದೆ. ಅದು ನಾವು ಹುಟ್ಟಿರುವ ಈ ದೇಶಕ್ಕೆ ಏನಾದರೂ ಒಳ್ಳೆಯದನ್ನು ಮಾಡಬೇಕೆಂಬುದು. ನಮಗೆ ದೇಶ ಏನು ಕೊಟ್ಟಿದೆ ಅನ್ನುವುದಕ್ಕಿಂತ ದೇಶಕ್ಕೆ ನಾವು ಏನು ಸೇವೆ ಸಲ್ಲಿಸಿದ್ದೇವೆ ಅನ್ನುವುದು ತುಂಬಾ ಮುಖ್ಯ. ನನ್ನ ಗುರುಗಳು ಹೇಳುತ್ತಿರುತ್ತಾರೆ ಜೀವನವೊಂದು ಅವಿರತವಾದ ಹೋರಾಟ. ನಮ್ಮ ಸುಂದರ ಕನಸುಗಳ ಸಿಡಿದಾಟ. ಇಲ್ಲಿ ಜೀವನ ನಮ್ಮ ಆಯ್ಕೆಯಾಗಬೇಕೆ ಹೊರತು ಮತ್ತೊಬ್ಬರ ಆಯ್ಕೆಯಾಗಬಾರದು. ವಿದ್ಯಾರ್ಥಿಗಳು ತಮ್ಮ ಬದುಕನ್ನು ತಾವೇ ರೂಪಿಸಿಕೊಳ್ಳಬೇಕು ಮತ್ತು ಅದರ ಸಾಧನೆಗಾಗಿ ಅವಿರತವಾಗಿ ಶ್ರಮಿಸಬೇಕು ಎಂದು. ಆದರೆ ಇಂದು ಬದಲಾಗುತ್ತಿರುವ ಚಿಂತನಾಕ್ರಮ, ಸಹವಾಸ, ಮಾಧ್ಯಮಗಳ ಪ್ರಭಾವ, ಪ್ರೀತಿಯ ಚೆಲ್ಲಾಟ, ನಿರೀಕ್ಷೆಗೂ ಮಿಗಿಲಾದ ಬದಲಾವಣೆಯಾಗಿದೆ. ಇಂತಹ ಬದಲಾವಣೆ ಯನ್ನು ತಿದ್ದಲು ಹಿರಿಯರು, ಗುರುಗಳು, ಹಲವಾರು ಬಾರಿ ಪ್ರಯತ್ನಪಟ್ಟರೂ ಸಹ ಅದು ಆಗುವುದಿಲ್ಲ. ಅವರು ಅವರ ಅನುಭವಗಳನ್ನು ನಮ್ಮೊಡನೆ ಹಂಚಿ ಕೊಂಡರೂ ಸಹ ನಮಗೆ ಅವು ಲೆಕ್ಕಕ್ಕೆ ಬಾರದ ಮಾತುಗಳಾಗಿರುತ್ತವೆ. ಆದ್ದರಿಂದ ವಿದ್ಯಾರ್ಥಿಗಳಾದ ನಾವು ನಮ್ಮ ಜವಾಬ್ದಾರಿಯನ್ನು ಅರಿತು ಜೀವನದ ಗುರಿಯನ್ನು ಮುಟ್ಟುವುದು ಒಳಿತಲ್ಲವೆ. ಹೀಗೆ ಹೇಳುವಾಗ ಒಬ್ಬ ತತ್ವಜ್ಞಾನಿ ಹೇಳಿದ ಮಾತು ನೆನಪಿಗೆ ಬರುತ್ತದೆ. "ಸ್ವ ಪ್ರಯತ್ನದಿಂದ ಸರ್ವತೋಮುಖ ಏಳ್ಗೆ ಸಾಧಿಸಬಲ್ಲ ಒಬ್ಬನೇ ಒಬ್ಬ ವ್ಯಕ್ತಿ ಆ ವಿಶ್ವದಲ್ಲಿ ಖಂಡಿತವಾಗಿಯೂ ಇದ್ದಾನೆ. ಆತ ನೀನೆ" ಎಂದುಕೊಂಡರೆ ನಾವು ಸಹ ಒಬ್ಬ ಒಳ್ಳೆಯ ವ್ಯಕ್ತಿ ಆಗಬಹುದಲ್ಲವೇ ಅದಕ್ಕೆ ಬೇಕಾದ್ದು ಜವಾಬ್ದಾರಿ.

ಜವಾಬ್ದಾರಿ ಎಂದಾಗ ಸ್ವಾಮಿ ವಿವೇಕಾನಂದರು

ಹೇಳಿರುವ ಮಾತು ನೆನಪಿಗೆ ಬರುತ್ತದೆ. "ಏಳು ಎದ್ದೇಳು ನೀನು ಭವಿಷ್ಯವನ್ನು ರೂಪಿಸುವ ಜವಾಬ್ದಾರಿಯನ್ನು ಹೊರು ನಿನ್ನ ಉತ್ತರೋತ್ತರ ಶ್ರೇಯಸ್ಸಿಗೆ ಬೇಕಾದ ಎಲ್ಲಾ ಶಕ್ತಿ ಸಾಮರ್ಥ್ಯ ನಿನ್ನೊಳಗೆ ಇದೆ. ನೋಡು, ಮನಮಾಡು, ಏಳು ಎದ್ದೇಳು, ಭವ್ಯ ಭವಿಷ್ಯತ್ತಿನ ನಿರ್ಮಾಣಕ್ಕೆ ಇಂದೇ ಅಡಿ ಇಡು. ಈ ಜವಾಬ್ದಾರಿಯನ್ನು ಎಲ್ಲಾ ವಿದ್ಯಾರ್ಥಿಯು ಅರಿತರೆ ಎಲ್ಲರ ಭವಿಷ್ಯ ಉಜ್ವಲವಾಗುವುದರಲ್ಲಿ ಯಾವುದೇ ತರಹದ ಅನುಮಾನವಿಲ್ಲ.

ಡಾ॥ ಅಬ್ದುಲ್‌ಕಲಾಂರವರು ಹೇಳುತ್ತಾರೆ 'Vision 2020' ಯಲ್ಲಿ ನಮ್ಮ ರಾಷ್ಟ್ರ ಅಭಿವೃದ್ಧಿ ಹೊಂದಿದ್ದ ರಾಷ್ಟ್ರವಾಗಿ ನಿರ್ಮಾಣವಾಗುತ್ತದೆಂದು. ಆದರೆ ಸ್ನೇಹಿತರೇ ತಿಳಿದುಕೊಳ್ಳಿ 2020 ತನಕ ನಾವು ಕಾಯಬೇಕಾಗಿಲ್ಲ. ಯುವ ಶಕ್ತಿಗಳಾದ ನಾವು ಹೊಸ ಅನ್ವೇಷಣೆ, ಹೊಸ ಸಮಾಜ, ವಿಚಾರವಂತಿಕೆ, ವಿಮರ್ಶಾಗುಣ, ಸೃಜನಶೀಲತೆಗಳನ್ನು ಜೊತೆಗೆ ಮುಖ್ಯವಾಗಿ ಆತ್ಮಶಕ್ತಿಯನ್ನು ಮತ್ತು ಬಹುಜನರ ಹಿತಕ್ಕೂ, ನಾಡಿನ ಹಿತಕ್ಕೂ ದುಡಿಯಬಲ್ಲವರಾದರೆ ನಾವು ಅವರ ಕನಸನ್ನು ಇನ್ನೂ ಬೇಗ ನನಸು ಮಾಡಬಹುದು. ಕೇವಲ ಶಾರೀರಿಕ ಶ್ರಮದಿಂದ ದೈತ್ಯಶಕ್ತಿ ಪಡೆದವನು ಮತಿವಂತನಾಗಲಾರನು. ಕೇವಲ ಅಲಂಕಾರಗಳಿಂದ ಸೌಂದರ್ಯವಂತನಾದವನು ಸುಶೀಲವಂತನಾಗಲಾರನು. ಆದರೆ ಒಳ್ಳೆಯ ವಿದ್ಯಾಭ್ಯಾಸ ಮಾಡಿದವನು ವಿದ್ಯಾವಂತನಾಗಿಯೂ ಮತ್ತು ಗುಣವಂತನಾಗಿಯೂ ಇರಬಹುದು. ಈ ಸಂದರ್ಭದಲ್ಲಿ ನನ್ನ ಗುರುವಿನ ಮತ್ತೊಂದು ನುಡಿಮುತ್ತು ನೆನಪಾಗುತ್ತದೆ. ಎಲ್ಲಾ ವಿದ್ಯಾರ್ಥಿಗಳಿಗೂ ಇದು ಸೂತ್ರವಾಗಬೇಕು. ಸದಾ ಕಾಲವೂ ಉತ್ಸಾಹಿಗಳಾಗಿ ದಿಟ್ಟತನದಿಂದ ಧೈರ್ಯ, ಸಾಹಸಗಳನ್ನು ಮೈಗೂಡಿಸಿಕೊಂಡು ಗುರಿಯ ಸಾಧನೆಯತ್ತ ಮುನ್ನುಗ್ಗಬೇಕು.

---

## "ಓದಿ ಮತ್ತೆ ಚಿಂತಿಸಿ ಸುಮ್ಮನೆ ಕೊರಗಬೇಡಿ ಜೀವನದಲ್ಲಿ ಅಳವಡಿಸಿ"

ಗಂಡ ಹೆಂಡತಿ ಎರಡು ಮಕ್ಕಳಿರುವ ಕುಟುಂಬವು ಒಂದು ದಿವಸ ದುಬೈ ಫೆಸ್ಟಿವಲ್‌ಗೆ ಸುತ್ತಲು ಹೋದರು. ಈ ಕುಟುಂಬ ಗಂಟೆಗಟ್ಟಲೆ ಸುತ್ತಿ ಸಂತೋಷಿಸಿದರು... ಅದರೆಡೆಯಲ್ಲಿ ಅಲ್ಲಿನ ನೂಕುನುಗ್ಗಲಿನಲ್ಲಿ ಅವರ ಮಗ ತಪ್ಪಿಸಿಕೊಂಡುಬಿಡುತ್ತಾನೆ. ಆಗ ಅವನನ್ನು ಹುಡುಕಿ ಹುಡುಕಿ ಸಿಗದಾಗ ಅವನ ತಾಯಿ ಬೊಬ್ಬೆ ಹಾಕಲು ಶುರು ಮಾಡಿದರು.

ಬೊಬ್ಬೆ ಕೇಳಿ ಸಾರ್ವಜನಿಕರು ಒಟ್ಟುಗೂಡಿದರು. ಪೋಲಿಸರಿಗೆ ತಿಳಿಸಿದರು. ಪೋಲಿಸರು ಗಂಟೆಗಟ್ಟಲೆ ಹುಡುಕಿ ಹೇಗಾದರೂ ಮಗನನ್ನು ಕಂಡು ಹಿಡಿದರು. ಅವನನ್ನು ತಂದೆ-ತಾಯಿಗೆ ಮುಟ್ಟಿಸಿದರು. ಮಗನು ಸಿಕ್ಕಿದ ಕೂಡಲೇ ಹೆಂಡತಿ ಮತ್ತು ಮಕ್ಕಳನ್ನು ಫ್ಲಾಟಿಗೆ ಕಳುಹಿಸಿ ಗಂಡ ಟ್ರಾವಲ್ಸಿಗೆ ಹೋಗಿ 4 ಟಿಕೇಟ್ ಬುಕ್ ಮಾಡುತ್ತಾರೆ. ಟಿಕೇಟ್ ಕೈಯಲ್ಲಿ ಸಿಕ್ಕಿದಾಗ ಹೆಂಡತಿ ಆಶ್ಚರ್ಯದಿಂದ ಕೇಳಿದಳು. ಅಲ್ಲರೀ ನಿಮಗೇನಾಗಿದೆ....? ಊರಿನಲ್ಲಿ ಯಾರಾದರೂ ಮರಣ ಹೊಂದಿದಾರಾ....? ಅವಸರದಿಂದ ಮನೆಗೆ ಹೋಗಲಿಕ್ಕೆ...? ಕೂಡಲೇ ಗಂಡ



ಅಳುತ್ತಾ ಹೇಳಿದರು "ಸ್ವಂತ ಮಗನನ್ನು 2 ಗಂಟೆ ಸಮಯಕ್ಕೆ ಕಾಣದಾದಾಗ ನೀನು ತುಂಬಾ ಬೇಜಾರು ಮಾಡಿದೆಯಲ್ಲ....? ಹಾಗಾದರೆ ನಾನು ಕಳೆದ ಹತ್ತು ವರ್ಷದಿಂದ ನಿನ್ನ ಮಾತು ಕೇಳಿ ಊರಿಗೆ ಹೋಗದ ಕಾರಣ ನನ್ನನ್ನು ಒಂದು ಸಲ ನೋಡದೆ ನನ್ನ ತಾಯಿ ಎಷ್ಟು ಸಲ ಬೇಜಾರು ಮಾಡಿರಬಹುದು....? ಅದಕ್ಕೆ ಹೆಂಡತಿಯ ಪ್ರತಿಕ್ರಿಯೆ ಮೌನವಾಗಿತ್ತು.

ಆದ್ದರಿಂದ ನೀವು ತಂದೆ ತಾಯಿಯರನ್ನು ಪ್ರೀತಿಸುವುದಾದರೆ ಬಾಧ್ಯತೆಗಳು ನೆರವೇರಿಸುವುದಾದರೆ ಅವರು ಜೀವಿಸಿರುವಾಗ ಮಾಡಿರಿ. ಮರಣ ಹೊಂದಿದರೆ ಶತ್ರು ಕೂಡ ಅಳುತ್ತಾನೆಯಲ್ಲವೆ.

# ನನ್ನದೊಂದು ಪತ್ರ



ಹೆಚ್.ಎಂ. ವಾಣಿಶ್ರೀ
ದ್ವಿತೀಯ ಬಿ.ಎ. [ಹೆಚ್.ಇ.ಜಿ.]



ಪ್ರೀತಿಯ ಗೆಳೆಯ ಗೆಳತಿಯರೆ,

ನಮ್ಮ ದೇಶ ಭಾರತ ಹಲವು ಭಾಷೆ, ಧರ್ಮ ಮತ್ತು ಸಂಸ್ಕೃತಿಗಳನ್ನು ಒಳಗೊಂಡು ವೈವಿಧ್ಯತೆಯಲ್ಲಿ ಏಕತೆ ಸಾಧಿಸಿದ ರಾಷ್ಟ್ರ. ನೈಸರ್ಗಿಕ ಸಂಪನ್ಮೂಲಗಳಿಂದ ಕೂಡಿದ ಸಮೃದ್ಧ ದೇಶ. ಆದರೆ ಇಂದು ನಾವು ನಮ್ಮ ಜಾತಿ, ಧರ್ಮ, ಸಂಸ್ಕೃತಿ ಮೇಲೆಂದು ಹೇಳುತ್ತ ಪರಸ್ಪರ ಹೊಡೆದಾಟ ಬಡಿದಾಟಗಳಿಂದ ಶಾಂತಿಗೆ ಹೆಸರಾದ ಭಾರತ ಮಾತೆಗೆ ನೆತ್ತರು ಭಾರತಮಾತೆ ಎಂಬ ಬಿರುದು ಕೊಡಲು ಮುಂದಾಗಿದ್ದೇವೆ.

ಭಾರತ ದೇಶದಲ್ಲಿ ಶಾಂತಿಯೆ ಮಂತ್ರವಾಗಬೇಕು. ಶಾಂತಿಯುತವಾದ ಭಾರತದಲ್ಲಿ ಎಲ್ಲಿಯೂ ಕೂಡ ಅಶಾಂತಿ ಮೂಡದಂತೆ ಶಾಂತಿ ಕಾಪಾಡಬೇಕು. ದೇಶದ ಬೇರೆ ಭಾಷೆಯ, ಧರ್ಮದ ಜನರೆಲ್ಲ ನಮ್ಮ ಬಂಧುಗಳು. ನಮ್ಮಲ್ಲಿ ಯಾವುದೇ ರೀತಿಯ ಜಗಳಗಳು ಜರುಗದಂತೆ ನೋಡಿಕೊಳ್ಳಬೇಕು. ಪ್ರೀತಿ ವಿಶ್ವಾಸಗಳಿಂದ ಅವರನ್ನು ನಡೆಸಿಕೊಂಡು ಶಾಂತಿಯ, ಪ್ರೀತಿಯ ಬಾಳ್ವೆಯನ್ನು ಆಹ್ವಾನಿಸಬೇಕು. ಭಾರತ ದೇಶ ಸಂಪನ್ಮೂಲ ದೇಶ. ಅದರ ಉಪಯೋಗವೆಷ್ಟಿದೆ ಎಂಬುದು ನಮಗೆ ತಿಳಿದಿಲ್ಲ. ಅದನ್ನು ಬಳಸಿಕೊಳ್ಳುವ ರೀತಿಯಾಗಲಿ, ತಂತ್ರಜ್ಞಾನವಾಗಲಿ ತಿಳಿದುಕೊಳ್ಳುತ್ತಿಲ್ಲ. ಆದರೆ ಬೇರೆ ದೇಶದ ಜನರು ಅದರ ಉಪಯೋಗಗಳನ್ನು ಬಳಸಿಕೊಳ್ಳುವ ಹಾದಿಯಲ್ಲಿದ್ದಾರೆ. 'ಸಂಪನ್ಮೂಲ ನಮ್ಮದು ಸದುಪಯೋಗ ಅವರದು' ಎನ್ನುವ ಸ್ಥಿತಿ ಭಾರತದ್ದಾಗಿದೆ.

ನಮಗೆ ದೇಶವೆ ಆಸ್ತಿ ಎಂಬುದನ್ನು ಮನಗಾಣ ಬೇಕಾಗಿದೆ. ಜನರಲ್ಲಿ ದೇಶದ ಬಗ್ಗೆ ಅಭಿಮಾನ, ಪ್ರೀತಿ ಮೂಡುವಂತೆ ಮಾಡಬೇಕು. ಮುಂದೆ ಬರುವ ಯುವ ಪೀಳಿಗೆಗೆ ತಿಳಿ ಹೇಳಿ ಮಾರ್ಗದರ್ಶನ ನೀಡಬೇಕು. ಅದನ್ನು ಬಿಟ್ಟು ನಾವು ದೇಶಕ್ಕಾಗಿ ಹೋರಾಡುತ್ತಿದ್ದೇವೆಂದು ಜಾತಿ, ಧರ್ಮ, ಸಂಸ್ಕೃತಿಗಳನ್ನು ಮುಂದೆ ತಂದು ಹೊಡೆ ದಾಡಿಕೊಂಡು ಕಾಲ ಕಳೆಯಬಾರದು.

ಭಾರತ ದೇಶ ನಮ್ಮದು. ಭಾರತದಲ್ಲಿ ವಾಸಿಸುವ ಪ್ರತಿಯೊಬ್ಬ ವ್ಯಕ್ತಿಯೂ ನಮ್ಮವನೆ. ನಮ್ಮ ಮನೆಯವನಂತೆ ಭಾವಿಸಿದರೆ ದೇಶದ ಉದ್ದಗಲಕ್ಕೂ ಹರಡಿರುವ ಸ್ವಾರ್ಥ, ಕೊಲೆ, ದರೋಡೆ, ಭಯೋತ್ಪಾದನೆ, ಕೋಮುಗಲಭೆ ಇವುಗಳಿಗೆ ಜಾಗವೆ ಇರುವುದಿಲ್ಲ. ನಮ್ಮ ದೇಶ ಕಂಡ ಗಾಂಧಿಯಂತಹ ಮಹಾನ್ ವ್ಯಕ್ತಿಗಳು ಸಾರಿದ ಅಹಿಂಸಾ ಮಾರ್ಗ ಪಾಲಿಸಬೇಕು. ಇದರೊಂದಿಗೆ ಭಾರತ ಸಹಬಾಳ್ವೆಗೆ ಆಸ್ತಿಯಾಗಿರುವ ಇಂದಿನ ಯುವ ಪೀಳಿಗೆಯನ್ನು ಎಚ್ಚೆತ್ತು ಕೊಳ್ಳುವಂತೆ ಮಾಡಿ 'ನವ ಭಾರತವನ್ನು ಸೃಷ್ಟಿಸೋಣ. ಚೆನ್ನಾಗಿ ಯೋಚಿಸಿ ನಿರ್ಧಾರ ಕೈಗೊಳ್ಳಿ ನನ್ನ ಪ್ರೀತಿಯ ಗೆಳೆಯ ಗೆಳತಿಯರೆ. ನಮ್ಮ ದೇಶ ಕಟ್ಟೋಣ ಎಂದು ಹೇಳುತ್ತ ನನ್ನ ಲೇಖನಕ್ಕೆ ಅಂತ್ಯವಾಡುತ್ತೇನೆ.

# ನಮ್ಮ ರಾಷ್ಟ್ರಾಧ್ಯಕ್ಷ ಅಬ್ದುಲ್ ಕಲಾಂ



ಗೀತಾಂಜಲಿ ಎನ್
ದ್ವಿತೀಯ ಬಿ.ಎ. [ಹೆಚ್.ಇ.ಕೆ.]

ನಮ್ಮ ದೇಶದ ಪ್ರಥಮ ಪ್ರಜೆ ವಿಜ್ಞಾನ ಕ್ಷೇತ್ರದಲ್ಲಿ ನಿಚ್ಚಳ ಧ್ರುವತಾರೆಯಾಗಿರುವ ಅಬ್ದುಲ್ ಕಲಾಂರವರು ಮಹಾ ಪ್ರತಿಭಾವಂತರು. ಈ ದೇಶ ಕಂಡ ಶ್ರೇಷ್ಠ ವಿಜ್ಞಾನಿಗಳಲ್ಲಿ ಅಬ್ದುಲ್ ಕಲಾಂ ಒಬ್ಬರು. ರಾಮೇಶ್ವರದ ಒಂದು ಬಡ ಕುಟುಂಬದಲ್ಲಿ ಜನಿಸಿದ ಮಗನನ್ನು ಶಾಲಾ-ಕಾಲೇಜುಗಳಿಗೆ ಕಳಿಸಲು ಹೆತ್ತವರು ಪಟ್ಟ ಕಷ್ಟ ಅಪಾರ. ಬಾಲಕ ಅಬ್ದುಲ್ ಕಲಾಂರನ್ನು ಪ್ರೋತ್ಸಾಹಿಸಿದವರಲ್ಲಿ ಶಿವ ಸುಬ್ರಹ್ಮಣ್ಯ ಅಯ್ಯರ್ [ರಾಮೇಶ್ವರದ ಪ್ರಾಥಮಿಕ ಶಾಲಾ ಅಧ್ಯಾಪಕ] ಹಾಗೂ ಇಯೊದುರೈ ಸುಲೊಮನೆ [ಹೈಸ್ಕೂಲಿನ ಅಧ್ಯಾಪಕರು] ಮೊದಲಿಗರು. ಒಂದು ವಿಶೇಷವೆಂದರೆ ಅಬ್ದುಲ್ ಕಲಾಂರ ಪರಿಪೂರ್ಣ ಶಿಕ್ಷಣ ಸ್ವದೇಶದಲ್ಲೇ ನಡೆಯಿತು.

1958ರಲ್ಲಿ ಡಿಆರ್‌ಡಿಓದ ಸಂಶೋಧಕ ವಿಜ್ಞಾನಿಯಾಗಿ ವೃತ್ತಿ ಜೀವನಾರಂಭ ಪ್ರಥಮದಲ್ಲೇ ಹೋವರ್ ಕ್ರಾಫ್ಟ್‌ನ ಒಂದು ಮಾದರಿಯನ್ನು ರೂಪಿಸುವ ತಂಡದ ನಾಯಕ ಪಟ್ಟ, ಪ್ರಥಮ ಸ್ವದೇಶಿ ಹೋವರ್ ಕ್ರಾಫ್ಟ್‌ನ ನಿರ್ಮಾಣ ಅಂದು ದೊಡ್ಡ ಸಾಧನೆಯಾಗಿತ್ತು. ಅಬ್ದುಲ್ ಕಲಾಂರ ನೇತೃತ್ವದಲ್ಲಿ ತಯಾರಾದ ಅದರಲ್ಲಿ ಅಂದಿನ ರಕ್ಷಣಾ ಮಂತ್ರಿ ವಿ.ಕೆ. ಕೃಷ್ಣ ಮೆನನ್ ಪಯಣಿಸಿದ್ದರು.

1963ರಲ್ಲಿ ಇಸ್ರೋಕ್ಕೆ ಅಲ್ಲಿ ಎಳೆಗಳಿಂದ ಪ್ರಚಲಿತವಾದ ಪ್ಲಾಸ್ಟಿಕ್ ಬಗ್ಗೆ ಸಂಶೋಧನೆ ನಂತರ "ಥುಂಬಾ"ದಲ್ಲಿರುವ ಉಪಗ್ರಹ ಉಡಯನ ವಾಹನ [ಎಸ್.ಎಸ್.ಎಲ್.ವಿ-3] ಯೋಜನೆಯಲ್ಲಿ ನಿರ್ದೇಶಕರಾಗಿ ನೇಮಕ, 1980ನೇ ಜುಲೈ ತಿಂಗಳಲ್ಲಿ ರೋಹಿಣಿ ಉಪಗ್ರಹವನ್ನು ಕಕ್ಷೆಗೆ ಕಳಿಸುವ ಸಾಧನೆಯಲ್ಲಿ ಇವರದು ಸಿಂಹ ಪಾಲು. ಹೈದಾರಾಬಾದಿನ ರಕ್ಷಣಾ ಸಂಶೋಧನೆಯ ಅಭಿವರ್ಧನಾ ಪ್ರಯೋಗಾಲಯ [DRDL]ದ ನಿರ್ದೇಶಕರಾಗಿ ನೇಮಕ ಪ್ರಯೋಗಾಲಯಕ್ಕೆ ವೈಜ್ಞಾನಿಕ ವಾತಾವರಣ ತಂದುಕೊಟ್ಟ ಹಿರಿಮೆ, ನಿರ್ದೇಶಕರಾಗಿ ನಿರ್ಮಿಸಿದ ಬಂಗಲೆಯಲ್ಲಿ ವಾಸಿಸದೇ ಚಿಕ್ಕ ನಿವಾಸ ಒಂದರಲ್ಲಿ 10 ವರ್ಷ ವಾಸ. S.L.V - 3ರ ಯೋಜನಾ ರೂವಾರಿ ಅಬ್ದುಲ್ ಕಲಾಂ ಜವಾಬ್ದಾರಿ ಹೊತ್ತು ಭಾರತದ ಕ್ಷಿಪಣಿ ನಿರ್ಮಾಣ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಭಾರತವನ್ನು ಕ್ಷಿಪಣಿ ಸಶಕ್ತ ರಾಷ್ಟ್ರವನ್ನಾಗಿ ಮಾಡುವ ದೊಡ್ಡ ಸವಾಲು ಅಬ್ದುಲ್ ಕಲಾಂರವರಿಗೆ ಎದುರಾಯಿತು. ಅದರ ನೀಲ ನಕಾಶೆಯ ನಿರ್ಮಾಣದ ಹೊಣೆ DRDL ವಿಜ್ಞಾನಿಗಳ ತಂಡದೊಂದಿಗೆ 6 ತಿಂಗಳೊಳಗಾಗಿ ನೀಲಿ ನಕಾಶೆಯ ನಿರ್ಮಾಣ. ಒಂದು ದಶಕದ ಕಾಲಾವಧಿಯಲ್ಲಿ 5 ಕ್ಷಿಪಣಿಗಳಿಗೆ ಅಬ್ದುಲ್ ಕಲಾಂ ಇಟ್ಟ ಹೆಸರು ಅತ್ಯಂತ ವಿಶಿಷ್ಟ. ರಣರಂಗದಲ್ಲಿ ನೆಲದಿಂದ ನೆಲಕ್ಕೆ ಚಿಮ್ಮುವ ಕ್ಷಿಪಣಿ 'ಪೃಥ್ವಿ' ಟ್ಯಾಂಕ್ ವಿರೋಧಿ ಕ್ಷಿಪಣಿ 'ನಾಗ್' ನೆಲದಿಂದ ಚಿಮ್ಮಿ ಆಕಾಶದಲ್ಲಿ ಗುರಿಯಿಡುವ ಕಡಿಮೆ ವ್ಯಾಪ್ತಿಯ ಕ್ಷಿಪಣಿ 'ತ್ರಿಶೂಲ್' ಮಧ್ಯಮ ವ್ಯಾಪ್ತಿಯ ಉನ್ನತ ಕ್ಷಿಪಣಿ 'ಅಗ್ನಿ'.

ಅಬ್ದುಲ್ ಕಲಾಂರು ಪ್ರಮುಖ ತಂತ್ರಜ್ಞಾನ ಸಂಬಂಧಿ ಸಮಸ್ಯೆಗಳಿಗೆ ತಮ್ಮ ಗಮನ ಕೇಂದ್ರೀಕರಿಸಿದರು. ಇನ್ನುಳಿದ ಎಲ್ಲಾ ಆರ್ಥಿಕ ಹಾಗೂ ಕಾರ್ಯಕಾರಿ ಅಧಿಕಾರಗಳನ್ನು ಯೋಜನಾ ನಿರ್ದೇಶಕರಿಗೇ ಬಿಟ್ಟುಕೊಟ್ಟರು. ಯೋಜನೆಯಲ್ಲಿ ಪಾಲುಗೊಳ್ಳಬೇಕಾದ 20ಕ್ಕೂ ಹೆಚ್ಚಿನ ಸಂಸ್ಥೆಗಳ ಸಹಕಾರವನ್ನು ಒಗ್ಗೂಡಿಸಿದರು. ಅಂತರಾಷ್ಟ್ರೀಯ ಸ್ವೀಕೃತವಾಗಬಲ್ಲ ತಾಂತ್ರಿಕ ಮಟ್ಟವನ್ನು ತಲುಪಲು ಭಾರತಕ್ಕೆ ಸಾಧ್ಯ ಎಂಬುದನ್ನು ತೋರಿಸಿಕೊಡುವಲ್ಲಿ ಇವರದು ಪ್ರಮುಖ ಪಾತ್ರ.

ಕಲಾಂರವರು ಅಭಿವೃದ್ಧಿಸಿರುವ ತಂತ್ರಜ್ಞಾನದಿಂದ ಅನೇಕ ಪ್ರಯೋಜನಗಳಾಗಿವೆ. 'ಅಗ್ನಿ' ಗಾಗಿ ರೂಪಿಸಿದ ಕಾರ್ಬನ್ ಕಾಂಪೋಸಿಟ್ ಪದಾರ್ಥದಿಂದ ಪೋಲಿಯೋ ಪೀಡಿತ ಮಕ್ಕಳ ಕಾಲಿಗೆ ಆಧಾರವಾದ ಹಗುರ ಕ್ಯಾಲಿಪರ್ಸ್

ತಯಾರಿ ಸಾಧ್ಯವಾಗಿದೆ. ಸಿಕ್ಕಿಕೊಂಡ ಧಮನಿಗಳನ್ನು ಬಲೂನುಗಳ ಸಹಾಯದಿಂದ ತೆರೆಯುವ 'ಬಲೂನ್ ಆಂಜಿಯೋ ಪ್ಲಾನ್ಟೈ ಚಿಕಿತ್ಸೆ' ಯಲ್ಲಿ ರಕ್ತನಾಳಗಳು ಕುಸಿಯದಂತೆ ಮಾಡಲು "ಸ್ಟೆಂಟ್" ಎಂಬ ಸಜ್ಜನ್ನು ಬಳಸುತ್ತಾರೆ. ಇದು DRDL ನಲ್ಲಿ ಕಲಾಂರವರಿಂದ ರಕ್ಷಣಾ ಸಂಬಂಧಿತ ವಸ್ತುವಾಗಿ ತಯಾರಾದದ್ದು.

ಅಬ್ದುಲ್ ಕಲಾಂರವರಿಗೆ ಸಮೂಹ ಶಕ್ತಿಯಲ್ಲಿ ಹೆಚ್ಚು ನಂಬಿಕೆ. ಅನೇಕ ಯುವ ವಿಜ್ಞಾನಿಗಳನ್ನು ಸೇರಿಸಿ ಅವರಿಂದ ಅಸಾಧಾರಣ ಕೆಲಸಗಳನ್ನು ಪಡೆಯುವ ಸಾಮರ್ಥ್ಯ ಅಬ್ದುಲ್ ಕಲಾಂರವರಿಗಿದೆ. ದೇಶದ ವಿಶ್ವವಿದ್ಯಾನಿಲಯಗಳು, ರಕ್ಷಣಾ ಕಾರ್ಯ ಕ್ಷೇತ್ರಗಳು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ... ಮುಂತಾದೆಡೆಗಳಲ್ಲಿ ಆರಿಸಿಕೊಂಡ ವಿಜ್ಞಾನಿಗಳಿಂದ ಕಾರ್ಯ ತಂಡ ಕಟ್ಟಿದ್ದಾರೆ. ಅವರೊಂದಿಗೆ ಕೆಲಸ ಮಾಡಿದ ಹೆಚ್ಚಿನ ವಿಜ್ಞಾನಿಗಳು ಅವರಂತೆಯೇ ಸ್ವದೇಶದಲ್ಲೇ ಶಿಕ್ಷಣ ಪಡೆದವರು. ತನ್ನ ಎಲ್ಲ ಸಾಧನೆಯನ್ನು ಸಮೂಹದೊಂದಿಗೆ ಹಂಚಿಕೊಳ್ಳುವ ಸಹೃದಯಿ ಅಬ್ದುಲ್ ಕಲಾಂ ಹೇಳುತ್ತಾರೆ. "ನಾನು ಸಾಧಿಸಿದ್ದೆಲ್ಲ ಅಧ್ಯಾಪಕರ ಹಾಗೂ ಸಂಶೋಧನಾ ಇಲಾಖೆಗಳಲ್ಲಿರುವ ಸಾವಿರಾರು ವ್ಯಕ್ತಿಗಳ ಹೆಗಲುಗಳಲ್ಲಿ ನಿಂತು".

ಭಾರತ ಸರ್ವ ರೀತಿಯಿಂದಲೂ ಅದರಲ್ಲೂ ರಕ್ಷಣಾ ವಿಷಯದಲ್ಲಿ ಸಶಕ್ತವಾಗಬೇಕು ಎಂದು ವಾದಿಸುವ ಅಬ್ದುಲ್ ಕಲಾಂ ಹೇಳುತ್ತಾರೆ "ಬಲವಂತನಿಗೆ ಬಲವಂತನು ಗೌರವ ಕೊಡುತ್ತಾನೆ. ನಮ್ಮ ರಾಷ್ಟ್ರವು ಬಲವಂತರ ಸಾಲಿಗೆ ಸೇರಬೇಕು" ನಾಳೆಯ ಭಾರತವನ್ನು ಕುರಿತು ಅವರು ಹೇಳುತ್ತಾರೆ. "ಗುರಿಯಿದ್ದರೆ ಯಶಸ್ಸಿನ ದಾರಿ ತಾನಾಗಿಯೇ ತೆರೆದುಕೊಳ್ಳುತ್ತದೆ. ತಂತ್ರಜ್ಞಾನವೇ ರಾಷ್ಟ್ರದ ಆರ್ಥಿಕ ತಾಣ. ಸತ್ವಭರಿತ ಭಾರತದಲ್ಲಿ ಮಹಾಪ್ರತಿಭಾವಂತರಿದ್ದಾರೆ. ಈಗ ತುರ್ತಾಗಿ ಬೇಕಾಗಿರುವುದು ಸಕಲ ಸೌಲಭ್ಯಗಳಿಂದ ಕೂಡಿದ ಪ್ರಯೋಗಾಲಯಗಳು, ಸರ್ಕಾರದಿಂದ ಹೆಚ್ಚಿನ ಆರ್ಥಿಕ ಸಹಾಯ, ವಿಜ್ಞಾನ ಕ್ಷೇತ್ರಕ್ಕೆ ಉತ್ತಮ ನಾಯಕತ್ವ ಎಲ್ಲಕ್ಕೂ ಮಿಗಿಲಾಗಿ ದೃಢ ನಿರ್ಧಾರದ ಯುವಕರು" ದೇಶದ ಯುವಕರಿಗೆ ಅವರು ಹೀಗೆ ಕರೆ ನೀಡುತ್ತಾರೆ. "ಕನಸುಗಾರರಾಗಿ, ಆ ಕನಸಿನ ಚಿಂತನೆಗೆ ತೊಡಗಿ ನಂತರ ನನಸಾಗಿ, ಪರಿವರ್ತಿಸಿ, 100 ಕೋಟಿ ಜನರ ರಾಷ್ಟ್ರ ನಮ್ಮದು. 100 ಕೋಟಿ ಜನರಂತೆ ಯೋಚಿಸಬೇಕು, ಆಗ ಮಾತ್ರ ನಾವು ಅಭಿವೃದ್ಧಿ ಹೊಂದಲು ಸಾಧ್ಯ" ಯುವ ವಿಜ್ಞಾನಿಗಳನ್ನು ಕಂಡರೆ ಅಬ್ದುಲ್ ಕಲಾಂರವರಿಗೆ ತುಂಬಾ ಅಚ್ಚುಮೆಚ್ಚು. ಅದರಲ್ಲೂ ಚಿಕ್ಕ ಮಕ್ಕಳೆಂದರೆ ಹೆಚ್ಚು ಪ್ರೀತಿ. ಮಕ್ಕಳನ್ನು ಚಿಕ್ಕಂದಿನಿಂದಲೇ ವಿಜ್ಞಾನ ಪ್ರಿಯರನ್ನಾಗಿಸುವ ಆಸೆ ಅವರದು. ಅದಕ್ಕಾಗಿಯೇ ಈಗ ತಮ್ಮ ಸೇವಾವಧಿಯಲ್ಲೇ ನಿವೃತ್ತರಾಗಿ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ಮುಂದಾಗಿದ್ದಾರೆ. ಇತ್ತೀಚೆಗೆ ಅವರು ದೇಶದ ಬಹಳಷ್ಟು ರಾಜ್ಯಗಳಿಗೆ ಭೇಟಿಕೊಟ್ಟಿದ್ದು ಪ್ರೌಢಶಾಲೆಗಳ ಸುಮಾರು 15000 ವಿದ್ಯಾರ್ಥಿಗಳನ್ನು ಭೇಟಿಯಾಗಿದ್ದಾರೆ. ಅವರೊಂದಿಗೆ ತಮ್ಮ ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಹೀಗೆ ಅಬ್ದುಲ್ ಕಲಾಂರವರು ತಮ್ಮ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಂಡು ವಿಶ್ವದಲ್ಲಿ ಅನೇಕ ಸಂಶೋಧನೆಗಳನ್ನು ನಡೆಸಿ ಪ್ರಸಿದ್ಧ ವಿಜ್ಞಾನಿ ಎಂದು ಹೆಸರು ಗಳಿಸಿದ್ದಾರೆ.

ಸಹೃದಯಿ ಸರಳಜೀವಿಯಾದ APJ ಅಬ್ದುಲ್ ಕಲಾಂ ಬಡತನದಲ್ಲಿ ಹುಟ್ಟಿ ಬೆಳೆದರೂ ಸಿರಿತನಕ್ಕೆ ಆಸೆ ಪಟ್ಟವರಲ್ಲ. ಮಹಾವಿಜ್ಞಾನಿ ಆದರೂ ಗರ್ವ ಪಟ್ಟವರಲ್ಲ. ಇವರು ಸದಾ ಸರಳ ಹೃದಯಿ, ಸರಳ ಜೀವಿ, ಥುಂಬಾದಲ್ಲಿರುವಾಗ ವರ್ಷಾವಧಿ ರಜೆಗೆ ಊರು ರಾಮನಾಥಪುರಕ್ಕೆ ಬಂದಾಗ ಅಂಗಡಿ ನಡೆಸುತ್ತಿದ್ದ ಸಹೋದರರಿಗೆ ಸಹಾಯ ಮಾಡುತ್ತಿದ್ದರು. ಅಂಗಡಿಯಲ್ಲಿ ವರ್ತಮಾನ ಪತ್ರಿಕೆ ಮಾರುತ್ತಿದ್ದರು. ಹಾಡು ಮತ್ತು ವೀಣೆಗಳೆರಡು ಪ್ರಿಯ. ತಮಿಳಿನಲ್ಲಿ ಕೆಲವು ಕವನ ರಚಿಸಿದ್ದಾರೆ. ಮೆದು ಮಾತಿನ ಕಲಾಂ ಸಂಘ ಜೀವಿ. ಜೀವನ ಪರ್ಯಂತ ವಿಜ್ಞಾನವನ್ನೇ ಸಂಗಾತಿಯನ್ನಾಗಿಸಿಕೊಂಡು ಮದುವೆಯಾಗುವುದನ್ನೇ ಕೈಬಿಟ್ಟರು. ಹೀಗೆ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಹಾಗೂ ದೇಶಾಭಿಮಾನ ಬೆಳೆಸುವ ಕಾಯಕದಲ್ಲಿ ತೊಡಗಿದ್ದಾರೆ. ಅಬ್ದುಲ್ ಕಲಾಂ ರವರು ನಮ್ಮೆಲ್ಲರ ಜೊತೆಯಲ್ಲಿ ಇಲ್ಲದಿದ್ದರು ಅವರ ನೆನಪುಗಳು ಮಾತ್ರ ನಮ್ಮ ಜೊತೆಯಲ್ಲಿರುತ್ತದೆ.

# ಪರೀಕ್ಷೆ ಸವಾಲು ಎದುರಿಸುವುದು ಹೇಗೆ?



ಅನಿತ ಸಿ.ಎನ್.
ತೃತೀಯ ಬಿ.ಬಿ.ಎಂ.

ಪರೀಕ್ಷೆ ಹತ್ತಿರವಾಗುತ್ತಿದ್ದಂತೆ ವಿದ್ಯಾರ್ಥಿಗಳಿಗೆ ಪರೀಕ್ಷೆ ಜ್ವರವೇರುವ ಸಮಯ, ವರ್ಷವಿಡಿ ತಯಾರಿ ನಡೆಸಿದ ವಿದ್ಯಾರ್ಥಿಯಲ್ಲಿ ಆತ್ಮವಿಶ್ವಾಸವಿದ್ದರೆ, ಇನ್ನುಳಿದವರಲ್ಲಿ ಆತಂಕ, ಭಯ, ಹಿಂಜರಿಕೆ, ಮಾನಸಿಕ ಗೊಂದಲವಿರುತ್ತದೆ. ಕೇವಲ 3 ಗಂಟೆಯಲ್ಲಿ ಉತ್ತರಿಸಿ



ತನ್ನ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದ ಒಬ್ಬ ವಿದ್ಯಾರ್ಥಿ ತಾನು ಯಾವ ರೀತಿ ಪರೀಕ್ಷೆಗೆ ತಯಾರಿ ಮಾಡಿಕೊಳ್ಳಬೇಕು ಎಂಬುದು ಬಹಳ ಮಹತ್ವದ ಸಂಗತಿ. ಸಾಮಾನ್ಯವಾಗಿ ವಾರ್ಷಿಕ ಪರೀಕ್ಷೆಗಳು ಹತ್ತಿರ ಬರುತ್ತಿದ್ದಂತೆ ಶಾಲಾ, ಕಾಲೇಜ್, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಒಂದು ರೀತಿ ಬೆದರುತ್ತಾರೆ, ಮಂಕಾಗುತ್ತಾರೆ. ಉತ್ಸಾಹ, ಸಂತೋಷ ಕಳೆದುಕೊಂಡು ತಳಮಳರಾಗುತ್ತಾರೆ. ಇದಕ್ಕೆ ಈಗಿನ ಪರೀಕ್ಷೆ ಪದ್ಧತಿ ಎಷ್ಟು ಕಾರಣವೋ, ವಿದ್ಯಾರ್ಥಿಗಳು ಕೂಡ ಸ್ವತಃ ಕಾರಣ. ಆದುದ್ದರಿಂದ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನವನ್ನು ಕ್ರಮಬದ್ಧವಾಗಿ ಯೋಚಿಸಿ ಉತ್ತಮ ಅಂಕಗಳನ್ನು ಪಡೆದು ತೇರ್ಗಡೆಯಾಗುತ್ತೇವೆ ಎಂಬ ಆತ್ಮವಿಶ್ವಾಸದಿಂದ ಅಭ್ಯಾಸ ನಡೆಸಿದರೆ ತಮ್ಮ ಊಹೆಗೂ ಮೀರಿದ ಗುಣ ಮುಟ್ಟಲು ಸಾಧ್ಯವಾಗುತ್ತದೆ. ಒಂದು ಕಾಲೇಜಿನಲ್ಲಿ ಅಧ್ಯಾಪಕರು ಪಾಠ, ಪ್ರವಚನಗಳು, ಪಠ್ಯಕ್ರಮಗಳು, ಪ್ರಶ್ನೆ ಪತ್ರಿಕೆಗಳು – ಎಲ್ಲಾ ವಿದ್ಯಾರ್ಥಿಗಳಿಗೆ ಒಂದೇ ಆಗಿದ್ದರೂ ಪಾಸು, ಫೇಲು, ಪ್ರಥಮ, ದ್ವಿತೀಯ, ರ್‍ಯಾಂಕ್ ಹೀಗೆ ಪ್ರತಿಯೊಬ್ಬ ವಿದ್ಯಾರ್ಥಿಯು ಫಲಿತಾಂಶ ಬೇರೆ ಬೇರೆಯಾಗಿರುತ್ತದೆ.

ವಿದ್ಯಾರ್ಥಿಗಳ ನಡತೆಯಲ್ಲಿ ಪರೀಕ್ಷೆಗೆ ಮೊದಲು ಕಂಡುಬರುವ ಸಾಮಾನ್ಯ ಲೋಪ ದೋಷಗಳನ್ನು ಹೀಗೆ ಪಟ್ಟಿ ಮಾಡಬಹುದು.

1) ತರಗತಿಗಳಿಗೆ ಕ್ರಮಬದ್ಧವಾಗಿ ಹಾಜರಾಗದಿರುವುದು
2) ತರಗತಿಗಳಿಗೆ ಹಾಜರಾದರು ಪಾಠ ಪ್ರವಚನಗಳ ಕಡೆ ಆಸಕ್ತಿ ಇಲ್ಲದಿರುವುದು
3) ಪಾಠ ಮತ್ತು ಪ್ರವಚನಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದಿರುವುದು
4) ನಿರುತ್ಸಾಹ, ಬೇಸರ, ಸೋಮಾರಿತನ
5) ಓದಲು ಪುಸ್ತಕದ ಮುಂದೆ ಕುಳಿತರೂ ಮನಸ್ಸು ಬೇರೆಡೆ ಹರಿಯುವುದು

'ಪರೀಕ್ಷೆ ಸಮೀಪಿಸಿದಂತೆ ಪರೀಕ್ಷಾ ಕೊಠಡಿಯಲ್ಲಿನ ಸಮಸ್ಯೆ.'

1) ಭಯ, ಗಾಬರಿ, ಉದ್ವೇಗದಿಂದ ಓದಿದ್ದು ನೆನಪಾಗದೆ ಇರುವುದು
2) ವೇಳೆ ಸಾಲದೆಂದು ಬೇಗನೆ ಬರೆದು ಮುಗಿಸುವ ತವಕ
3) ಪ್ರಶ್ನೆ ಸಂಖ್ಯೆ ಸರಿಯಾಗಿ ನಮೂದಿಸದಿರುವುದು
4) ಅಕ್ಷರ ಸ್ಫುಟವಾಗಿರದೇ ಇರುವುದು
5) ಪ್ರಶ್ನೆಗಳು ಅರ್ಥವಾಗದೆ ಅಸಂಬದ್ಧ ಉತ್ತರ ಬರೆಯುವುದು

# ಕಷ್ಟಗಳೇ ಯಶಸ್ಸಿನ ಮೆಟ್ಟಿಲುಗಳು



**ವಸಂತಕುಮಾರಿ ಎಲ್**
ತೃತೀಯ ಬಿ.ಕಾಂ.

ನಮ್ಮ ಬಗ್ಗೆ ನಮಗೆ ನಾಚಿಕೆಯಾಗಬೇಕು. ಉದ್ಯೋಗದ ಅವಧಿಯಲ್ಲಿ ಮಾಡುವ ಕೆಲಸಬಿಟ್ಟು ಫೇಸ್‌ಬುಕ್‌ನಲ್ಲೋ, ವಾಟ್ಸ್‌ಆಪ್‌ನಲ್ಲೋ ಮತ್ತೊಬ್ಬರ ಮೇಲೆ ವಿಷಕಾರುತ್ತ, ಕಛೇರಿಯಲ್ಲಿ ವೈಫೈ ಕನೆಕ್ಟ್ ಆಗದಿದ್ದರೆ ಪ್ರಾಣ ಹೋದಂತೆ ಚಡಪಡಿಸುವ, ನಾಲ್ಕನೇ ತರಗತಿಯ ಮಕ್ಕಳ ಸಹಪಾಠಿಗಿಂತ ಎರಡು ಅಂಕ ಕಡಿಮೆ ತೆಗೆದಿದ್ದಕ್ಕೆ ಒತ್ತಡದಲ್ಲಿದ್ದು ರಾತ್ರಿ ನಿದ್ರೆ ಬಿಟ್ಟು ಮರುದಿನ ತಲೆನೋವಿನಿಂದ ನರಳುವ ನಾವು ಮತ್ತು ನಮ್ಮಂಥ ಬಹುಸಂಖ್ಯಾತರ ಸಮಸ್ಯೆಗಳೆಲ್ಲ ಎಷ್ಟು ಕ್ಷುಲ್ಲಕ ಅಲ್ಲವೆ? ವೈದ್ಯಕೀಯ ಸೀಟು ಸಿಗದಿದ್ದಕ್ಕೆ ತಲೆಕೊಡುವ ಯುವ ಪ್ರತಿಭೆಗಳು, ಮುಖದಲ್ಲೊಂದು ಮೊಡವೆ ಆಗಿದ್ದಕ್ಕೆ ನಾಯಕಿ ಕಾಲೇಜಿಗೆ ಹೋಗದೆ ಸಿನಿಮಾ, ಹೃದಯ ಸಂಬಂಧಿ ಕ್ಯಾನ್ಸರ್, ಇತರೆ ರೋಗವಿದೆ ಎಂದು ಗೊತ್ತಾಗುತ್ತಲೇ ಜೀವನ ಮುಗಿಯಿತು ಎನ್ನುವ ನಿರ್ಧಾರ ನಮ್ಮ ಮಾನಸಿಕ ದೌರ್ಬಲ್ಯವನ್ನು ತೋರುವುದಲ್ಲದೇ ಬೇರೇನೂ ಇಲ್ಲ.

ಕೊಂಚ ಯೋಚಿಸಿ, ಒಬ್ಬ ಸೈನಿಕ 20,500 ಅಡಿ ಎತ್ತರದಲ್ಲಿ ಮೈನಸ್ 50–55$^0$ ಸೆಂಟಿಗ್ರೇಡ್ ಉಷ್ಣಾಂಶದಲ್ಲಿ ಒಟ್ಟಾರೆ, ಮನುಷ್ಯ ವಾಸಿಸಲು ಯೋಗ್ಯವಿಲ್ಲದ ಸಿಯಾಚಿನ್ ಪ್ರದೇಶದಲ್ಲಿ ಸೇವೆ ಸಲ್ಲಿಸಲು ಯಾವ ಕಾರಣಕ್ಕೂ ಹಿಂಜರಿಯುವುದಿಲ್ಲ. ಆರು ದಿನದ ಬದುಕಿಗಾಗಿ ಹನುಮಂತಪ್ಪ ಕೊಪ್ಪದ ಅವರ ಹಿಮದಡಿಯ ಹೋರಾಟ ನಮ್ಮ ಮನೋಬಲಕ್ಕೊಂದು ಗಟ್ಟಿಯಾದ ಸಾಕ್ಷಿ. ನಾವು ನಮ್ಮ ಸೋಲಿಗೆ ಯಾವಾಗಲೂ ಪರಿಸ್ಥಿತಿಯನ್ನು ಹೊಣೆ ಮಾಡುತ್ತೇವೆ. ರವೀಂದ್ರನಾಥ ಠಾಗೋರ್ ಹೇಳುವಂತೆ "ಸಮಸ್ಯೆಗಳಿಂದ ರಕ್ಷಣೆ ಕೊಡು ಎಂದು ನಾವು ಪ್ರಾರ್ಥನೆ ಮಾಡುವುದಕ್ಕಿಂತ ಅದನ್ನು ಎದುರಿಸುವಾಗ ಭೀತಿ ಪಡದಿರುವಂತೆ ಧೈರ್ಯ ನೀಡು ಎಂದು ಪ್ರಾರ್ಥಿಸಬೇಕು". ನಮ್ಮ ಬದುಕಿನ ಪರಿಸ್ಥಿತಿಗಳು ಸಿಯಾಚಿನ್‌ನ ಸೋನಂ ಚೆಕ್ ಪೋಸ್ಟ್‌ನ ಪರಿಸ್ಥಿತಿಗಿಂತ ಭೀಕರವಾಗಿದೆಯೆ? ದೇಶಕ್ಕೋಸ್ಕರ ಸೈನಿಕರು ಅಂಥ ರಿಸ್ಕ್ ತೆಗೆದುಕೊಳ್ಳುವಾಗ ನಮಗೆ ನಮ್ಮ ಬದುಕಿಗೋಸ್ಕರ ಒಂದಿಷ್ಟು ಕಷ್ಟಗಳನ್ನು ಎದುರಿಸಲಾಗುವುದಿಲ್ಲವೇ?

ನಿಜ ಹೇಳಬೇಕೆಂದರೆ, ಕಷ್ಟಗಳು ಮನುಷ್ಯನನ್ನು ನಿಜವಾದ ಅರ್ಥದಲ್ಲಿ ಯಶಸ್ಸಿನತ್ತ ಕೊಂಡೊಯ್ಯುತ್ತವೆ. ಹದಿನೇಳನೆಯ ಶತಮಾನದ ನಾಟಕಕಾರ ವೋಲಿಯರ್ ಪ್ರಕಾರ ಬದುಕಿನ ಹಾದಿಯ ತಡೆ ಎಷ್ಟು ದೊಡ್ಡದಿದೆಯೋ ಅದನ್ನು ಮೀರುವುದು ಅಷ್ಟೇ ಸಾಹಸಮಯ. ಸವಾಲುಗಳಿಂದ ಕೂಡಿದ ಬದುಕು ಮಾತ್ರ ಉತ್ತಮ ಫಲಿತಾಂಶ ತರಬಲ್ಲವು. ಬಹುತೇಕ ಸಾಧಕರೆಲ್ಲರ ಹಾದಿಯೂ ಹೋರಾಟದ್ದೆ. ಯಾವ ಯಶಸ್ವಿ ವ್ಯಕ್ತಿಯೂ ಹೂವಿನ ಹಾಸಿಗೆಯ ಮೇಲೆ ನಡೆದವನಲ್ಲ. ಬದಲಾಗಿ ಮುಳ್ಳಿನ ಮೇಲೆ ಕಷ್ಟಪಟ್ಟು ನಡೆದವರೆ.

ಹಾಗಾಗಿ ಪದೇ ಪದೇ ಬರುವ ಕಷ್ಟಗಳು ನಮ್ಮನ್ನು ಗಟ್ಟಿಗೊಳಿಸಲಿಕ್ಕೆ ಬರುತ್ತಿವೆ ಎಂದು ಸಕಾರಾತ್ಮಕವಾಗಿ ಅಂದುಕೊಳ್ಳಬೇಕು. ಜಿರಾಫೆಯ ಬದುಕಿನ ಒಂದು ಸಂಗತಿಯನ್ನು ಉದಾಹರಣೆಯಾಗಿ ತೆಗೆದುಕೊಳ್ಳಿ. ಜಿರಾಫೆ ನಿಂತುಕೊಂಡೆ ಬಹು ಎತ್ತರದಿಂದ ಮರಿ ಹಾಕುತ್ತದೆ. ಹೀಗಾಗಿ ಆಗತಾನೆ ಹುಟ್ಟಿದ ಮರಿಗೆ ಭೂಮಿಯ ಮೇಲೆ ಬಂದಾಕ್ಷಣ ಆಗುವ ಮೊದಲ ಅನುಭವವೆಂದರೆ ಸುಮಾರು ಎರಡು ಮೀಟರ್ ಎತ್ತರದಿಂದ ನೆಲಕ್ಕೆ ಬೀಳುವುದು. ಆಘಾತದಿಂದ ಚೇತರಿಸಿಕೊಂಡು ಆ ಮರಿ ಏಳಲು ಪ್ರಯತ್ನಿಸುತ್ತದೆ. ಆಗ ತಾಯಿ ಜಿರಾಫೆ ಬಹು ವಿಚಿತ್ರವಾಗಿ ವರ್ತಿಸುತ್ತದೆ. ಮರಿ ಏಳುತ್ತಿದ್ದಂತೆ ತಾಯಿ ಮತ್ತೆ ಮತ್ತೆ ಒದೆಯುತ್ತದೆ. ಮರಿ ಸುಸ್ತಾಗಿ ಸೋತು ಸುಣ್ಣವಾಗುವ ತನಕ ಈ

ಶಿಕ್ಷಣ ಮುಂದುವರೆಯುತ್ತದೆ. ಕಾರಣ ಇಷ್ಟೆ, ತನ್ನ ಬೇಟೆಗಾರರಿಂದ ರಕ್ಷಿಸಿಕೊಳ್ಳಲು ಜಿರಾಫೆ ಕಲಿಯಬೇಕಾದ ಮೊದಲ ಪಾಠ ಎಂದರೆ ತಕ್ಷಣ ಎದ್ದು ನಿಂತು ಓಡಲು ಪ್ರಾರಂಭಿಸುವುದು. ಹಾಗೆ ತನ್ನ ಮರಿಗೆ ಕೊಡುವ ಶಿಕ್ಷಣ ನೋಡಿ ಪ್ರಾರಂಭದಲ್ಲಿ ಮರಿಗೆ ನುಣುಪಾದ ವಸ್ತುಗಳನ್ನು ಹಾಕಿ ಹಾಸಿಗೆ ರೀತಿ ಮಾಡುತ್ತದೆ. ಆದರೆ ಮರಿ ಬೆಳೆಯುತ್ತಿದ್ದಂತೆ ಗೂಡಿನೊಳಗಿನ ನುಣುಪಾದ ವಸ್ತುಗಳನ್ನು ತೆಗೆದು ಮುಳ್ಳಿನಿಂದ ಚುಚ್ಚುವಂತಹ ವಸ್ತುಗಳನ್ನು ಇಡುತ್ತದೆ. ಉದ್ದೇಶ ಇಷ್ಟೇ ಮರಿ ಕಾಗೆ ಹೊರಗಿದ್ದುಕೊಂಡು ಹಾರುವುದನ್ನು ಕಲಿಯಲಿ ಎಂದು. ಜಗತ್ತಿನಲ್ಲಿ ಮಹಾನ್ ವ್ಯಕ್ತಿಗಳಾಗಿ ಹುಟ್ಟಿದವರು ಯಾರೂ ಇಲ್ಲ. ಆದರೆ ದೊಡ್ಡ ದೊಡ್ಡ ಸವಾಲುಗಳನ್ನು, ಕಷ್ಟಗಳನ್ನು ಎದುರಿಸಿದ ಸಾಮಾನ್ಯ ವ್ಯಕ್ತಿಗಳು ಮಹಾನ್ ವ್ಯಕ್ತಿಗಳಾಗಿದ್ದಾರೆ.

---

## ಕವನಗಳು

ಶಿವರಂಜಿನಿ ಎಂ.
ಪ್ರಥಮ ಬಿ.ಕಾಂ.

### ನಂಬಿಕೆ

ಸಾವನ್ನು ಪ್ರೀತಿಸೋಕೆ
ಸಾವಿರ ದಾರಿಗಳಿವೆ ಆದರೆ
ಬದುಕನ್ನು ಪ್ರೀತಿಸೋಕೆ
ಒಂದೇ ದಾರಿ
ಅದೇ ಆತ್ಮ ವಿಶ್ವಾಸ

### ಆಕಾಂಕ್ಷೆ

ಕಳೆದು ಹೋದ ದಿನಗಳು ಮರೆಯಲಾಗುವುದು
ಮರಳಿ ಬರುವ ದಿನಗಳನ್ನು ತಡೆಯಲಾಗದು
ಶುಭವ ಕೋರಿ ಬರುವುದು ಶ್ರೀಗಳ ಆಶೀರ್ವಾದವು
ಹೊಸತನ ತರಲಿ ಹರುಷ ತರಲಿ ನಮ್ಮ ಈ ಸಂಸ್ಥೆಗೆ

### ವಿದ್ಯೆ

ವಿದ್ಯೆ ಒಂದು ನೀತಿ
ವಿದ್ಯೆ ಕಲಿಸುವುದು ಪ್ರೀತಿ
ವಿದ್ಯೆ ಜ್ಞಾನಕ್ಕೆ ರೀತಿ
ವಿದ್ಯೆ ತೊಲಗಿಸುವುದು ಬೀತಿ
ಅದಕ್ಕೆ ಬೇಕು ಪುಸ್ತಕದ ಪ್ರೀತಿ

### ನಮ್ಮ ಜೆಎಸ್‌ಎಸ್ ಕಾಲೇಜು

ಆಕಾಶದಲ್ಲಿ ಮಿನುಗುವ ನಕ್ಷತ್ರವಾಗಿ
ಬಡ ವಿದ್ಯಾರ್ಥಿಗಳ ಆಶ್ರಯವಾಗಿ
ಕೊಳ್ಳೇಗಾಲದ ಮಲ್ಲಿಗೆಯಾಗಿ
ಹೊಳೆಯುತ್ತಿರುವ ನಮ್ಮ ಜೆ.ಎಸ್.ಎಸ್. ಕಾಲೇಜು
ಸ್ವಾಮೀಜಿಯವರ ವರ ಪ್ರಸಾದದಿಂದ
ಶಿಸ್ತಿನ ಉಪಾಧ್ಯಾಯರುಗಳಿಂದ
ಸಹಕರಿಸುವ ವಿದ್ಯಾರ್ಥಿಗಳಿಂದ
ಮರೆಯುತ್ತಿರುವ ನಮ್ಮ ಜೆಎಸ್‌ಎಸ್ ಕಾಲೇಜು
ಇದರ ಕೀರ್ತಿ ಅಳಿಯದೆ ಉಳಿಯಲಿ
ಹೊಳೆ ಹೊಳೆಯಾಗಿ ಹರಿಯಲಿ
ಕರ್ನಾಟಕ ಮನೆ ಮಾತಾಗಿರುವ
ನಮ್ಮ ಜೆಎಸ್‌ಎಸ್ ಕಾಲೇಜು
ವಿಶ್ವ ಮನೆಮಾತಾಗಲಿ

### ಜೀವನ ಎಂದರೆ ಏನು...?

ಜೀವನ ಎಂಬುದು ಸವಾಲಿನಂತೆ – ಸ್ವೀಕರಿಸಿ
ಜೀವನ ಎಂಬುದು ಸಾಹಸ – ಧೈರ್ಯದಿಂದ ಮುನ್ನುಗ್ಗಿ
ಜೀವನವು ಆನಂದಮಯವಾದುದು – ಅನುಭವಿಸಿ
ಜೀವನ ಒಂದು ಅಪಘಾತವಿದ್ದಂತೆ – ಅದನ್ನು ದಾಟಿ ಬನ್ನಿ
ಜೀವನವೆಂಬುದು ಹೋರಾಟ – ಒಪ್ಪಿಕೊಳ್ಳಿ
ಜೀವನವು ಸಾಗರವಿದ್ದಂತೆ – ಈಜಿ ಹೊರ ಬನ್ನಿ
ಜೀವನವು ಕರ್ತವ್ಯವಿದ್ದಂತೆ – ನಿರ್ವಹಿಸಿ
ಜೀವನವೊಂದು ಹಾಡಿನಂತೆ – ಆನಂದದಿಂದ ಹಾಡಿ
ಜೀವನವೊಂದು ಸದಾವಕಾಶವಿದ್ದಂತೆ – ಬಳಸಿಕೊಳ್ಳಿ
ಜೀವನವೆಂಬುದು ಕನಸು – ನನಸುಗೊಳಿಸಿ
ಜೀವನವು ವಾಗ್ದಾನ – ಈಡೇರಿಸಿ
ಜೀವನವು ಪುಸ್ತಕವಿದ್ದಂತೆ – ಓದಿರಿ
ಜೀವನವೆಂಬುದು ಪ್ರೇಮಕಥೆ – ಸಂತೋಷ ಪಡೆಯಿರಿ

# ವಿದ್ಯಾರ್ಥಿ ಜೀವನ ವೃತ್ತಿಪರವಾಗಬೇಕು



**ಸುಷ್ಮ ಎಂ.ಎಂ.**
ತೃತೀಯ ಬಿ.ಕಾಂ.

ಕಾಲೇಜು ಎನ್ನುವುದು ಬಿಳಿ ಹಾಳೆಯ ಮೇಲೆ ಬಣ್ಣ ಸೋಕಿದ ಹಾಗೆ. ಇಲ್ಲಿ ಎಲ್ಲರೂ ಸಮಾನ ಮನಸ್ಕರು, ಸಮಾನ ವಯಸ್ಕರು ಆಗಿರುವುದರಿಂದ ಮೋಜು, ಮಸ್ತಿ, ಸಾಮಾನ್ಯ. ತಡರಾತ್ರಿಯವರೆಗೂ ಚಾಟಿಂಗ್, ಕ್ಯಾಂಟೀನ್‌ನಲ್ಲಿ ಪ್ರತೀದಿನ ಮೀಟಿಂಗ್, ರವಿವಾರದಂದು ಔಟಿಂಗ್, ಮಂಗಳವಾರದಂದು ಮಾಸ್‌ಬಂಕ್ ಎಂದು ವಾರದ ಮೊದಲ ದಿನವೇ ವೇಳಾಪಟ್ಟಿ ರೆಡಿಯಾಗಿರುತ್ತದೆ. ಇನ್ನು ಇವುಗಳ ಮಧ್ಯೆ ಪ್ರೀತಿ, ಪ್ರೇಮ ಅಂತ ಊಟದ ಸಮಯ ಇದಕ್ಕೆ ಮೀಸಲು. ಹೀಗಾಗಿ ಪರೀಕ್ಷೆ, ತರಗತಿ ಓದು, ಎರಡನೇ ಸಾಲಿಗೆ ಸೇರುತ್ತವೆ. ಪರೀಕ್ಷಾ ಸಮಯದಲ್ಲಿ ಒತ್ತಡ ಮಾಡಿಕೊಂಡು ಇಂದಿನ ದಿನದಲ್ಲಿ ಕಣ್ಣಿಗೆ ಎಣ್ಣೆ ಹಾಕಿಕೊಂಡು ಹೇಗೋ ಓದಿ ಪಾಸ್ ಎಂದು ದೊಡ್ಡದಾಗಿ ನಿಟ್ಟುಸಿರು ಬಿಡುವುದು. ಉದ್ಯೋಗ ಮಾರುಕಟ್ಟೆಯಲ್ಲಿ ಯಾವುದೇ ಕೆಲಸ ಸಿಗದಾಗ ತಪ್ಪಿನ ಅರಿವಾಗಿ ಪರದಾಡುವುದು.

ಇದಕ್ಕೆ ವಿರುದ್ಧವಾಗಿ ವರ್ತಿಸುವ ಇನ್ನೊಂದು ವರ್ಗದ ವಿದ್ಯಾರ್ಥಿಗಳಿಗೇನೂ ಕಡಿಮೆ ಇಲ್ಲ. ಒಂದು ಅಕ್ಷರ ಬಿಡದಂತೆ ಓದಿ ಎಲ್ಲವನ್ನೂ ತಲೆಗೆ ತುಂಬಿ ಶೇಕಡ 100 ಅಂಕ ಗಳಿಸುತ್ತಾರೆ. ಇದಕ್ಕಾಗಿ ಸಮಸ್ತ ಸುಖವನ್ನು ತ್ಯಜಿಸಿ ಹೆತ್ತವರಿಂದ, ಊರವರಿಂದ, ಸುದ್ದಿ ಮಾಧ್ಯಮದಿಂದ ಹೊಗಳಿಕೆಯೋ ಹೊಗಳಿಕೆ. ಆದರೆ



ಇವರ ಸಾಮಾನ್ಯ ಜ್ಞಾನ ಎಷ್ಟರ ಮಟ್ಟಿಗೆ ಇರುತದೆ ಎಂದರೆ ಒಟ್ಟು ಶೇಕಡಾ 100 ಅಂಕಗಳಿಸಿದ್ದ ವಿದ್ಯಾರ್ಥಿಗೆ ಅವರ ಉಪನ್ಯಾಸಕರು ತುರ್ತಾಗಿ ಕಳುಹಿಸಬೇಕಿದ್ದ ಪತ್ರವೊಂದನ್ನು ಪಕ್ಕದ ರಸ್ತೆಯಲ್ಲಿರುವ ಅಂಚೆ ಡಬ್ಬಕ್ಕೆ ಹಾಕಿ ಬರಲು ತಿಳಿಸುತ್ತಾರೆ. ಈ ವಿದ್ಯಾರ್ಥಿ ಮಹಾಶಯ ಅವರ ಪತ್ರವನ್ನು ಅವರ ಮನೆಯ ಗೇಟಿಗೆ ಮನೆಗೆ ಬರುವ ಪತ್ರಗಳಿಗಾಗಿ ನೇತುಹಾಕಿದ್ದ ಡಬ್ಬಿಯಲ್ಲಿ ಹಾಕಿ ಬಂದಿದ್ದ.

ಈ ಎರಡು ವರ್ಗದ ವಿದ್ಯಾರ್ಥಿಗಳು ಎಡುವುತ್ತಿರುವುದಕ್ಕೆ ಕಾರಣ ಅವರಲ್ಲಿನ ವೃತ್ತಿಪರ ಗುಣದ ಕೊರತೆ, ಕಾಲೇಜಿನ ಜೀವನ ವಿದ್ಯಾರ್ಥಿಗಳ ಭವಿಷ್ಯದ ಅಡಿಪಾಯವಾಗಿರುತ್ತದೆ. ಈ ಸಮಯದಲ್ಲಿ ಪ್ರತೀಕ್ಷಣ ಮುಖ್ಯ. ಓದಿನ ಜೊತೆಗೆ ಕಾಲೇಜಿನಲ್ಲಿ ನಡೆಯುವ ವಿವಿಧ ಸ್ಪರ್ಧೆಗಳು, ಆಟೋಟಗಳು, ವಿಚಾರ ಸಂಕಿರಣಗಳು ಕಾರ್ಯಾಗಾರಗಳಲ್ಲಿ ಪಾಲ್ಗೊಂಡು ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಬೇಕು. Learn from yesterday, live for today, hope for tomorrow ಎಂದು ಆಲ್ಬರ್ಟ್ ಐನ್‌ಸ್ಟೀನ್ ಹೇಳಿದ್ದಾರೆ. ಅಪ್ಪ ಅನ್ನೋ ಆಲದ ಮರದ ಕೆಳಗೆ ಆಸರೆ ಪಡೆಯುವ ಬದಲು ತನ್ನ ಕಾಲ ಮೇಲೆ ನಿಲ್ಲಬೇಕೆಂದು ವಿದ್ಯಾರ್ಥಿ ದೆಸೆಯಿಂದಲೇ ಬರಬೇಕು. ಓದುತ್ತಿರುವಂತಹ ವಿಷಯಕ್ಕೆ ಅನುಗುಣವಾಗಿ ವೃತ್ತಿಪರ ಗುಣಗಳು ಬೇಕೆಬೇಕಾಗಿರುತ್ತವೆ. ಆದರೆ ಎಲ್ಲಾ ಕಾಲದಲ್ಲಿಯೂ ಎಲ್ಲಾ ಕ್ಷೇತ್ರದಲ್ಲಿಯೂ ಅಳವಡಿಕೆಯಾಗುವಂತಹ ಕೆಲವೊಂದು ಸಾಮಾನ್ಯ ಗುಣಗಳಿವೆ. ಅವುಗಳನ್ನು ಸ್ವಪ್ರಯತ್ನದಿಂದ ಅಳವಡಿಸಿಕೊಳ್ಳುತ್ತಾ ಸಾಗಬೇಕು. ಉದಾಹರಣೆಗೆ ಸಂವಹನ ಕೌಶಲ, ನಾಯಕತ್ವ ಗುಣ, ಸಮಸ್ಯೆ ಎದುರಿಸುವ ನೈಪುಣ್ಯತೆ, ಒತ್ತಡ ನಿಭಾಯಿಸುವ ಚಾಕಚಕ್ಯತೆಯ ಬರವಣಿಗೆ, ಸಾಮಾನ್ಯ

ಜ್ಞಾನ, ಸೃಜನಶೀಲತೆ, ಸಮಯ ಪರಿಪಾಲನೆ, ಪ್ರಚಲಿತ ವಿದ್ಯಮಾನಗಳ ಅರಿವು, ಇತ್ಯಾದಿ ಇತ್ತೀಚಿನ ದಿನಗಳಲ್ಲಿ ಕಂಪನಿಗಳು, ಸಂಸ್ಥೆಗಳು ಮೊದಲ ಬಾರಿಗೆ ಹೆಚ್ಚುವುದೇ ಈ ಗುಣಗಳು.

ಅವಕಾಶಗಳು ನಮ್ಮನ್ನು ಹುಡುಕಿಕೊಂಡು ಬರುವುದಿಲ್ಲ. ನಾವೇ ಅವಕಾಶಗಳ ಬೆನ್ನತ್ತಿ ಸಾಗಬೇಕು. ಕಾಲೇಜು ಮೆಟ್ಟಿಲು ಹತ್ತುವವರೆಗೆ ಅಂಕಗಳು ಕೆಲಸ ಮಾಡುತ್ತವೆ. ಅದರ ನಂತರ ಭವಿಷ್ಯಕ್ಕೆ ನೆರವಾಗುವಂತಹ ಗುಣಗಳನ್ನು ಓದಿನ ಜೊತೆಗೆ ಅಳವಡಿಸಿಕೊಳ್ಳುವುದು ತುಂಬಾ ಮುಖ್ಯ. ಭಾರತ ಇದೀಗ ಯುವಕರ ರಾಷ್ಟ್ರವಾಗಿದೆ. 2016 ಅಂತ್ಯಕ್ಕೆ ಒಟ್ಟು ಜನಸಂಖ್ಯೆಯ ಶೇ 45 ರಷ್ಟು ಜನಸಂಖ್ಯೆ 16 ರಿಂದ 25 ವರ್ಷದೊಳಗಿನವರಾಗಿರುತ್ತಾರೆ. ಇಷ್ಟೊಂದು ಯುವಕರಿಗೆ ಉದ್ಯೋಗ ದೊರೆಯಬೇಕಾದರೆ ಪ್ರತಿಯೊಬ್ಬರೂ ವೃತ್ತಿಪರ ಗುಣ ಅಳವಡಿಸಿಕೊಳ್ಳುವುದು ಅಗತ್ಯ. ಇಲ್ಲಿ ಶಿಕ್ಷಕರ ಪಾತ್ರವು ಮುಖ್ಯವಾಗುತ್ತವೆ.

---

## ಮಾತೆ (ತಾಯಿ)

❑



ಕಾವ್ಯ ಎಲ್.
ತೃತೀಯ ಬಿ.ಎ. [ಹೆಚ್.ಇ.ಕೆ.]



ಮನೆಯೆ ಮೊದಲ ಪಾಠಶಾಲೆ; ಜನನಿ ತಾನೆ ಮೊದಲ ಗುರುವು. ಜನನಿಯಿಂದ ಪಾಠ ಕಲಿತ ಜನರು ಧನ್ಯರು ಎಂಬ ಜನಜನಿತ ನುಡಿಯೊಂದಿದೆ. ಅವಳೇ ನಮ್ಮೆಲ್ಲರ ಜನ್ಮದಾತೆ ತಾಯಿ. ಅವಳೇ ನಮ್ಮ ಕುಟುಂಬದ, ಸಮಾಜದ, ಸಂಸ್ಕೃತಿಯ ಕೇದ್ರ ಬಿಂದು ಅವಳೇ ನಮ್ಮ ಸಂಸ್ಕೃತಿಯ ನೇತಾರಳು, ರಕ್ಷಿಪಳು. ನಮ್ಮ ಸಂಸ್ಕೃತಿಯ ಜೀವಾಳವೇ ತಾಯಿ. ಪ್ರಕೃತಿ ಮಾತೆ, ಭೂಮಾತೆ, ಗಂಗಾಮಾತೆ ಹೀಗೆ ಸುತ್ತಣ ಪರಿಸರವನ್ನು ಹೊತ್ತಿ ಭೂಮಿಯನ್ನು, ಜೀವ ಸೆಲೆ ಜಲವನ್ನು ಇಡೀ ವಿಶ್ವವನ್ನು ಧ್ವನಿಸುವವಳು ತಾಯಿ.

ಪುರುಷನೊಡನೆ ಹುಟ್ಟಿ ಸಹೋದರಿಯಾಗಿ ಬೆಳೆದು ಹುಟ್ಟಿದ ಮನೆಗೆ ಮಮತೆಯ ಪನ್ನೀರೆರೆದು; ಮತ್ತೊಂದು ಮನೆ ಬೆಳಗುವ ಸೊಸೆಯಾಗಿ, ಸಂಸಾರದ ನೇಗಿಲಿಗೆ ಹೆಗಲ ನೀಡಿ ದುಡಿದು ದುಡಿದು ಹೈರಾಣಾಗುತ್ತಾಳೆ. ವಂಶವೃಕ್ಷವ ಬೆಳೆಸುವ, ಮನೆ, ಗಂಡ, ಮಕ್ಕಳು, ನೆರೆಹೊರೆ ಸಮುದಾಯಕ್ಕೆ ಅನ್ನ ನೀಡುವ ಅನ್ನದಾತೆಯಾಗಿ, ಪೋಷಕಳಾಗಿ, ಒಡತಿಯಾಗಿ, ಸಮಾಜದ ಮತ್ತು ಸಂಸಾರದ ಸಂಸ್ಕೃತಿಯ ರೂವಾರಿಯಾಗಿ, ಸಂರಕ್ಷಕಿಯಾಗಿ ತಾಯಿಯ ಸ್ಥಾನ ಬಹು ದೊಡ್ಡದು.

ಹಸಿರು ಸೀರೆ, ಹಸಿರು ಕುಪ್ಪಸತೊಟ್ಟ ಹಣೆಯಲಿ ಕುಂಕುಮ, ಹಸಿರು ಕೈಬಳೆ ತೊಟ್ಟ ಕಾಲುಂಗರ ಕೊರಳಲಿ ಪವಿತ್ರ ಮಾಂಗಲ್ಯ ಧರಿಸಿದವಳು. ಸುವಾಸನೆಭರಿತ ಹೂಮುಡಿದ, ವಿಶಾಲ ನೇತ್ರದ ನೀಳಕೇಶ ರಾಶಿಯ, ಚೈತನ್ಯದಾತೆ, ವಿಶ್ವಸ್ವರೂಪಿಣಿ, ಆದಿ ಶಕ್ತಿರೂಪಿಣಿ, ಕರ್ನಾಟಕ ಮಾತೆ, ಭಾರತ ಮಾತೆ ವಿಶ್ವಮಾತೆಯ ಪ್ರತಿ ರೂಪವ ನಮ್ಮ ಪ್ರತಿ ಮನೆಮನೆಯಲ್ಲೂ ಕಾಣುವ ತಾಯಂದಿರಲ್ಲಿ ಕಾಣುತ್ತೇವೆ. ಧನಲಕ್ಷ್ಮಿ, ಧಾನ್ಯಲಕ್ಷ್ಮಿ, ಸಂತಾನಲಕ್ಷ್ಮಿ, ಅಷ್ಟಲಕ್ಷ್ಮಿ ಹೀಗೆ ಎಲ್ಲವೂ ಸ್ತ್ರೀಮಯ. ಶಾಂತಿದಾತೆ, ಶೃಂಗಾರಮಯಿ ತಾಯಿಯೇ ಒಂದು ಸಂಸಾರದ/ಸಮಾಜದ ಸಂಸ್ಕೃತಿಯ ಅಳಿವು, ಉಳಿವಿನ ಶ್ರೇಷ್ಠತೆ ಕನಿಷ್ಠತೆ ಎಲ್ಲವನ್ನು ಅವಲಂಬಿಸಿರುತ್ತದೆ. ಅವಳೇ ನಮ್ಮ ಸಂಸ್ಕೃತಿಯ ಪಾಲಕಳು.

# ಪ್ರಕೃತಿ ಮಾತೆಯ ಕಗ್ಗೊಲೆ



ಮಾದೇವಿ
ತೃತೀಯ ಬಿ.ಎ. [ಹೆಚ್.ಇ.ಕೆ.]

ಪ್ರಕೃತಿಯೊಂದು ಸುಂದರ ಸ್ವರ್ಗ. ಅದು ನಮಗೆ ದೇವರು ಕೊಟ್ಟ ಕೊಡುಗೆಯಾಗಿದೆ. ಮಾನವ ಇಂದು ಮಾನವೀಯತೆ ಮರೆತು ಹಕ್ಕಿಯಂತೆ ಹಾರುವುದನ್ನು, ನೀರಿನಲ್ಲಿ ಮೀನಿನಂತೆ ಈಜುವುದನ್ನು ಕಲಿತಿದ್ದಾನೆ. ಆದರೆ ಭೂಮಿಯ ಮೇಲೆ ಮಾನವನಾಗಿರುವುದನ್ನು ಕಲಿಯಲ್ಲಿಲ್ಲ. ಆಧುನೀಕರಣ, ಕೈಗಾರೀಕರಣ, ನಗಾರಾಭಿವೃದ್ಧಿ ಮಾಡುವ ಕೆಲಸದಲ್ಲಿ ಸ್ವಾರ್ಥಿಯಾಗಿದ್ದಾನೆ. ಮಾನವ ಇಂದು ತನಗೆ ತಿಳಿದೊ ತಿಳಿಯದೆಯೋ ಪ್ರಕೃತಿ ಮಾತೆಯನ್ನು ಸಾವಿನ ದವಡೆಗೆ ನೂಕುತ್ತಿದ್ದಾನೆ. ಪ್ರಕೃತಿಯನ್ನು ಕಾಂಕ್ರಿಡ್ ರೋಡ್ ನಾಡಾಗಿ ಪರಿವರ್ತಿಸಿದ್ದಾನೆ. ಹಾಡು ಹಗಲೇ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಮರಗಳನ್ನು



ಮಾರಣ ಹೋಮ ಮಾಡುತ್ತಿದ್ದಾನೆ. ಉತ್ತಮ ಗಾಳಿ ಹಾಗೂ ತಂಪಿನ ವಾತಾವರಣವನ್ನು ನೀಡುವ ಆಕಾಶದೆತ್ತರದ ಮರಗಳನ್ನು ಕಡಿದು ಆ ಜಾಗದಲ್ಲಿ ಕಟ್ಟಡಗಳನ್ನು ನಿರ್ಮಿಸುತ್ತಿದ್ದಾನೆ. ಇದರ ಜೊತೆಗೆ ದೊಡ್ಡ ಕಾರ್ಖಾನೆಗಳನ್ನು ನಿರ್ಮಿಸುತ್ತಿದ್ದಾನೆ. ಇವುಗಳ ಮಧ್ಯೆ ಕಾರ್ಬನ್ ಹೊಗೆ ನೀಡುವ ವಾಹನಗಳನ್ನು ಕಂಡು ಹಿಡಿಯುತ್ತಿದ್ದಾನೆ. ಇವುಗಳು ಅಭಿವೃದ್ಧಿ ಸಂಕೇತಗಳೋ ಅಥವಾ ಮಾನವನನ್ನು ವಿನಾಶ ಮಾಡುವ ಸಂಕೇತಗಳೂ ಎಂಬುದು ತಿಳಿದು ಬರುತ್ತಿಲ್ಲ.

ಹಿಂದೆ ವಾಸಿಸುತ್ತಿದ್ದ ಜನರು ಪರಿಸರ ಪ್ರೇಮವನ್ನು ಮೆರೆಯುತ್ತಿದ್ದರು. ಅವರು ದೈನಂದಿನ ಚಟುವಟಿಕೆಗಳು ಪ್ರಕೃತಿ ಮಾತೆಯನ್ನು ನಮಿಸುವ ಮೂಲಕ ಪ್ರಾರಂಭ ಮಾಡುತ್ತಿದ್ದರು.

ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಾಲಿ
ಎಳ್ಳು ಜೀರಿಗೆ ಬೆಳೆಯೋಳ / ಭೂಮ್ತಾಯ
ಎದ್ದೊಂದು ಗಳಿಗೆ ನೆನದೇನ

ಈ ಜನಪದರ ಹಾಡುಗಳೇ ಪ್ರಕೃತಿ ಮಾತೆಯನ್ನು ವಂದಿಸುತ್ತಿದ್ದರು. ಈ ಜನಪದರು ಇಂದಿನ ಮಾನವ ಜೀವನಕ್ಕೆ ಆದರ್ಶವಾಗ ಬಹುದು. ಭೂಮಿ ಇಂದು ಕುದಿಯುತ್ತಿದೆ. ಜಾಗತಿಕ ತಾಪಮಾನ ಮಿತಿ ಮೀರಿದೆ. ಸಮುದ್ರದ ಒಡಲುಗಳೆಲ್ಲ ಬರಿದಾಗ ತೊಡಗಿವೆ. ನೀರನ್ನು ಭೂಮಿ ತಾಯಿಯ ಎದೆ ಹಾಲು ಎಂದು ಹೇಳುತ್ತಿದ್ದರು. ಈ ರೀತಿಯ ಮಾತಿನಲ್ಲಿ ನಾವು ನೀರಿಗೆ ಎಷ್ಟು ಮಹತ್ವ ಇದೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಆದರೆ ಇಂದು ಮಾನವ ತನ್ನ ಸ್ವಾರ್ಥಕ್ಕಾಗಿ ಎಲ್ಲಾದರೂ ಸರಿಯೇ ಗಣಿಗಳನ್ನು ಕೊರೆದು ನೀರನ್ನು ಹಾಳು ಮಾಡುತ್ತಿದ್ದಾರೆ. "ಭಾರತದಲ್ಲಿ ಈ ರೀತಿಯ ನೀರನ್ನು ಅಪವ್ಯಯ ಮಾಡುತ್ತಿದ್ದರೆ, ಮುಂದೇ ಒಂದು ದಿನ ನೀರಿನ ಹಾಹಾಕಾರವನ್ನು ಎದುರಿಸಬೇಕಾಗುತ್ತದೆ. ಮಾನವ ಎಷ್ಟೇಷ್ಟು ಮುಂಚೂಣಿಯಲ್ಲಿ ಅಭಿವೃದ್ಧಿ ಸಾಧಿಸುತ್ತಿದ್ದಾನೋ ಅಷ್ಟೇ ತನ್ನ ಆಯಸ್ಸನ್ನು ಕಡಿಮೆ ಮಾಡಿಕೊಳ್ಳುತ್ತಿದ್ದಾನೆ. ಆದರೆ ನಮ್ಮ ಹಿಂದಿನ ತಲೆಮಾರು ನೂರು ವರ್ಷಗಳ ಕಾಲ ಬದುಕಿರುತ್ತಿದ್ದರು. ಪ್ರಕೃತಿಯನ್ನು ನಾಶಮಾಡುತ್ತಿರುವುದರಿಂದ ಆಕ್ಸಿಜನ್, ಕಾರ್ಬನ್ ಡೈ ಆಕ್ಸೈಡ್‌ನ ಪ್ರಮಾಣವು ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣಗಳೆಂದರೆ ವಾಹನಗಳು ಉಗುಳುವ ಹೊಗೆ

ಪ್ರಮಾಣ ಹೆಚ್ಚಾಗಿರುವುದು. ಕೈಗಾರಿಕೆಗಳು ಹೊರ ಸೂಸುವ ಹೊಗೆಯು ಸಹ ಆಕ್ಸಿಜನ್ ಕಡಿಮೆಯಾಗಲು ಕಾರಣವಾಗಿದೆ. ಇದರಿಂದ ಜಗತ್ತಿನ ಏಳು ಅದ್ಭುತಗಳಲ್ಲಿ ಒಂದಾಗಿರುವ ತಾಜ್‌ಮಹಲ್‌ನ ಬಣ್ಣ ಬದಲಾಗುತ್ತಿರುವುದು. ವಾಹನಗಳಿಂದ ಹೊರಬರುವ ಹೊಗೆ ಕೈಗಾರಿಕೆಗಳಿಂದ ಹೊರ ಬರುವ ಹೊಗೆ, ಮತ್ತು ಕೈಗಾರಿಕೆಗಳಲ್ಲಿ ಬಳಸುವ ರಾಸಾಯನಿಕ ವಸ್ತುಗಳಿಂದ ಬರುವ ವಿಷಕಾರಿ ಅನಿಲವು ಸೂರ್ಯನಿಗೆ ಅಡ್ಡಲಾಗಿರುವ ಓಜೋನ್ ಪದರದ ನಾಶಕ್ಕೆ ಕಾರಣವಾಗಿದೆ. ಈ ಓಜೋನ್ ಪದರವು ಸ್ವಲ್ಪ ಸ್ವಲ್ಪವಾಗಿ ನಶಿಸುತ್ತಿರುವುದರಿಂದ ಸೂರ್ಯನ ತೀಕ್ಷ್ಣವಾದ, ಅಪಾಯಕಾರಿಯಾದ ಕಿರಣಗಳು ಭೂಮಿಯನ್ನು ನೇರವಾಗಿ ತಲುಪಿ ತಾಪಮಾನ ಹೆಚ್ಚಾಗಲು ಕಾರಣವಾಗಿದೆ.

ಆಧುನೀಕರಣ ಮಾಡುವ ಸಲುವಾಗಿ ನಮ್ಮ ಜೀವನ ಶೈಲಿಯನ್ನು ಬದಲಾಯಿಸಿ ಬದುಕುವ ಪರಿಸ್ಥಿತಿಯಿದೆ. ನಾವು ಉಪಯೋಗಿಸುತ್ತಿರುವ ದಿನನಿತ್ಯದ ವಸ್ತುಗಳು ಕೂಡ ತ್ಯಾಜ್ಯವಾಗಿ ಪರಿವರ್ತಿತವಾಗಿದೆ. ಈ ಘನ ತ್ಯಾಜ್ಯವು ಕೂಡ ವಿಷಕಾರಿ ಪ್ರಕೃತಿಯ ವಾತಾವರಣವನ್ನು ಹದಗೇಡಿಸುತ್ತಿದೆ. ಈ ಘನ ತ್ಯಾಜ್ಯದಲ್ಲಿ ಪ್ಲಾಸ್ಟಿಕ್ ಹೆಚ್ಚಾಗಿ ಕಂಡು ಬಂದಿದೆ. ಈ ಪ್ಲಾಸ್ಟಿಕ್ ಜೈವಿಕವಾಗಿ ಸಂಘಟನೆಯಾಗದಿರುವುದು ಮೂಕ ಪ್ರಾಣಿಗಳಿಗೆ ಕಂಟಕ ಪ್ರಾಯವಾಗಿದೆ. ಭಾರತದಲ್ಲಿ ಬೃಹತ್ ನಗರಗಳೆನಿಸಿದ ಬೆಂಗಳೂರು, ಮುಂಬೈ, ದೆಹಲಿ, ಹೈದರಾಬಾದ್‌ಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಘನ ತ್ಯಾಜ್ಯಗಳು ಶೇಖರಣೆಯಾಗುತ್ತಿದೆ. ಇದು ಪರಿಸರ ಮಾಲಿನ್ಯಕ್ಕೆ ಕಾರಣವಾಗಿದೆ. ಈ ಘನತ್ಯಾಜ್ಯಗಳನ್ನು ದಹಿಸಿದರೆ ವಾಯು ಮಾಲಿನ್ಯ ಉಂಟಾಗುತ್ತಿದೆ. ಇದನ್ನು ಬಿಟ್ಟು ಅದನ್ನು ಖಾಲಿ ಬಿಟ್ಟ ಸ್ಥಳಗಳಲ್ಲಿ ಹಾಕುವುದರಿಂದ ಭೂಮಾಲಿನ್ಯದ ಜೊತೆಗೆ ಜಲಮಾಲಿನ್ಯ ಉಂಟಾಗುತ್ತಿದೆ. ಜೊತೆಗೆ ಮಾನವನು ಹೆಚ್ಚಿನ ಆದಾಯವನ್ನು ಪಡೆಯಲು ಕೃಷಿಯಲ್ಲಿ ಕೀಟನಾಶಕಗಳು ಮತ್ತು ರಾಸಾಯನಿಕ ಗೊಬ್ಬರಗಳನ್ನು ಹೆಚ್ಚಾಗಿ ಬಳಸುವುದರಿಂದ ಭೂಮಿ ತನ್ನ ಸತ್ವವನ್ನು ಕಳೆದುಕೊಂಡಿದೆ. ಈ ರಾಸಾಯನಿಕಗಳು ಮಳೆಯಲ್ಲಿ ಕೊಚ್ಚಿ ಕೆರೆ, ಕಾಲುವೆಗಳಿಗೆ ಸೇರುವುದರಿಂದ ಜಲಮಾಲಿನ್ಯ ಉಂಟಾಗುವುದರಿಂದ ಆ ನೀರನ್ನು ಪ್ರಾಣಿ ಮತ್ತು ಪಕ್ಷಿಗಳು ಸೇವಿಸಿ ವಾಸಿಸುತ್ತಿರುವುದರಿಂದ ಪ್ರಾಣಿಸಂಕುಲ ನಾಶವಾಗುತ್ತಿದೆ.

ಮಾನವ ಬುದ್ಧಿ ಜೀವಿ. ಬಾಹ್ಯಕಾಶಕ್ಕೆ ತನ್ನ ಕಾಲನ್ನು ಇಟ್ಟಿರುವುದು ಸೋಜಿಗದ ಸಂಗತಿ. ಮಾನವ ತನ್ನ ಅನುಕೂಲಕ್ಕಾಗಿ ಸ್ಥಾಪಿಸಿರುವ ಟವರ್ ಕಂಬಗಳು ಪಕ್ಷಿ ಸಂಕುಲ ವಿನಾಶಕ್ಕೆ ಕಾರಣವಾಗಿದೆ. ಹಿಂದೆ ಪ್ರತಿದಿನ ಎದ್ದ ಕೂಡಲೇ ಬೀಸುವ ಗಾಳಿಗೆ ತೇಲಿ ಬರುವ ಪುಟ್ಟ ಪುಟ್ಟ ಗುಬ್ಬಿಗಳ ಕಲರವ ಇಂದು ಕಿವಿಗಳಿಗೆ ಬೀಳುತ್ತಿಲ್ಲ. ಕಾರಣ ಮಾನವನ ಅತಿಯಾದ ಆಸೆಯೇ ದಾಹ. ಇಷ್ಟೆಲ್ಲಾ ಮಾಡಿದರೂ ಪ್ರಕೃತಿ ತಾಯಿಯು ಕರುಣಾಮಯಿ. ನಾವು ಎಷ್ಟೇ ಪ್ರಕೃತಿಯನ್ನು ಹಾಳು ಮಾಡಲು ಪ್ರಯತ್ನಿಸಿದರೂ ತಾಯಿ ತನ್ನ ಮಕ್ಕಳನ್ನು ಸಲಹುವಂತೆ ನಮ್ಮನ್ನು ಸಲಹುತ್ತಿದ್ದಾಳೆ. ಆದ್ದರಿಂದ ಇಂದಿನ ಜನತೆ ಪ್ರಕೃತಿ ಮಾತೆಯ ವಿನಾಶವನ್ನು ತಡೆಯಲು ಎಚ್ಚೆತ್ತುಕೊಳ್ಳಬೇಕು.

## ಸಾರ್ಥಕ ಮನುಷ್ಯನ ಒಂಬತ್ತು ಲಕ್ಷಣಗಳು

1] ಆಸೆ, ಕೋಪ, ನಾಲಿಗೆ – ಈ ಮೂರನ್ನು ಹತೋಟಿಯಲ್ಲಿಡು

2] ಧೈರ್ಯ, ವಾತ್ಸಲ್ಯ, ಶಿಷ್ಟಾಚಾರ – ಈ ಮೂರನ್ನು ಪ್ರೀತಿಸು

3] ಹಣ, ಸಮಯ, ಶಕ್ತಿ – ವ್ಯರ್ಥ ಮಾಡಬೇಡ

4] ಅನ್ಯಾಯ, ಅಹಂಕಾರ, ಸ್ವಾಮಿ ದ್ರೋಹ – ದ್ವೇಷಿಸು

5] ವ್ಯಾಪಾರ, ಪ್ರಯಾಣ, ಮದುವೆ – ಆತುರ ಪಡಬೇಡ

6] ಬುದ್ಧಿಶಕ್ತಿ, ಸಾಮರ್ಥ್ಯ, ಸಂತೋಷ – ಬೆಲೆಕೊಡು

7] ಧರ್ಮ, ನ್ಯಾಯ, ವಿನಯ – ಗೌರವಕೊಡು

8] ದೇಶ, ಗೌರವ, ರಾಷ್ಟ್ರಧ್ವಜ – ಹೋರಾಟ

9] ಸುಖ, ದುಃಖ, ಸೋಲು – ಸಿದ್ಧನಾಗಿರು

ಸಂಗೀತ ಎನ್
ದ್ವಿತೀಯ ಬಿ.ಎ. [ಹೆಚ್.ಇ.ಪಿ.]

# ಮಳೆ ಅಭಾವ/ಬರ ಮತ್ತು ರೈತನ ಬವಣೆಗಳು



**ಪವಿತ್ರ ಎಸ್.**
ದ್ವಿತೀಯ ಬಿ.ಎ. [ಹೆಚ್.ಇ.ಪಿ.]

ನಾವೆಲ್ಲರೂ ಮಳೆಯನ್ನು ಇಷ್ಟ ಪಡುತ್ತೇವೆ. ಮಳೆ ಬಿದ್ದ ಮೇಲೆ ವಾತಾವರಣ ತಂಪಾಗುತ್ತದೆ. ಮಳೆ ಸಸ್ಯಗಳಿಗೆ ಪ್ರಾಣಿಗಳಿಗೆ, ಮನುಕುಲಕ್ಕೆ ಅದರಲ್ಲೂ ರೈತರಿಗಂತೂ [ಅನ್ನದಾತ] ಮಳೆ ಬಿದ್ದಾಗ ಅವರಿಗೆ ಆಗುವಷ್ಟು ಸಂತೋಷ ಮತ್ತ್ಯಾರಿಗೂ ಆಗುವುದಿಲ್ಲ. ಮಳೆ ಬಂದಾಗ ಸಸ್ಯಗಳು ಬೇಗ ಬೆಳೆಯುತ್ತವೆ. ಮರಗಳು ಚಿಗುರುತ್ತವೆ ಹಾಗೂ ಎಲ್ಲೆಲ್ಲೂ ಹಚ್ಚ ಹಸಿರುನಿಂದ ಕೂಡಿರುತ್ತೆ. ಆದರೆ ಇವತ್ತು ಅನೇಕ ಸ್ವಾರ್ಥಿಗಳು



ತಮ್ಮ ವಯಕ್ತಿಕ ಅನುಕೂಲ ಹಾಗೂ ಸಂತೋಷಕ್ಕಾಗಿ ಕಾಡುಗಳನ್ನು ಕಡಿಯುತ್ತಿದ್ದಾರೆ. ಹಳ್ಳಿಗಳು ಅಥವಾ ಗ್ರಾಮಾಂತರ ಪ್ರದೇಶಗಳಿಂದ ಉದ್ಯೋಗವನ್ನು ಅರಸಿ ಅನೇಕರು ಪಟ್ಟಣಗಳಿಗೆ ವಲಸೆ ಬರುತ್ತಿದ್ದಾರೆ. ಆದ್ದರಿಂದ ದೊಡ್ಡ ನಗರಗಳು ಸುತ್ತ ಇರುವ ಚಿಕ್ಕ ಪಟ್ಟಣಗಳು ನಗರದಲ್ಲಿ ಸೇರಿ ಹೋಗುತ್ತವೆ. ಇವೆಲ್ಲವೂ ನಗರೀಕರಣಕ್ಕೆ ಕಾರಣವಾಗಿದೆ.

ಕಾಡಿನ ನಾಶದಿಂದಾಗಿ ಪ್ರಕೃತಿಯಲ್ಲಿನ ಅಸಮತೋಲನ, ಭೂಮಿ ಉಷ್ಣತೆ ಏರುವಿಕೆ ಆಗುತ್ತಿದೆ. ಹಿಂದೆ ಅಂದರೆ ಕ್ರಿ.ಶ. ಪೂ. 3 ರಿಂದ 4ನೇ ಶತಮಾನದಲ್ಲಿ ಅಶೋಕ ಮಹಾರಾಜ ಸಾಲು ಮರಗಳನ್ನ ರಸ್ತೆಯ ಬದಿಯಲ್ಲಿ ಬೆಳೆಸಿ ಎಂದು ಹೇಳಿದ್ದರು. ಆದರೆ ನಾವು ಇವತ್ತು ನಾವು ಮಾಡುತ್ತಿರುವುದಾದರೂ ಏನು. ಸಾಲಾಗಿ ಮರಗಳನ್ನು ಕಡಿದು ಹಾಕುತ್ತಿರುವುದು. ಅಭಿವೃದ್ಧಿ ಹೆಸರಿನಲ್ಲಿ ಮರಗಳನ್ನು ಕಡಿದು ಇವತ್ತು ಜಾಗತಿಕ ತಾಪಮಾನ ಸರಿ ಸುಮಾರು 42 ಡಿಗ್ರಿ ಉಷ್ಣಾಂಶದಿಂದ 45 ಡಿಗ್ರಿ ಉಷ್ಣಾಂಶದವರೆಗೆ ತಲುಪಿದ್ದೇವೆ. ನಾವು ಹೀಗೆ ಮುಂದುವರೆದರೆ ಇನ್ನು ಕೆಲವೇ ಕೆಲವು ವರ್ಷಗಳಲ್ಲಿ ಭೂಮಿಯ ಒಳಗಿನಿಂದ ಜ್ವಾಲಾಮುಖಿ ಅಥವಾ ಆಕಾಶದಿಂದ ಸೂರ್ಯನ ಕಿರಣಗಳು ಬೆಂಕಿಯ ಉಂಡೆಯಂತೆ ಕೆಳಗೆ ಬಿದ್ದರು ಅಚ್ಚರಿ ಇಲ್ಲ. ಇಡೀ ಭೂಮಂಡಲ ಸರ್ವ ನಾಶವಾಗಲು ದೂರ ಇಲ್ಲ ಎಂದು ಅನಿಸುತ್ತದೆ. ಜನರು ನಾಗರೀಕರಾಗಬೇಕೇ ಹೊರತು ನಗರೀಕರಣವಾಗಬಾರದು. ಒಂದು ಮರ ಕಡಿದರೆ ಹತ್ತು ಮರಗಳನ್ನು ಬೆಳೆಸುವ ಮನಸ್ಥಿತಿ ಬೆಳೆಸಿಕೊಳ್ಳಬೇಕು. ಆದರೆ ಇಂದು ತದ್ವಿರುದ್ಧವಾಗಿದೆ. ಇವತ್ತಿನ ಈ ಉಷ್ಣತೆಗೆ ಕಾರಣ ಕಾಡು ನಾಶ. ಕಾಡುಗಳನ್ನು ನಾಶಮಾಡುವುದರಿಂದ ಮರಗಳನ್ನು ಕಡಿಯುವುದರಿಂದ ಹಾಗೂ ಹಳ್ಳಿಗಳು ಗ್ರಾಮಾಂತರ ರಸ್ತೆಗಳಲ್ಲಿ ಸಿಮೆಂಟ್ ಅಥವಾ ಟಾರ್ ಹಾಕುವುದರಿಂದ ಮಳೆಯ ನೀರು ಭೂಮಿಯಲ್ಲೇ ಇಂಗದೆ [ಭೂಮಿಯ ಒಳಗೆ ಇಳಿಯದೆ] ರಸ್ತೆಯಲ್ಲಿ ಹರಿದು ಹೋಗಿ ಎಲ್ಲೋ ಒಂದು ಕಡೆ ಅಂದರೆ ಕೆರೆ ಕಟ್ಟೆ, ಹಳ್ಳಗಳಲ್ಲಿ ಮಾತ್ರ ನಿಂತು ಕೊಳ್ಳುತ್ತದೆ. ಇದರಿಂದ ಭೂಮಿಯ ಅಂತರ್ಜಲ ಮಟ್ಟ ಇಳಿಮುಖವಾಗುತ್ತದೆ. ಇದರಿಂದ ಸೆಕೆ [ಉಷ್ಣ] ಜಾಸ್ತಿಯಾಗುತ್ತದೆ ಹಾಗೂ ನಮ್ಮ ಜೀವನ ಶೈಲಿ [Life Style] ಗಳಿಂದ ಅಂದರೆ

ಹೆಚ್ಚು ಹೆಚ್ಚು ವಾಹನಗಳ ಬಳಕೆಯಿಂದ [Luxury Life Lead] ನಮ್ಮ ಯಾಂತ್ರಿಕ ಜೀವ ಬಲು ದುಬಾರಿ ಮಾಡಿಕೊಂಡು Layout ಮಾಡಿಕೊಂಡು ಕೆರೆಗಳನ್ನೆಲ್ಲಾ ಮುಚ್ಚಿ ಮನೆಗಳ ನಿರ್ಮಾಣ ಮಾಡುವುದಕ್ಕಾಗಿ ಇಡೀ ಅರಣ್ಯವನ್ನೆ ಮರು ಭೂಮೀಕರಣ ಹಾಗೂ ವನ್ಯ ಮೃಗಳ [ಕಾಡುಪ್ರಾಣಿ] ಆವಾಸ ಸ್ಥಾನಗಳ ಕ್ಷೀಣತೆ ಮಾಡುವುದರಿಂದ ಪೀಠೋಪಕರಣಗಳ ತಯಾರಿಕೆಯಲ್ಲಿ ಮರಗಳನ್ನು ಹೆಚ್ಚಾಗಿ ಬಳಸುವುದರಿಂದ ಹಣದಾಸೆಗೆ ಮಾನವನು ಅರಣ್ಯ ಸಂಪತ್ತನ್ನು ನಾಶಮಾಡುತ್ತಿದ್ದಾನೆ. ಅಳಿವಿನ ಅಂಚಿನಲ್ಲಿರುವ ಪ್ರಭೇದಗಳ ನಾಶದ ಅಂಚಿಗೆ ತಲುಪುತ್ತಿದ್ದೆವೆ. ಇದರಿಂದ ಮಾನವರಲ್ಲದೆ ವನ್ಯ ಜೀವಿಗಳಿಗೂ ಹೆಚ್ಚಾಗಿ ತೊಂದರೆಯಾಗುವ ಸಾಧ್ಯತೆಗಳು ಹೆಚ್ಚಾಗಿ ಕಂಡುಬರುತ್ತದೆ. ನಾವು ಹೇಳುತ್ತಿರುವುದು ಕಾಡ ಪ್ರಾಣಿಗಳು ಸಿಟಿಗೆ [ಪಟ್ಟಣ] ಧಾವಿಸುತ್ತಿದ್ದಾವೆ ಎಂದು ಹೇಳುತ್ತಿದ್ದೇವೆ, ಆದರೆ ಅದು ಸುಳ್ಳು, ನಾವೇ ಮರಗಳನ್ನು ಕಡಿದುಕೊಂಡು ಅರಣ್ಯ ನಾಶ ಮಾಡಿಕೊಂಡು ಪ್ರಾಣಿಗಳ ಆವಾಸ ಅಂದರೆ ಕಾಡಿಗೆ ಹೋಗುತ್ತಿದ್ದೇವೆ. ಇದರಿಂದ ವನ್ಯ ಜೀವಿಗಳ ಜೀವನಕ್ಕೂ ಕುತ್ತು ತರುತ್ತಿದ್ದೇವೆ ಹಾಗೂ ಭಾರತದಲ್ಲಿ ಸುಮಾರು ಹತ್ತು ಸಾವಿರ ವರ್ಷಗಳಿಂದ ಮನುಷ್ಯನು ವ್ಯವಸಾಯ ಮಾಡಿಕೊಂಡು ಬಂದಿರುವುದಕ್ಕೆ ಇತಿಹಾಸವಿದೆ. ಮಳೆ ರೈತನ ಬದುಕಿನಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ. ಏಕೆಂದರೆ ನಮ್ಮ ದೇಶ ಕೃಷಿ ಪ್ರಾಧಾನ್ಯ ದೇಶವಾಗಿದೆ. ದೇಶದ ದೊಡ್ಡ ಉದ್ಯಮ ಎಂದರೆ ಅದು ಕೃಷಿ ಕ್ಷೇತ್ರ. ಮಹಾತ್ಮ ಗಾಂಧೀಜಿಯವರು ಕೃಷಿಗೆ ಹೆಚ್ಚಿನ ಪ್ರಾಥಿನಿತ್ಯ ಕೊಡಬೇಕೆಂದು ಹೇಳಿದ್ದರು. ದೇಶದ ಮೂಲ ಆಸ್ತಿಯೇ ಕೃಷಿ ಕ್ಷೇತ್ರ. ರೈತನಿಗೆ ನಮ್ಮ ದೇಶದಲ್ಲಿ ಮೊದಲ ಆದ್ಯತೆ ಎಂದು ಹಿಂದೆ ಹೇಳುತ್ತಿದ್ದರು. ಆದರೆ ಇಂದು ರೈತನ ಬವಣೆ ಯಾರಿಗೂ ಬೇಡ ಎಂದು ಅನಿಸುತ್ತದೆ. ಮಳೆಗಾಲ ಅಥವಾ ಮಳೆ ಅಂದರೆ ಮೊದಲು ಬರುವುದೆ ರೈತ. ಯಾಕೆಂದರೆ ಶೇ.70 ಭಾಗ ಕೃಷಿ ಆಧಾರಿತವಾಗಿರುವುದರಿಂದ ಮಳೆ ಹೆಚ್ಚಿನ ಆಧ್ಯತೆ ರೈತನಿಗೆ ಸಲ್ಲುತ್ತದೆ. ರೈತರು ಇಡೀ ವಿಶ್ವಕ್ಕೆ ಅನ್ನ ನೀಡುವ ಅನ್ನದಾತರು. ಆದರೆ ಈ ಮಾತನ್ನು ಬರಿ ಬಾಯಿ ಮಾತಲ್ಲಿ ಹೇಳುತ್ತಾರೆ ಹೊರತು ಅವನ ಸ್ಥಿತಿಗತಿಯ ಬಗ್ಗೆ ಯಾರೂ ಯೋಚಿಸುವುದಿಲ್ಲ. ಅವನು ಒಂದು ದಿನ ತಾನು ಬೆಳೆಯುವುದಿಲ್ಲ ಎಂದು ಕುಳಿತರೆ ಇಡೀ ಜಗತ್ತಿನ ಜನರ ಪರಿಸ್ಥಿತಿ ಏನಾಗಬಹುದು ಯೋಚಿಸಬೇಕು. ಆದರೆ ಅವನಿಗೆ ಇವತ್ತು ಸರಿಯಾಗಿ ಮಳೆಯಾಗದೆ ಅಥವಾ ಮಳೆಯಾದರೂ ಬೆಳೆಗೆ ತಕ್ಕ ಸರಿಯಾದ ಬೆಲೆ ಸಿಗದೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ. ಇದು ಪ್ರತಿಯೊಬ್ಬ ನಾಗರೀಕ ಸಮಾಜ ತಲೆ ತಗ್ಗಿಸುವಂತ ವಿಷಯವಾಗಿದೆ. ರೈತನ ಗೋಳು ಕೇಳೊರು ಯಾರು ಎಂಬ ಪ್ರಶ್ನೆ ಪ್ರಶ್ನೆಯಾಗೆ ಉಳಿದಿದೆ. ರೈತನ ಬಗ್ಗೆ ಪ್ರತಿಯೊಬ್ಬ ನಾಗರೀಕರನು ಅಂದರೆ ಪಟ್ಟಣದ ವಾಸಿಗಳು, ಅಕ್ಷರಸ್ಥರು, ಅಥವಾ ಜನ ಪ್ರತಿನಿಧಿಗಳು ಸಹಕಾರ ನೀಡಿ ಅವನ ಬೆನ್ನಿಗೆ ನಿಲ್ಲಬೇಕು. ಅವನ ಕಷ್ಟಗಳನ್ನು ಬಗೆಹರಿಸಬೇಕು. ಅವನ ಕುಟುಂಬದ ಪರಿಸ್ಥಿತಿ ಹೇಗಿದೆ ತಿಳಿದುಕೊಳ್ಳಬೇಕು. ಮಹಾತ್ಮ ಗಾಂಧೀಜಿಯವರು "ರೈತರು ದೇಶದ ಬೆನ್ನೆಲಬು" ಎಂದ ಹೇಳಿದರು. ಆದರೆ ಇಂದು ಅವನ ಬೆನ್ನೇ ಭಾಗಿ ಹೋಗಿದೆ. ಆದರೂ ಅವನ ಬೆನ್ನ ಮೇಲೆ ಸವಾರಿ ಮಾಡುತ್ತಲೆ ಬರುತ್ತಿರೊ ಸರ್ಕಾರಗಳು ಅವನ ಕಷ್ಟಗಳನ್ನ ಕೇಳದೆ ಇರುವುದು ಒಂದು ದೊಡ್ಡ ದುರಂತವಾಗಿದೆ. ರೈತರು ಬೆಳೆ ಸಾಲ ಮಾಡಿ ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡು ತಮ್ಮ ಕುಟುಂಬಗಳನ್ನು ಕಷ್ಟಕ್ಕೆ ನೂಕುತ್ತಿದ್ದಾರೆ. ಮುಂದೆ ಈ ಘಟನೆ ಮರುಕಳಿಸಬಾರದೆಂದರೆ ರೈತರು ಬೇಸಾಯದ ಜೊತೆಗೆ ಹೈನುಗಾರಿಕೆ, ಮೇಕೆ ಸಾಕಾಣಿಕೆ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ ಮುಂತಾದ ಕಸಬುಗಳನ್ನು ನೆಚ್ಚಿ ಮಾಡುವುದರಿಂದ ಬೆಳೆ ಕೈಗೆ ಸಿಗದಿದ್ದರೂ ಇದರಿಂದ ಬರುವ ಆದಾಯದಿಂದ ನೆಮ್ಮದಿ ಜೀವನ ನಡೆಸಬಹುದು. ಯಾವುದೇ ಸಾಲದ ಸುಳಿಗೆ ಸಿಲುಕಿ ತಮ್ಮ ಜೀವನವನ್ನ ಕೊನೆಗೊಳಿಸದೆ ತಮ್ಮ ಕುಟುಂಬ ವರ್ಗದವರನ್ನ ಅನಾಥರಾಗಿ ಮಾಡದೆ ಜೀವನವನ್ನು ಧೈರ್ಯವಾಗಿ ಎದುರಿಸಬೇಕಾಗಿದೆ. ಹೀಗೆ ಮರದಿಂದ ಮಳೆ, ಮಳೆಯಿಂದ ರೈತ, ರೈತನಿಂದ ಬೆಳೆ, ಬೆಳೆಯಿಂದ ಇಡೀ ಮನುಕುಲದ ಜೀವನ ಎಂದು ಪ್ರತಿಯೊಬ್ಬರ ಮನಸ್ಸಿನಲ್ಲಿ ಮೂಡಿದಾಗ ಮಾತ್ರ ಎಲ್ಲಾ ಸುಭೀಕ್ಷವಾಗಿರುತ್ತೆ...! ಇಲ್ಲಾಂದ್ರೆ ಇಡೀ ಭೂಮಂಡಲವೇ ಸ್ಮಶಾನವಾಗುತ್ತದೆ. ಇರುವುದು ಒಂದೇ ಭೂಮಿ,

ಮಲಿನಗೊಳಿಸಬೇಡಿ ಸ್ವಾಮಿ....!

# ಪುರುಷ ಎಂಬುದು ಅರ್ಹತೆ ಮಹಿಳೆ ಎಂಬುದು ಕೊರತೆಯೇ



ಮೇಘ ಎನ್.
ತೃತೀಯ ಬಿ.ಕಾಂ.

ಮಹಿಳೆ ಅಥವಾ ಸ್ತ್ರೀ ಎಂದರೆ ತಾಯಿ, ದೇವತೆ ಎಂಬಿತ್ಯಾದಿ ಪೂಜ್ಯ ಸ್ಥಾನ ಕೊಡುವುದು ನಮ್ಮ ಭಾರತದ ಸಂಸ್ಕೃತಿ ಎಂದು ನಾವೆಲ್ಲ ಹೆಮ್ಮೆಯಿಂದ ಹೇಳುತ್ತೇವೆ. ಆದರೆ ನಿಜ ರೂಪದಲ್ಲಿ ಇದು ಭಾಷಣ, ಉಪನ್ಯಾಸದಲ್ಲಿ ಅಲ್ಲಿ ಇಲ್ಲಿ ಕೇಳುವಂತಾಗಿದೆ. ಮಹಿಳೆಯರನ್ನು ತುಚ್ಛವಾಗಿ ಕಾಣುವ, ನಡೆಸಿಕೊಳ್ಳುವವರೇ ಪ್ರಪಂಚದಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ. ಅಂಥ ವಿಕೃತಿ ಭಾರತದಲ್ಲಿ ಹೇರಳವಾಗಿದೆ. ಮಹಿಳೆ ಅಬಲೆಯಲ್ಲ ಸಬಲೆ ಪುರುಷನಿಗೆ ಸರಿಸಮಾನಳು. ಮಹಿಳೆ ತಾನು ಯಾವುದರಲ್ಲೂ ಕಡಿಮೆಯಿಲ್ಲ ಎಂದು ಹೇಳಿಕೊಳ್ಳುವ ಸನ್ನಿವೇಶ ಈಗಲು ಇಲ್ಲವಲ್ಲ ಎನ್ನುವುದು ದುರಂತ. ಪುರುಷ ಮತ್ತು ಮಹಿಳೆ ಎಂಬ ವರ್ಗೀಕರಣವೇ ಇದಕ್ಕೆ ಕಾರಣ. ಇಂದು ಈ ಮನಸ್ಥಿತಿ ಬದಲಾಗಬೇಕಿದೆ. ನಮ್ಮ ದೇಶದ ಮಾನವ ಸಂಪನ್ಮೂಲ ಅಭಿವೃದ್ಧಿ ಖ್ಯಾತಿಯ ಸಚಿವರಾದ ಸ್ಮೃತಿ ಇರಾನಿಯವರನ್ನು ಉದಾಹರಣೆ ಕೊಡಲು ಇಚ್ಛಿಸುತ್ತೇನೆ. ಕಳೆದ ಕೆಲವು ವರ್ಷಗಳಿಂದ ಕೇಂದ್ರ ಸರ್ಕಾರದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಒಂದು ರೀತಿಯಲ್ಲಿ ವಿವಾದಾತ್ಮಕ ಖಾತೆಯೇ ಆಗಿಬಿಟ್ಟಿತು. ಹಳೆಯ N.D.A. ಸರ್ಕಾರದ ಮುರುಳಿ ಮನೋಹರ ಜೋಶಿ, U.P.A. ಸರ್ಕಾರದ ಕಪಿಲ್ ಸಿಬಿಲ್‌ರವರಿಗೆ ಖಾತೆ ನಿರ್ವಹಣೆ ವಿಚಾರದಲ್ಲಿ ವಿವಾದಗಳಿಗೆ ಎಡೆ ಮಾಡಿ ಕೊಟ್ಟವರೆ. ಆದರೆ ಸ್ಮೃತಿ ಇರಾನಿಯವರು ಈ ಹೊಣೆ ಹೊತ್ತ ಮೇಲೆ ಒಂದೇ ಒಂದು ವಿವಾದದ ಹೇಳಿಕೆ ಉದ್ಭವವಾಗಿಲ್ಲ. ಸದ್ಯ ವೇಮುಲ ಹಾಗೂ ಜೆ.ಎನ್.ಯು ವಿಚಾರದಲ್ಲಿ ತಮ್ಮ ಹೊಣೆಗಾರಿಕೆ ನಿಭಾಯಿಸುವಲ್ಲಿ ಸಫಲರಾಗಿದ್ದಾರೆ. ಯಾವುದೇ ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ಕಲಿತು ಬಂದ ಮೇಧಾವಿಗೆ ಕಡಿಮೆ ಇಲ್ಲದಂತೆ ಜವಾಬ್ದಾರಿಗೆ ಹೆಗಲು ಕೊಟ್ಟಿದ್ದಾರೆ. ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳ ಕುಲಪತಿಗಳಿಗೆ ಸ್ಮೃತಿಯವರು ನೀರಿಳಿಸಿದ ರೀತಿಯಂತು ಅದ್ಭುತ. ಆ ಸಭೆಗೆ ಸಿದ್ಧತೆ ಮಾಡಿಕೊಂಡು ಬಂದಿದ್ದ ರೀತಿಯೇ ಅವರ ಸ್ಥಾನದ ಜವಾಬ್ದಾರಿಯ ಬಗ್ಗೆ ಅವರಿಗಿರುವ ಅರಿವು ತಿಳಿಯಬಹುದಾಗಿದೆ. ಆದರೂ ರಾಜ ಕಾರಣಿಗಳಿಗೆ ಅಥವಾ ಜನರಿಗೆ ಇವರು ದಕ್ಷ ಸಚಿವೆ ಎಂದು ಒಪ್ಪಿಕೊಳ್ಳಲು ಆಗುವುದಿಲ್ಲ ಇದಕ್ಕೆ ಕಾರಣ?

ಪುರುಷ ಎನ್ನುವುದೊಂದು ಅರ್ಹತೆ ಮಹಿಳೆ ಎನ್ನುವುದು ಒಂದು ಕೊರತೆ ಎಂಬ ಮನೋಭಾವ ಇದಕ್ಕೆ ಕಾರಣ. ಒಬ್ಬ ಪುರುಷ ದೊಡ್ಡ ಹುದ್ದೆಯೊಂದಕ್ಕೆ ಏರಿದಾಗ ಎಲ್ಲರೂ ಆತನ ಸಾಧನೆಯನ್ನು ಪ್ರಶಂಸಿಸುತ್ತಾರೆ ಹೊರತು ಆತನ ವಿದ್ಯಾರ್ಹತೆ, ಕೌಟುಂಬಿಕ ಹಿನ್ನೆಲೆ ಇಂತಹ ಅರ್ಹತೆಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಆದರೆ ಓರ್ವ ಮಹಿಳೆ ಎತ್ತರದ ಹುದ್ದೆಗೇರಿದಾಗ ಎಲ್ಲರ ಹುಬ್ಬು ಮೇಲೇರುತ್ತದೆ. ಇವಳ ಅರ್ಹತೆ ಏನು? ಇವಳ ಹಿಂದೆ ಯಾವ್ಯಾವ ಪ್ರಭಾವಿಗಳಿದ್ದಾರೆ? ಯಾವ ರಾಜಕಾರಣಿಯ ಜತೆ ನಿಕಟ ಸಂಪರ್ಕ ಹೊಂದಿದ್ದಾರೆ? ಎಂಬಿತ್ಯಾದಿ ಪ್ರಶ್ನೆಗಳು ಉದ್ಭವವಾಗುತ್ತವೆ. ಅಂದರೆ ಓರ್ವ ಮಹಿಳೆ ಸ್ವಂತ ಅರ್ಹತೆಯಿಂದ, ಸ್ವಪ್ರಯತ್ನದಿಂದ ಉನ್ನತಿ ಸಾಧಿಸಬಹುದು ಎಂದು ಯಾರೂ ಯೋಚಿಸುವುದಿಲ್ಲ ಯಾಕೆ? ಪ್ರಸ್ತುತ ನರೇಂದ್ರ ಮೋದಿಯವರ ಸಂಪುಟದಲ್ಲಿರುವ ಪುರುಷ ಸದಸ್ಯರ ಶೈಕ್ಷಣಿಕ ಅರ್ಹತೆಯ ಬಗ್ಗೆ ಯಾರಿಗೂ ಆಸಕ್ತಿಯಿಲ್ಲ. ಆದರೆ ಸ್ಮೃತಿ ಇರಾನಿ ಸಚಿವರಾಗುತ್ತಲೇ ಅವರ ಶೈಕ್ಷಣಿಕ ವಿದ್ಯಾರ್ಹತೆ ಕೆದಕಲಾಯಿತು. ಪದವಿ ಪೂರೈಸಲಿಲ್ಲ ಎಂಬ ಆರೋಪ ಮಾಡಲಾಯಿತು. ಸಚಿವರಾಗಿ ಅವರ ದಕ್ಷತೆಯನ್ನು ಯಾರೂ ಪರಿಗಣಿಸುವುದಿಲ್ಲ. ಬದಲಾಗಿ ಹಿಂದೆ ನಟಿಯಾಗಿದ್ದರು, ಹೋಟೆಲಿನಲ್ಲಿ

ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ
ಕೊಳ್ಳೇಗಾಲ-571440

ಕೆಲಸಗಾರರಾಗಿದ್ದರು ಎಂಬಿತ್ಯಾದಿ ವಿಷಯುಗಳು ಪ್ರಮುಖವಾಗುತ್ತವೆ.

ಇದು ಸ್ಮೃತಿಯ ಹೋರಾಟ ಮಾತ್ರವಲ್ಲ ಎಲ್ಲಾ ಮಹಿಳಾ ಸಾಧಕರು ಎದುರಿಸುವ ಸಮಸ್ಯೆ ಹಾಗೂ ಸವಾಲು. ದಕ್ಷೆ ಸಚಿವೆಯಾಗಿದ್ದ ಶೋಭ ಕರಂದ್ಲಾಜೆ, ಆಸ್ಟ್ರೇಲಿಯಾದ ಪ್ರಧಾನಿಯಾಗಿದ್ದ ಜೂಲಿಯಾ ಗಿಲ್ಲಾರ್ಡ್, ಜರ್ಮನಿಯ ಚಾನ್ಸಲರ್ ಏಂಜೆಲಾ ಮಾರ್ಕೆಲ್, ಅರ್ಜೆಂಟಿನಾ ಅಧ್ಯಕ್ಷೆಯಾಗಿದ್ದ ಕ್ರಿಸ್ಟಿನಾ ಫರ್ನಾಂಡೀಸ್, ಬ್ರೆಜಿಲ್‌ನ ಅಧ್ಯಕ್ಷೆ ದಿಲ್ಮಾರೋಸಫ್ ಸಾವಿತ್ರಿಭಾಯಿ ಪುಲೆ, ಇವರೆಲ್ಲರೂ ವ್ಯಕ್ತಿಗತ ಸಾಧನೆಯಿಂದ ಉತ್ತುಂಗಕ್ಕೇರಿದರೂ ಜನ ಚರ್ಚಿಸುವುದು ಅವರ ಸೌಂದರ್ಯವನ್ನು ಅಥವಾ ಆಕೆ ಸ್ತ್ರೀ ಎಂಬ ವಿಚಾರದಿಂದ ಮಾತ್ರ, ಮಹಿಳೆಯನ್ನು ಸೌಂದರ್ಯದ ಪರಿಭಾಷೆ ಬಿಟ್ಟು ಸಹಜ ದೃಷ್ಟಿಕೋನದಿಂದ ನೋಡುವಂತೆ ಒಪ್ಪಿಕೊಳ್ಳುವಂತಹ ಸಮಾಜ ಬೇಗ ಬರಲಿ ಎಂದು ಆಶಿಸೋಣ.

"I measure the progress of a community by the degree of progress which women have achieved" - B.R. Ambedkar

---

## ಅಪ್ಪ

ದಿವ್ಯ ಎನ್.ಎಂ.
ದ್ವಿತೀಯ ಬಿ.ಕಾಂ.



ಜನ್ಮಕೊಟ್ಟ ಜನಕ ಜನ್ಮ ಭೂಮಿಗಿಂತ ಹೆಚ್ಚು
ಜೀವನವನ್ನು ಮುಡಿಪಾಗಿ ಇಟ್ಟವನು
ಮಾತಲ್ಲಿ ಪ್ರೀತಿಯನ್ನು ಕೊಟ್ಟವನು
ಸಿಟ್ಟಿನಲ್ಲಿ ಬುದ್ಧಿಯನ್ನು ಕಲಿಸಿದವನು
ನೋವಲ್ಲಿ ಜೊತೆಯಾದವನು

ಪ್ರೀತಿಯ ಕಡಲನ್ನು ಹರಿಸಿದವನು
ತನ್ನ ಸಂತೋಷವನ್ನು ನೀಡಿದವನು
ಜೀವನದಲ್ಲಿ ದಾರಿದೀಪವಾದವನು
ಅವನನ್ನು ಕಳೆದುಕೊಂಡರೆ ಜೀವನದ
ಸಂತೋಷ
ವನ್ನು ಕಳೆದುಕೊಂಡಂತೆ....

## ಅಮ್ಮ

ಕಾವ್ಯ ಆರ್.ಪಿ.
ದ್ವಿತೀಯ ಬಿ.ಕಾಂ.



ಮಮತೆಯ ರೂಪವಾಗಿ, ಮಗುವಿಗೆ ನಗುವಾಗಿ
ವಾತ್ಸಲ್ಯದ ಕಣ್ಣಾಗಿ, ಕರುಣೆಯ ಸಿರಿಯಾಗಿ
ಲೋಕದ ಹಿತಕ್ಕಾಗಿ ಸದಾ ಸ್ಮರಿಸುವವಳೇ
ತಾಯಿ....

ತನ್ನ ಹಂಗನ್ನೇ ತೊರೆದು ಜನ್ಮ ನೀಡುವವಳು ಅಮ್ಮ
ತನ್ನ ದುಃಖವನ್ನು ಮರೆತು ಪ್ರೀತಿಸುವವಳು ಅಮ್ಮ
ತನ್ನ ಜೀವನವನ್ನು ಮುಡಿಪಾಗಿ ಇಟ್ಟವಳು ಅಮ್ಮ
ದೇವರನ್ನು ಬಿಡು ಮಗು ಅಮ್ಮನ್ನು ಪೂಜಿಸು

# ದೇಶದ ಏಕತೆಗೆ ಭಂಗ ತರುವವರನ್ನು ಸಿಯಾಚಿನ್‌ಗೆ ಕಳುಹಿಸಬೇಕು



ಶ್ವೇತ ಎನ್.
ತೃತೀಯ ಬಿ.ಕಾಂ.

ಭಾರತ ವೈವಿಧ್ಯತೆಯ ತವರೂರು. ಭಾಷೆ, ಸಂಸ್ಕೃತಿ, ಆಚರಣೆ, ಜಾತಿ, ಮತಗಳಲ್ಲಿ ಇಲ್ಲಿ ವಿಭಿನ್ನತೆ ಇದೆ. ಆದರೆ ಆ ಭಿನ್ನತೆಯನ್ನು ದಾಳವಾಗಿಸಿಕೊಂಡು ಜನರನ್ನು ಒಡೆಯುವ ಪ್ರಯತ್ನಗಳು ದೇಶದಲ್ಲಿ ನಡೆಯುತ್ತಿರುವುದು ವಿಷಾದನೀಯ. ರಾಜಕೀಯ ನಾಯಕರಿಗೆ ದೇಶದ ಅಭಿವೃದ್ಧಿ ಮುಖ್ಯವಲ್ಲವೇ?

ಅರ್ಥಹೀನವಾದ ಅವಲಾಪಗಳಿಗೆ, ದೇಶದ್ರೋಹಿ ಚಟುವಟಿಕೆಗಳಿಗೆ ಭಾರತದ ಅನೇಕ ವಿಶ್ವವಿದ್ಯಾನಿಲಯಗಳು ಪಕ್ಕಾಗಿವೆ ಎಂದರೆ ಹೊಸತೇನಿಲ್ಲ. ಎಲ್ಲರಿಗೂ ತಿಳಿದಿರುವುದೇ ಆಗಿದೆ. ಇದಕ್ಕೆಲ್ಲ ದೊಡ್ಡ ಹಿನ್ನೆಲೆ ಇದೆ. ಇಂದಿನ ದಿಮ್ಮಿ ಕುಣಿತಕ್ಕೆ ಇರುವ ಹಿನ್ನೆಲೆಯ ಪರದೆ ದೊಡ್ಡದಿದೆ, ದಪ್ಪದಾಗಿದೆ. ಬ್ರಿಟೀಷರು ಒಡೆದು ಆಳುವ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ಹಿಂದು, ಮುಸಲ್ಮಾನ, ದಲಿತ ಬಲಿತ ಜಾತಿ ತಾರತಮ್ಯಗಳಿದ್ದರೂ 20ನೇ ಶತಮಾನದ ಆದಿಭಾಗದಲ್ಲಿ ಇವು ಅಪಾಯದ ಮಟ್ಟ ಮುಟ್ಟಿದವು. ಇದರಿಂದ ಆದ ಲಾಭ? ಎಲ್ಲಿಂದಲೋ ಬಂದು ಸಾವಿರಾರೂ ವರ್ಷಗಳಿಂದ ಇದೇ ನೆಲದಲ್ಲಿ ಬದುಕಿ ಬಾಳಿದ ಭಾರತೀಯ ಮುಸಲ್ಮಾನರಿಗೆ ಹಿಂದುಗಳ ಜೊತೆ ಒಂದೇ ದೇಶದಲ್ಲಿರುವುದು ಅಸಹನೀಯವಾಗಿಬಿಟ್ಟಿತು. ದೇಶದ ಪ್ರಥಮ ಪ್ರಧಾನಿ ರಾಜಕೀಯ ಜಾಣ್ಮೆ, ದೂರದೃಷ್ಟಿ ತೋರಿದ್ದರೆ ಇಂದು ಕಾಶ್ಮೀರ ಬೆಂಕಿಯ ಬಲೆಯಲ್ಲಿ ಸಿಲುಕಿಕೊಂಡು ಭಾರತವನ್ನು ಸುಡುವುದನ್ನು, ಅನೇಕ ಅಮಾಯಕರು ದಿನವಿಡೀ ಪ್ರಾಣ ಕಳೆದುಕೊಳ್ಳುವುದನ್ನು ತಪ್ಪಿಸಬಹುದಿತ್ತೇನೋ. ಅಂತೂ ಕಾಶ್ಮೀರ ಬಿಡಿಸಲಾಗದ ಕಗ್ಗಂಟಾಗಿ ಭಾರತದ ಬ್ರೇನ್ ಟ್ಯೂಮರ್ ಆಗಿ ತಲೆ ತಿನ್ನುತ್ತಿದೆ.

ಕಳೆದ ಸಂಸತ್ ಸಮಾವೇಶದಲ್ಲಿ ಬಂಗಾಲದ ಸಿಪಿಎಂ ನಾಯಕರೊಬ್ಬರು ತಮ್ಮ ಭಾಷಣದಲ್ಲಿ democracyಯನ್ನು desate, communication and dissent are the of democracy ಎಂದು ಬಣ್ಣಿಸಿದ ರೀತಿ ನಮಗೆಲ್ಲಾ ಗೊತ್ತಿದೆ. ಇಂದು ವಿಶ್ವ ವಿದ್ಯಾನಿಲಯುಗಳಲ್ಲಿ ಅಳವಡಿಸಿಕೊಂಡಿರುವ democracy ಇದೇ ಅಲ್ಲವೇ?

ಭಾರತ್ ಕಿ ಬರ್ ಬಾದಿಗಾಗಿ ಹೋರಾಡುತ್ತಿರುವ ವಿದ್ಯಾರ್ಥಿಗಳು, ವಿದ್ಯಾರ್ಥಿಗಳೆಂದು ಕರೆಸಿಕೊಳ್ಳಲು ಅನರ್ಹರು, ಹಾಗೆ ಕರೆದರೆ ಅಧು ಅನುಚಿತವಾಗಬಹುದು. ಇವರು ವಿದ್ಯೆ ಶಿಕ್ಷಣಕ್ಕಿಂತ ಹೆಚ್ಚಾಗಿ ರಾಜಕೀಯ ಕೆಸರಲ್ಲಿ ಇಳಿದಿರುವವರು. ಯಾರೋ ಆಡುತ್ತಿರುವ ಪಗಡೆಯಾಟದಲ್ಲಿ ಇವರು ಕಾಯಿಗಳಾಗುತ್ತಿದ್ದಾರೆ. ನೆಪಮಾತ್ರಕ್ಕೆ ಇವರು ವಿದ್ಯಾರ್ಥಿಗಳು, ಇವರು ಯಾವ ಭಾರತದ ನಾಶಕ್ಕಾಗಿ ಹಗಲಿರುಳು ಶ್ರಮಿಸುತ್ತಿದ್ದಾರೊ, ಆ ಬಡಭಾರತ ಇವರ ಶಿಕ್ಷಣಕ್ಕಾಗಿ ಖರ್ಚು ಮಾಡುತ್ತಿರುವುದು ಮಾತ್ರ ಕೇಳಿದರೆ ಹೌಹಾರುತ್ತೀರಿ. 2012 ರಿಂದ 2016ರ ವರೆಗೆ ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾನಿಲಯ (ಜೆ.ಎನ್.ಯು)ಕ್ಕೆ ಭಾರತ ಸರ್ಕಾರ ಕೊಟ್ಟಿರುವುದು 1300 ಕೋಟಿ ರೂ. ಇಲ್ಲಿ ಅನೇಕ ವಿದ್ಯಾರ್ಥಿಗಳಿಗೆ ಊಟ, ವಸತಿ, ಬಟ್ಟೆ, ಶುಲ್ಕ ಎಲ್ಲದಕ್ಕೂ ವಿನಾಯಿತಿ ಇದೆ. 15 ಜನ ವಿದ್ಯಾರ್ಥಿಗಳಿಗೆ ಒಬ್ಬ ಅಧ್ಯಾಪಕನ ಅನುಪಾತವಿದೆ. ಕೇಂದ್ರೀಯ ವಿಶ್ವವಿದ್ಯಾನಿಲಯಗಳ ಈ ವೈಭವದ ಸ್ಥಿತಿಯನ್ನು ದೇಶದ ಇವರ ಕಾಲೇಜುಗಳಿಗೆ ಹೋಲಿಸಿ ನೋಡಿದರೆ ನಿಮಗೆ ಗೊತ್ತಾಗುವ ಸಂಗತಿ ಏನೆಂದರೆ ಎಷ್ಟೋ ಕಾಲೇಜುಗಳಲ್ಲಿ 190 ವಿದ್ಯಾರ್ಥಿಗಳಿಗೆ ಒಬ್ಬ ಅಧ್ಯಾಪಕರಿದ್ದಾರೆ. ಕಾಮರ್ಸ್, ಇಕನಾಮಿಕ್ಸ್ ಮುಂತಾದ

ವಿಷಯಗಳಲ್ಲಿ ಈ ದುಃಸ್ಥಿತಿ ಸರ್ವೇ ಸಾಮಾನ್ಯ. ಇನ್ನು ಪೂರ್ಣಾವದಿ ಉಪನ್ಯಾಸಕರನ್ನು ತೆಗೆದುಕೊಳ್ಳುವುದಿಲ್ಲ. ಕಾಲಕಾಲಕ್ಕೆ ಸರಿಯಾದ ಸಂಬಳ ನೀಡದ ಅರೆಕಾಲಿಕ ಉಪನ್ಯಾಸಕರಿಂದಲೇ ಪಾಠ ಕೇಳಬೇಕು. ವಿದ್ಯಾರ್ಥಿಗಳಿಗೆ ಭದ್ರತೆಯಂತೂ ಇಲ್ಲವೇ ಇಲ್ಲ.

ಇಲ್ಲಿ ಕೆಲಸ ಮಾಡುವವರಿಗೆ ಸಂಬಳ ಇಲ್ಲ. ಓದುವವರಿಗೆ ಕ್ಲಾಸ್ ರೂಂ ಇಲ್ಲ. ಎಲ್ಲ ಇರೋರು ಭಾರತ್ ಕಿ ಬರ್‌ಬಾದಿಗಾಗಿ ಹೋರಾಡುತ್ತಿದ್ದಾರೆ. ಇವರಿಗೆ ಬುದ್ಧಿಜೀವಿಗಳ, ರಾಜಕೀಯ ಪಕ್ಷಗಳ ನಾಯಕರ ಪೂರ್ಣ ಸಹಕಾರ ಬೇರೆ. ಈ ಉಪದ್ವಾಪಗಳಿಗೆ ಒಂದು ಗತಿ ಕಾಣಿಸಬೇಕು ಅನ್ನುವುದಾದರೆ ಭಾರತ ಸರ್ಕಾರಕ್ಕೆ ನಾವೊಂದು ಮನವಿ ಮಾಡೋಣ. ಸ್ವಾತಂತ್ರ್ಯದ ಬೆಲೆ ತಿಳಿಯಬೇಕಾದರೆ ದೇಶದ ಏಕತೆಗೆ ಭಂಗ ತರುವವರನ್ನು, ಭಾರತಕ್ಕೆ ದಿಕ್ಕಾರ ಕೂಗುವವರನ್ನು ಸರ್ಕಾರದ ಖರ್ಚಿನಲ್ಲಿ ಸಿಯಾಚಿನ್ ಯಾತ್ರೆ ಮಾಡಿಸಿ ಆರಾಮವಾಗಿರಿ ಎಂದು ಹೇಳಿ ಟಾಟಾ ಮಾಡಿ ಬರಬೇಕು. ಹನುಮಂತಪ್ಪ, ನಾಗೇಶ್, ಮಹೇಶ್, ಪವನ್‌ಕುಮಾರ್ ಮುಂತಾದ ಹುತಾತ್ಮರ ನೇರ ಪರಿಚಯ ಮಾಡಿಸಬೇಕು.

---

## ಪ್ರೀತಿ ಮತ್ತು ಸ್ನೇಹ

ಪಲ್ಲವಿ ಪಿ, ಪ್ರಥಮ ಬಿ.ಬಿ.ಎಂ.

ಗೂಡು ಎಂಬ ಕಾಲೇಜಿನಲ್ಲಿ
ಮನಸ್ಸು ಎಂಬ ಹಕ್ಕಿಯಾಗಿ
ಸ್ನೇಹ ಎಂಬ ರೆಕ್ಕೆಯಿಂದ
ಹಾರಲು ಬಂದಿರುವ
ಪುಟ್ಟ ಹಕ್ಕಿ ನಾನು

ಪ್ರೀತಿ ಎಂಬುವುದು ಮನಸ್ಸು
ಸ್ನೇಹ ಎಂಬುವುದು ಹೃದಯ
ಮನಸ್ಸಿಲ್ಲದಿದ್ದರೂ ಬಾಳಬಹುದು
ಹೃದಯವಿಲ್ಲದೆ ಬಾಳಲಾರೆನು

ಜೀವ ತೆಗೆಯುವುದು ಪ್ರೀತಿ
ಜೀವ ಉಳಿಸುವುದು ಸ್ನೇಹ
ಜೀವ ನೀಡಿದ್ದು ತಾಯಿ

ಮನಸ್ಸಿನ ಮಾತು ಕೇಳಿದವರಿಲ್ಲ
ಕಣ್ಣಿನ ಭಾಷೆ ಅರಿತವರಿಲ್ಲ
ಪ್ರೀತಿ ಮುಂದೆ ಯಾರೂ ಗೆದ್ದಿಲ್ಲ
ಸ್ನೇಹದ ಮುಂದೆ ಯಾರೂ... ಸೋತಿಲ್ಲ

ಸ್ನೇಹ ಎಂಬುದು ಚಿಗುರು
ಪ್ರೀತಿ ಎಂಬುದು ಹಸಿರು
ಸ್ನೇಹ ಎಂಬ ಚಿಗುರು ಇಲ್ಲದೆ
ಪ್ರೀತಿ ಎಂಬ ಹಸಿರು ಕಾಣುವುದಿಲ್ಲ

## ನಾಡು-ನುಡಿ

ಸುಕನ್ಯ ಜಿ.

ಭಾರತೀಯನಾಗಿ ನಾನು ಹುಟ್ಟಿ
ನನ್ನೆದೆಯ ಮೇಲೆ ಭಾವುಟವ ನೆಟ್ಟಿ
ಬೀಗುವೆನು ನಾ ಭಾರತೀಯನೆಂದು
ನಾನು ಭಾರತೀಯನೆ ಇಂದು ಎಂದೆಂದು ಎಂದು

ನಾ ಚಿನಕುರಳಿ ಕಂದ
ಹುಟ್ಟುತ್ತಲೇ ಹಂಚಿದೆ ಆನಂದ
ಅಮ್ಮನ ಮಡಿಲೇ ನನಗೆ ಬೃಂದಾವನ
ಅಪ್ಪನ ಹೆಗಲೇ ನನಗೆ ವಾಹನ
ಪುಟ್ಟ-ಪುಟ್ಟ ಹೆಜ್ಜೆ ಇಡುವ ಮುನ್ನ
ಏನೆಂದು ಕೂಗುವಿರಿ ಹೇಳಿ ನನ್ನ.....?

ಹಸಿದು ತಿನ್ನುವುದು ಪ್ರಕೃತಿ
ಹಸಿಯದೆ ತಿನ್ನುವುದು ವಿಕೃತಿ
ತಾನು ಹಸಿದು ಪರರಿಗೆ ಇಕ್ಕುವುದು ಕನ್ನಡಿಗರ
ಸಂಸ್ಕೃತಿ

ಮಾತಿನ ಮಾತು ನನಗೆ ಗೊತ್ತಿಲ್ಲ
ಕವಿತೆಯಲ್ಲಿ ಪ್ರೀತಿಯ ಮಾತು ಬಂದಿದೆಯಲ್ಲ
ಈ ಕವಿತೆಯಲ್ಲಿ ಮಾಡಿದ ಮಾತೆಲ್ಲ
ಮಾತಿನ ಮಾತನ್ನು ಮರೆಸಿದೆಯಲ್ಲ

ಕಥೆ

# ಮಕ್ಕಳೇ ಆಸ್ತಿ



**ಮೇಘ ಎನ್.**
ತೃತೀಯ ಬಿ.ಕಾಂ.

ಒಂದೂರಿನಲ್ಲಿ ಚಂದ್ರಣ್ಣ ಎಂಬ ಜಮೀನ್ದಾರ ಇದ್ದ. ಆತನಿಗೆ ರಾಮಣ್ಣ ಎಂಬ ಒಬ್ಬನೇ ಒಬ್ಬ ಮಗನಿದ್ದ. ಚಂದ್ರಣ್ಣ ಸಾಕಷ್ಟು ಸಿರಿವಂತನಾದರೂ, ತನ್ನ ಸಂಪತ್ತನ್ನು ದಾನ ಧರ್ಮಕ್ಕೆ ಹೆಚ್ಚು ಬಳಸಿ ಮಹಾದಾನಿ ಎನಿಸಿಕೊಂಡಿದ್ದ. ಮುಂದಿನ ಪೀಳಿಗೆಗಾಗಿ ಏನನ್ನೂ ಕೂಡಿ ಇಡದಿದ್ದರೂ, ಮಗ ರಾಮಣ್ಣನಿಗೆ ಅತ್ಯುತ್ತಮವಾದ ವಿದ್ಯಾಭ್ಯಾಸ ಕೊಡಿಸಿ ದೊಡ್ಡ ವಕೀಲನನ್ನಾಗಿ ಮಾಡಿದ. ಮಗನಿಗೆ ಮದುವೆಯನ್ನು ಮಾಡಿ ತನ್ನ ಜವಾಬ್ದಾರಿಯನ್ನು ಗುರುತರವಾಗಿ ಚಂದ್ರಣ್ಣ ಪೂರ್ತಿಗೊಳಿಸಿದ್ದ. ಹೀಗೆ ಜೀವನ ಸುಂದರವಾಗಿ ನಡೆಯುತ್ತಿರುವಾಗ ಚಂದ್ರಣ್ಣ ಹಠಾತ್ತನೆ ಒಂದು ದಿನ ಯಾವುದೋ ಘೋರ ಕಾಯಿಲೆಗೆ ತುತ್ತಾಗಿ ಹಾಸಿಗೆ ಹಿಡಿದ. ತಾನು ಇನ್ನು ಬದುಕಿ ಉಳಿಯುವುದು ಅಸಾಧ್ಯ ಎಂಬುದು ಆತನಿಗೆ ಗೊತ್ತಾದಾಗ, ಮಗ ರಾಮಣ್ಣನನ್ನು ತನ್ನ ಬಳಿಗೆ ಕರೆಸಿಕೊಂಡ. 'ಮಗು ರಾಮು, ಇಷ್ಟು ದಿನ ನಾನು ದಾನ ಧರ್ಮಗಳಲ್ಲೇ ನಂಬಿಕೆ ಇಟ್ಟುಕೊಂಡು ಜೀವನ ಸಾಗಿಸಿದ್ದೇನೆ. ನೀನೂ ಅಂತಹ ಜೀವನವನ್ನೇ ನಡೆಸು. ನನ್ನ ಹೊಲಗದ್ದೆಗಳನ್ನೆಲ್ಲ ಉಳುಮೆ ಮಾಡುತ್ತಿದ್ದ ನಮ್ಮ ಪ್ರೀತಿಪಾತ್ರರಾದ ಬಡರೈತರಿಗೆ ದಾನ ಮಾಡಿದ್ದೇನೆ. ಮನೆಯೊಂದನ್ನು ನಿನಗೆ ಬಿಟ್ಟಿದ್ದೇನೆ. ಮಕ್ಕಳಿಗಾಗಿ ಆಸ್ತಿ ಮಾಡಬೇಡ. ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ ಚೆನ್ನಾಗಿ ಬಾಳು' ಎಂದು ಹೇಳಿ ಪ್ರಾಣಬಿಟ್ಟ.

ರಾಮಣ್ಣನಿಗೆ ಅಪ್ಪನ ಸಾವು ಅಪಾರ ನೋವು ತಂದಿತು. ಜೊತೆಗೆ ಲಕ್ಷಾಂತರ ರೂಪಾಯಿ ಬೆಲೆಬಾಳುವ ಆಸ್ತಿಯನ್ನು ಬೇರೆಯವರಿಗೆ ದಾನ ನೀಡಿದ್ದರಿಂದ ಅಸಮಾಧಾನವೂ ಉಂಟಾಯಿತು. ಖ್ಯಾತ ವಕೀಲನಾದ್ದರಿಂದ ರಾಮಣ್ಣನಿಗೆ ಸಾಕಷ್ಟು ಹಣ ಸಂಪಾದನೆಯಾಗುತ್ತಿತ್ತು. ಆದರೂ ಆಸ್ತಿಯ ಮೋಹ ಅಪ್ಪನ ಮಾತುಗಳನ್ನು ಅರ್ಥಮಾಡಿಕೊಳ್ಳಲು ಬಿಡಲಿಲ್ಲ. ಸಂಪತ್ತು ಇದ್ದರೂ ಇಲ್ಲದೆ ತನ್ನ ಒಬ್ಬನೇ ಮಗ ಸೋಮಣ್ಣ ತನ್ನಂತೆ ಕೊರಗಬಾರದು ಎಂದು ನಿರ್ಧರಿಸಿದ ರಾಮಣ್ಣ ಆಸ್ತಿಯ ಮೇಲೆ ಆಸ್ತಿಯನ್ನು ಮಾಡತೊಡಗಿದ. ಸಂಪತ್ತಿನ ಹುಚ್ಚು ವ್ಯಾಮೋಹದಿಂದ ರಾಮಣ್ಣ ಮಗ ಸೋಮಣ್ಣನ ಕಡೆ ಗಮನವನ್ನು ಕೊಡಲೇ ಇಲ್ಲ. ಅತಿಯಾದ ಶ್ರೀಮಂತಿಕೆಯಲ್ಲಿ ಸೋಮಣ್ಣ ಹೆದರಿಕೆ-ಬೆದರಿಕೆ ಇಲ್ಲದೆ ಬೆಳೆಯತೊಡಗಿದ. ದುಷ್ಟ ಗೆಳೆಯರೊಂದಿಗೆ ಸೇರಿ ಕೆಟ್ಟ ಚಟಗಳನ್ನು ಕಲಿತುಕೊಂಡ.

ದುರದೃಷ್ಟವಶಾತ್, ಒಮ್ಮೆ ರಾಮಣ್ಣ ಕಛೇರಿಯಿಂದ ವಾಪಸ್ ಬರುವಾಗ ಅಪಘಾತವಾಗಿ ಆತನ ಕಾಲುಗಳು ಸ್ವಾಧೀನ ತಪ್ಪಿದವು. ಮುಂದೆ ಸ್ವಲ್ಪ ದಿನಗಳಲ್ಲಿ ಕಣ್ಣುಗಳೂ ಸರಿಯಾಗಿ ಕಾಣದಾದವು. ಈ ಸ್ಥಿತಿಯಲ್ಲಿ ರಾಮಣ್ಣ ತನ್ನ ವಕೀಲ ವೃತ್ತಿಯನ್ನೇ ಕೈ ಬಿಡಬೇಕಾಯಿತು. ಆದರೆ ಈಗಾಗಲೇ ಸಾಕಷ್ಟು ಆಸ್ತಿ ಸಂಪಾದಿಸಿದ್ದರಿಂದ ಆತ ಹೆದರುವ ಅಗತ್ಯವಿರಲಿಲ್ಲ. ತಾನು ಸ್ವಂತವಾಗಿ ಯಾವುದೇ ವ್ಯವಹಾರ ಮಾಡುವ ಸ್ಥಿತಿಯಲ್ಲಿರದ ಕಾರಣ ಮಗ ಸೋಮಣ್ಣನನ್ನು ಅವಲಂಬಿಸಿದ. ಉಂಡಾಡಿ ಗುಂಡನಂತಿದ್ದ ಸೋಮಣ್ಣನಿಗೆ ಈಗ ಮನೆಯ ಯಜಮಾನಿಕೆ ಸಿಕ್ಕಿತು. ಹೀಗಾಗಿ ಸುಲಭವಾಗಿ ಹಣವನ್ನು ಬಳಸುವ ಅವಕಾಶವೂ ಸಿಕ್ಕಿತು. ಸೋಮಣ್ಣ ಅಪ್ಪನಿಗೆ ಸುಳ್ಳು ಲೆಕ್ಕ ಹೇಳಿ ದುಂದುವೆಚ್ಚ ಮಾಡತೊಡಗಿದ. ರಾಮಣ್ಣನಿಗೆ ಮಗನ ಸುಳ್ಳು ಲೆಕ್ಕದ ಅರಿವಿದ್ದರೂ, ಮಗನ ಮೇಲಿನ ಕುರುಡು ಪ್ರೇಮದಿಂದ ಅದನ್ನು ಅಲಕ್ಷಿಸಿದ. ಸೋಮಣ್ಣನ ಹಣದ ವ್ಯಾಮೋಹ, ಚಟ ಇವುಗಳ ಕಾರಣದಿಂದ ರಾಮಣ್ಣನ ಆಸ್ತಿ ಒಂದೊಂದಾಗಿ ಕರಗತೊಡಗಿತು. ಕಾಲಕ್ರಮೇಣ ಮೋಸದಿಂದ ಅಪ್ಪನ ಆಸ್ತಿಯನ್ನೆಲ್ಲ ತನ್ನ ಹೆಸರಿಗೆ ಮಾಡಿಕೊಂಡ ಸೋಮಣ್ಣ ಅಪ್ಪನನ್ನು ಕಾಲಕಸ ಮಾಡಿದ ಕೊನೆಗಾಲದಲ್ಲಿ ರಾಮಣ್ಣನಿಗೆ ತನ್ನ ಅಪ್ಪನ ಮಾತು ಅರಿವಾಗ ತೊಡಗಿತು. ಆದರೆ ಕಾಲ ಮಿಂಚಿತ್ತು.

ನೀತಿ : ಮಕ್ಕಳಿಗಾಗಿ ಆಸ್ತಿ ಮಾಡುವ ಬದಲು, ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಬೇಕು.

# ತೋಟದ ಹೂವುಗಳು (ಕಥೆ)



ಶಿಲ್ಪಶ್ರೀ ಎಂ.
ದ್ವಿತೀಯ ಬಿ.ಎ. [ಹೆಚ್.ಇ.ಪಿ.]

ಒಂದು ಊರು, ಆ ಊರಿನ ಹೆಸರು ಮಲ್ಲಿಗೆ ಹಳ್ಳಿ. ಆ ಊರಿನಲ್ಲಿ ಒಂದು ತೋಟ ಇತ್ತು. ಅದು ತುಂಬಾ ಸುಂದರವಾಗಿತ್ತು. ಆ ತೋಟದಲ್ಲಿ ತರ ತರಹದ ಪುಟ್ಟ ಪುಟ್ಟ ಹೂಗಿಡಗಳು, ಸಸ್ಯಗಳು ಇದ್ದವು. ಮಣ್ಣಿನ ಮಡಿಯಲ್ಲಿ ಮಲ್ಲಿಗೆ, ಗುಲಾಬಿ, ಸೇವಂತಿಗೆ, ಚಂಡು ಹೂ ಅರಳಿ ನಿಂತಿದ್ದವು. ತೋಟದ ಮಾಲಿಕ ಅವುಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ತೋಟದ ಸಮೀಪ ಒಂದು ಕೆಸರಿನ ಗುಂಡಿಯಿತ್ತು. ಅದರಲ್ಲಿ ಈರುಳ್ಳಿ ಮತ್ತು ಬೆಳ್ಳುಳ್ಳಿಯ ಪುಟ್ಟ ಪುಟ್ಟ ಸಸಿಗಳು ಬೆಳೆದಿದ್ದವು. ತೋಟದಲ್ಲಿದ್ದ ಮಲ್ಲಿಗೆ, ಗುಲಾಬಿ, ಸೇವಂತಿಗೆ, ಚಂಡು ಹೂ ತುಂಬಾ ಸುಂದರವಾಗಿದ್ದವು. ಒಂದು ದಿನ ಹೊರಗೆ ಬಂದ ಮಲ್ಲಿಗೆ, ಗುಲಾಬಿ, ಸೇವಂತಿಗೆ, ಚಂಡು ಹೂಗಳು, ಕೆಸರಿನಲ್ಲಿ ಬೆಳೆದಿದ್ದ ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನು ಕಂಡು ಕಿಸಕ್ಕನೆ ನಕ್ಕವು. ಮಾತಿನಲ್ಲೇ ಹಿಯಾಳಿಸಿದವು. 'ಹೇ, ಹೇ... ಬೆಳ್ಳುಳ್ಳಿ, ಈರುಳ್ಳಿ ಕೆಸರಿನ ಮಳ್ಳಿ, ಕಠ್ರನೆ ಕಳ್ಳಿ! ನಿಮ್ಮನ್ನು ಮುಟ್ಟಿಸಿಕೊಳ್ಳಲು ಹೇಸಿಗೆಯಾಗುತ್ತೆ. ಹಂದಿ, ನಾಯಿಗಳೂ ಹೊರಳಾಡುತ್ತವೆ. ನಿಮ್ಮ ಮೈ ತುಂಬಾ ಹೊಲಸು. ನೀವು ಅಂತಹ ಕೆಸರಿನಲ್ಲಿ ಹೇಗೆ ಇರುತ್ತೀರಪ್ಪ?' ಎಂದು. ಹೂಗಳು ಹಿಯಾಳಿಸಿದ್ದರಿಂದ ಬೆಳ್ಳುಳ್ಳಿ, ಈರುಳ್ಳಿ ಮುಖ ಸಪ್ಪಗೆ ಮಾಡಿದವು. 'ಹೇ ಈರುಳ್ಳಿ, ಬೆಳ್ಳುಳ್ಳಿ ನಮ್ಮನ್ನು ನೋಡಿ, ನಾವು ಹೇಗೆ ದಳ, ದಳ ಹೊಳೆಯುತ್ತಿದ್ದೀವಿ. ನಾವು ತುಂಬಾ ಆರೋಗ್ಯದಿಂದ ಇದ್ದೀವಿ. ನಮ್ಮ ಮೈಮೇಲೆ ಸ್ವಲ್ಪವಾದರೂ ಧೂಳು, ಹೊಲಸು ಇದೆಯಾ? ನೀವೇ ನೋಡಿ' ಎಂದು ಸ್ವಲ್ಪ ಮುಂದಕ್ಕೆ ಬಾಗಿದವು.

ಈರುಳ್ಳಿ ಮತ್ತು ಬೆಳ್ಳುಳ್ಳಿ ಬಹಳಷ್ಟು ಬೇಸರದಿಂದ ಕಾಲ ಕಳೆಯ ತೊಡಗಿದವು. ಒಂದು ದಿನ ಅದಕ್ಕೆ ಒಂದು ಯೋಚನೆ ಬಂತು. ತೋಟದ ಹೂಗಳ ಕಡೆ ಹೋಗಿ ಅವುಗಳನ್ನು ಮಾತಾನಾಡಿಸಬೇಕು. ನಾವು ನಿಮ್ಮ ಸ್ನೇಹಿತರಾಗ್ತಿವಿ ಅಂತ ಹೇಳಬೇಕು ಅಂತ ಅನಿಸಿತು. ಈರುಳ್ಳಿ ಮತ್ತು ಬೆಳ್ಳುಳ್ಳಿ ನಿಧಾನವಾಗಿ ಬಗ್ಗಿ ಬಗ್ಗಿ ನಡೆಯುತ್ತ ತೋಟದ ಹೂಗಳತ್ತ ಹೆಜ್ಜೆ ಹಾಕಿದವು.

ಹೂಗಳು ಕಾಣುತ್ತಿದ್ದಂತೆ ನಿಂತ ಈರುಳ್ಳಿ, ಬೆಳ್ಳುಳ್ಳಿ, 'ನಾವು ನಿಮ್ಮನ್ನು ಸ್ನೇಹಿತರಾಗಿ ಮಾಡಿಕೊಳ್ಳುವುದಿಲ್ಲ. ನೀವು ಕೆಸರಿನಲ್ಲಿ ಇರುತ್ತೀರಿ. ನಾವು ಸುಂದರವಾದ, ತೋಟದ ಮಡಿಗಳಲ್ಲಿ ಇರುತ್ತೇವೆ. ನಿಮ್ಮನ್ನು ಗೆಳೆಯರನ್ನಾಗಿ ಮಾಡಿಕೊಂಡರೆ ನಾವೂ ನಿಮ್ಮಂತೆ ಆಗಿ ಬಿಡುತ್ತೇವೆ' ಎಂದು ಹೂಗಳು, ಬೆಳ್ಳುಳ್ಳಿ, ಈರುಳ್ಳಿಯ ಮನವಿಯನ್ನು ತಿರಸ್ಕರಿಸಿದವು. ನಂತರ ಒಂದೊಂದು ಹೂವು ತಾನೆಷ್ಟು ಸುಂದರ ತಾನು ಹೇಗೆ ಬೆಳೆಯುವೆ ಎಂತಹ ಸುಂದರವಾದ ಹೂವುಗಳನ್ನು ಬಿಡುವೆ, ಯಾರು ಮುಡಿಯುತ್ತಾರೆ ಎಂದು ತನ್ನಷ್ಟಕ್ಕೆ ತಾನು ಜಂಬ ಕೊಚ್ಚಿಕೊಂಡಿತು. ನಾನು ತುಂಬ ಸುಂದರವಾಗಿದ್ದೀನಿ. ನನಗೆ ಸೂಜಿಯಿಂದ ಚುಚ್ಚಿ ದಾರದಲ್ಲಿ ಪೋಣಿಸಿ ದಂಡೆ ಮಾಡಿಕೊಂಡು ಹೆಣ್ಣು ಮಕ್ಕಳು ಮುಡಿದುಕೊಳ್ಳುತ್ತಾರೆ. ಅವರು ನನ್ನನ್ನು ಮುಡಿದ ಮೇಲೆ ಹೆಚ್ಚು ಸುಂದರವಾಗಿ ಕಾಣುತ್ತಾರೆ. ನಾನು ಎಲ್ಲಿ ಇರುತ್ತೇನೆ ಅಲ್ಲಿ ಸುಗಂಧ ಇರುತ್ತದೆ' ಎಂದು ಮಲ್ಲಿಗೆ ಹೂವು ತನ್ನನ್ನೆ ಮೂಸಿಕೊಂಡು ಮೂಗು ಅರಳಿಸಿತು.

'ನಾನೂ ತುಂಬ ಸುಂದರವಾಗಿದ್ದೀನಿ. ನನ್ನನ್ನು ಜನರು ರೋಜಾ ಅಂತ ಕರೆಯುತ್ತಾರೆ. ನನ್ನ ಜತೆಗೆ ನನ್ನ ಗೆಳೆಯ ಮುಳ್ಳು ಸಹ ಇರುತ್ತಾನೆ. ಆದ್ದರಿಂದ ಜನರು ನನ್ನನ್ನು ಹುಷಾರಾಗಿ ಮುಟ್ಟುತ್ತಾರೆ' ಎಂದು ಗುಲಾಬಿ ತನ್ನ ಮುಖವನ್ನು ಮತ್ತಷ್ಟು ಕೆಂಪಗೆ ಮಾಡಿತು. ನನಗೆ ಕಾಮನಬಿಲ್ಲಿನ ಎಲ್ಲ ಬಣ್ಣಗಳು ಗೊತ್ತು. ಏಳು ಬಣ್ಣಗಳಲ್ಲಿ ಹೂವುಗಳನ್ನು ಬಿಡುತ್ತೇನೆ. ಹಳದಿ ಬಣ್ಣದಲ್ಲಿ ಹೂ ಬಿಟ್ಟಾಗ, ಬಂಗಾರವೂ ತಲೆ ತಗ್ಗಿಸಬೇಕು ನನ್ನ ಚೆಲುವು ಕಂಡು ನನ್ನನ್ನು ಬಡವರು, ಶ್ರೀಮಂತರು ಎಲ್ಲರೂ ಇಷ್ಟಪಡುತ್ತಾರೆ. ಸೇವಂತಿಗೆ ಹೂವು ತನ್ನ ನೂರಾರು ಪಕಳೆಗಳ ಮೇಲೆ ಕೈಯಾಡಿಕೊಂಡಿತು.

ಹಬ್ಬ ಹುಣ್ಣಿಮೆಯಲ್ಲಿ ಬಾಗಿಲುಗಳಿಗೆ ತೋರಣವಾಗಿ ಯಾರನ್ನು ಸಿಂಗರಿಸುತ್ತಾರೆ ನನ್ನನ್ನು ಮಾತ್ರ. ಚಂಡು ಹೂವನ್ನು ಅದೆಷ್ಟು ಚಂದ ಕಾಣುತ್ತೆ, ಬಾಗಿಲಿಗೆ ನನ್ನನ್ನು ಕಟ್ಟಿದ ದಿನ' ಚಂಡು ಹೂ ತನ್ನ ಉದ್ದನೆ ಕತ್ತು ಚಾಚಿ

ಹೇಳಿತು. ಬೆಳ್ಳುಳ್ಳಿ, ಈರುಳ್ಳಿ ಹೂವುಗಳಿಂದ ಸುವಾಸನೆ ಬರಲ್ಲ. ನಿಮ್ಮನ್ನು ಯಾರು ಮುಡಿಯಲ್ಲ. ಹ್ಹ, ಹ್ಹ, ಹ್ಹ ಅಂತ ನಗುತ್ತ ಹೂಗಳು ಮತ್ತೆ ತೋಟದತ್ತ ನಡೆದವು.

ಕೆಲವು ದಿನಗಳು ಹೀಗೆ ಕಳೆದವು. ತೋಟದ ಮಾಲೀಕ ಕೆಲಸದ ನಿಮಿತ್ತ ವಾರ ಹದಿನೈದು ದಿನ ಬೇರೆ ಊರಿಗೆ ಹೋದ. ತೋಟದ ಹೂ ಗಿಡಗಳು ಬಾಡ ತೊಡಗಿದವು. ಹಸಿವಿನಿಂದ ನರಳತೊಡಗಿದವು. ಎಲ್ಲ ಹೂವುಗಳಿಗೆ ಜ್ವರ, ನೆಗಡಿ, ಕೆಮ್ಮು ಬಂತು. ಬಣ್ಣ ಬಣ್ಣದ ಚಿಟ್ಟೆಗಳಿಗೂ ಚಿಂತೆ ಕಾಡಿತು. ಹೂವುಗಳ ಸಮೀಪ ಬಂದ ಚಿಟ್ಟೆಗಳು ನೀವು ಜ್ವರಕ್ಕೆ ಔಷಧ ತೆಗೆದುಕೊಳ್ಳದೆ ಹೋದರೆ, ಬೇಗ ಸಾಯುತ್ತೀರಿ. ಬೆಳ್ಳುಳ್ಳಿಯ ಬಳಿಗೆ ಹೋಗಿ ಔಷಧ ಕೇಳಿ, ಬೆಳ್ಳುಳ್ಳಿಯ ಮರಿಗಳನ್ನು ತಿಂದರೆ ನಿಮ್ಮ ಜ್ವರ, ನೆಗಡಿ, ಕೆಮ್ಮು ವಾಸಿಯಾಗುತ್ತದೆ' ಎಂದು ಬುದ್ಧಿ ಹೇಳಿದವು.

ಹೂಗಳು ಬಾಡಿದ ಮುಖ ಹೊತ್ತು ಹೆಜ್ಜೆಗೊಮ್ಮೆ ಕೆಮ್ಮುತ್ತ, ಸೀನುತ್ತ, ಬೆಳ್ಳುಳ್ಳಿ, ಈರುಳ್ಳಿ ಇದ್ದ ಕೆಸರಿನ ಹೊಂಡದ ಬಳಿ ಹೋದವು. ಈರುಳ್ಳಿ ಮೊದಲು ಎದ್ದು ನಿಂತು ಹೂವುಗಳ ಸ್ಥಿತಿಗೆ ಮರುಕಪಟ್ಟಿತು. ಬೆಳ್ಳುಳ್ಳಿ ತನ್ನ ಬುಡದಲ್ಲಿ ಬೆಳೆದ ಮರಿಗಳನ್ನು ಕಿತ್ತು ಎಲ್ಲ ಹೂವುಗಳಿಗೆ ತಿನ್ನಲು ಕೊಟ್ಟಿತು. ಔಷಧ ತಿಂದ ಹೂಗಳು ಗುಣಮುಖವಾದವು. ಹೂವುಗಳು ಕೆಸರಿನ ಹೊಂಡದಲ್ಲಿ ಇಳಿದು ಬೆಳ್ಳುಳ್ಳಿ, ಈರುಳ್ಳಿಯನ್ನು ಅಪ್ಪಿಕೊಂಡವು. 'ನೀವು ತುಂಬ ಒಳ್ಳೆಯವರು, ಕೆಸರಿನಲ್ಲಿ ಇದ್ದರೂ ನಿಮ್ಮ ಗುಣ ಹೂವಿಗಿಂತ ದೊಡ್ಡದು. ಇನ್ನು ಮುಂದೆ ನಾವೆಲ್ಲರೂ ಸ್ನೇಹಿತರಾಗಿ ಇರೋಣ' ಎಂದು ಚಂಡು ಹೂ ಜೋರಾದ ದನಿಯಲ್ಲಿ ಹೇಳಿತು. ಅದಕ್ಕೆ ಮಲ್ಲಿಗೆ, ಗುಲಾಬಿ, ಸೇವಂತಿಗೆ ತಲೆಯಾಡಿಸಿದವು. ಬೆಳ್ಳುಳ್ಳಿ, ಈರುಳ್ಳಿ ಸಸಿಗಳು ಸಂತಸದಲ್ಲಿ ತೇಲಿದವು.

---

## ಕರುಣಾಮಯಿ

**ಅಶ್ವಿನಿ ಎಸ್**
ದ್ವಿತೀಯ ಬಿ.ಎ. [ಹೆಚ್.ಇ.ಜಿ.]

ಬಾಳಿನ ರಣರಂಗದಲಿ ನಾ ಸೋತು ನಿಂತಾಗ
ಸ್ಫೂರ್ತಿಯನು ತುಂಬಿ ಗೆಲುವು ತಂದಾಕೆ
ಸಾಕೆನಗೆ ಈ ಬಾಳು ಎಂದೆನಿಸಿದಾಗ
ನನ್ನಲ್ಲಿ ಹೊಸ ಅಭಿಲಾಷೆ ಮೂಡಿಸಿದಾಕೆ
ಅವಳೇ ನನ್ನೊಲವಿನ ಅಮ್ಮ
ನನ್ನ ಮುದ್ದು ಅಮ್ಮ
ಎಳೆತನದಿಂದ ನನ್ನೊಂದಿಗಿದ್ದು
ಬಾಲ್ಯದ ಸವಿಯನ್ನು ಸವಿಸಿದಾಕೆ
ಆಟದಲ್ಲಿ ನಾ ಎಡಬಿದ್ದಾಗ ಕೈ ಹಿಡಿದು ನಿಲ್ಲಿಸಿ
ಸರಿಯಾದ ಆಟವನ್ನು ಹೇಳಿಕೊಟ್ಟಾಕೆ
ಅವಳೇ ನನ್ನೊಲವಿನ ಅಮ್ಮ
ನನ್ನ ಮುದ್ದು ಅಮ್ಮ
ಸಾಧನೆಯ ರಂಗಕ್ಕೆ ನಾ ಹೊರಟು ನಿಂತಾಗ
ಸಾಧನೆಯ ಹಾದಿಯಲಿ ನೆರಳಾದಾಕೆ
ನನ್ನೆಲ್ಲಾ ಹೆಜ್ಜೆಗೂ ಜೊತೆ ಬೇಕೆನಿಸಿದಾಗ
ಕತ್ತಲ ಹಾದಿಗೆ ಬೆಳಕಾಗಿ ಜೊತೆ ಬಂದಾಕೆ
ಅವಳೇ ನನ್ನೊಲವಿನ ನನ್ನೊಳಗಿನ ಅಮ್ಮ
ಅವಳೇ ನನ್ನ ಆತ್ಮ ನನ್ನೊಳಗಿನ ಅತ್ಮ

## ಪ್ರಕೃತಿ

**ಮಮತ ಎಂ.,** ದ್ವಿತೀಯ ಬಿ.ಎ. [ಹೆಚ್.ಇ.ಜಿ.]

ಪಚ್ಚೆ ಎಲೆಗಳ ನಡುವೆ ಹಚ್ಚೆಯಂತೆ
ಮುತ್ತಿಕೊಂಡಿವೆ ಕೆಂಪು ಹಳದಿ ಚುಕ್ಕಿಗಳು
ಎತ್ತ ನೋಡಲಿ ಅತ್ತ ವಕ್ರ ಜಲಧಾರೆಗಳು
ಮುತ್ತುತ್ತಿವೆ ಸುತ್ತಮುತ್ತ
ಚಿಗುರೆಲೆಯ ಮೇಲೆ ಇಬ್ಬನಿ
ಮುಂಜಾನೆ ನಸುಕಿನ ಚಳಿ
ನಡುಮಧ್ಯಾಹ್ನಕ್ಕೂ ಬಿಡದ ಚಳಿ
ವ್ಯಂಗದಿ ಕತ್ತೆತ್ತಿದಂತೆ ಮೂಡುತಿದೆ
ಮಳೆರಾಯನೋ ಜವರಾಯನೋ
ತಿಳಿಯದಂತೆ ಮಾಡಿದೆ
ಸೋನೆ ಮಳೆಯು ಮರೆಯಾಗಿದೆ
ಇತ್ತಲಿರದ ಅತ್ತಲಿಂದ ಹಂಚು ಹಾಕುತಲಿದೆ
ದಿನಕ್ಕೊಂದು ರೀತಿ ದಿನಕ್ಕೊಂದು ನೀತಿ
ಇದೇ ಮನುಕುಲದ ನೀತಿ
ಬದಲಾಗುವ ರೀತಿಯೇ ಅಲ್ಲ
ಬದಲಾದರೆ ಉಳಿಯುವರೇ ಎಲ್ಲಾ
ಜನರ ಮನದ ನಡುವೆ
ಆಗೊಮ್ಮೆ ಈಗೊಮ್ಮೆ ದುಃಖ ಸಂತಸ
ಮೂಡಿಸಿ, ಮರೆಯಾಗಿ
ನನಗಿಲ್ಲಿದೆ ಎಂದು ನಗುತ್ತಿರುವಳು 'ಪ್ರಕೃತಿ'

ಚಂದನ ಎಸ್
ತೃತೀಯ ಬಿ.ಕಾಂ.

## ಸ್ತ್ರೀ ಎಂದರೆ ಅಷ್ಟೇ ಸಾಕೆ!

'ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂದು ಹೇಳಿ ಹೆಣ್ಣಿಗೆ, ಮಣ್ಣಿಗೆ ಮೊದಲು ಸ್ಥಾನ ಕೊಟ್ಟಿರುವಂಥ ಭರತ ಖಂಡ ನಮ್ಮದು. "ಸ್ತ್ರೀ ವಿದ್ಯೆಯ ಸ್ವರೂಪ" ಎಂದು ಲಲಿತಾ ಸಹಸ್ರನಾಮದಲ್ಲಿ ಹೇಳಿರುವುದು ತಿಳಿದ ವಿಷಯವೇ ಸರಿ. ನಮ್ಮ ಭಾರತದಲ್ಲಿ ಹಲವಾರು ಮಹಿಳಾ ಸಾಧಕರು ಇದ್ದಾರೆ.



* ಭಾರತದ ಮೊದಲ ಮಹಿಳಾ ಗಗನಯಾತ್ರಿ – ಕಲ್ಪನಾ ಚಾವ್ಲಾ
* ಭಾರತದ ಪ್ರಥಮ ವಚನಕಾರ್ತಿ – ಅಕ್ಕಮಹಾದೇವಿ
* ಭಾರತದ ಐಪಿಎಸ್ ಆದ ಪ್ರಥಮ ಮಹಿಳೆ – ಕಿರಣ್ ಬೇಡಿ
* ಭಾರತದ ಪ್ರಥಮ ಎಂಜಿನಿಯರ್ – ಲಲಿತಾ
* ಭಾರತದ ಪ್ರಥಮ ಮಹಿಳಾ ಪ್ರಧಾನಿ – ಇಂದಿರಾಗಾಂಧಿ
* ಜ್ಞಾನಪೀಠ ಪ್ರಶಸ್ತಿ ಪಡೆದ ಪ್ರಥಮ ಭಾರತೀಯ ಮಹಿಳೆ – ಆಶಾಪೂರ್ಣದೇವಿ
* ಮೌಂಟ್ ಎವರೆಸ್ಟ್ ಏರಿದ ಮೊದಲ ಮಹಿಳೆ – ಕುಮಾರಿ ಬಂಚೇಂದ್ರಿಪಾಲ್
* ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಥಮ ಮಹಿಳಾ ಅಧ್ಯಕ್ಷರು – ಸರೋಜಿನಿ ನಾಯ್ಡು
* ಭಾರತದ ಪ್ರಥಮ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪಡೆದ ಮಹಿಳೆ – ದೇವಿಕಾರಾಣಿ
* ಭಾರತದ ಮೊದಲ ಮಹಿಳಾ ಮುಖ್ಯಮಂತ್ರಿ – ಸುಚೇತ ಕೃಪಲಾನಿ
* ಭಾರತದ ಪ್ರಥಮ ವಿಶ್ವಸುಂದರಿ – ರೀಟಾ ಫೆರಿದಾ
* ಭಾರತದ ಪ್ರಥಮ ಮಹಿಳಾ ಡಾಕ್ಟರ್ – ಡಾ. ಆನಂದಿಬಾಯಿ ಜೋಷಿ
* ಭಾರತದ ಪ್ರಥಮ ಮಹಿಳಾ ಬಸ್ ಚಾಲಕಿ – ವಸಂತಕುಮಾರಿ
* ಭಾರತದ ಅಂತರಾಷ್ಟ್ರೀಯ ಸಂಸ್ಥೆಯ ಪ್ರಥಮ ಮಹಿಳಾ ಅಧ್ಯಕ್ಷೆ – ವಿಜಯಲಕ್ಷ್ಮಿ ಪಂಡಿತ್
* ಭಾರತದ ಪ್ರಥಮ ಮಹಿಳಾ ಐಎಎಸ್ ಅಧಿಕಾರಿ – ಅನ್ನಾ ರಾಜಮ್ ಜಾರ್ಜ್
* ಇಂಗ್ಲೀಷ್ ಕಡಲ್ಗಾಲುವೆಯನ್ನು ಈಜಿ ದಾಟಿದ ಪ್ರಥಮ ಭಾರತೀಯ ಮಹಿಳೆ – ಅನಿತ ಸೂದ್

---

## ವರ್ಣಮಾಲೆಯ ವೈಭವ




ಅ :– ಅಮ್ಮ ಮಕ್ಕಳಿಗೆ ಮೊದಲ ಗುರು
ಆ :– ಆಟವಾಡುತ್ತ ಮಕ್ಕಳು ಬೆಳೆಯಲು ಶುರು
ಇ :– ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು
ಈ :– ಈಶ್ವರನೇ ನಮ್ಮೆಲ್ಲರ ದೈವ
ಉ :– ಉಸಿರಿರುವ ತನಕ ನಾಡಿಗಾಗಿ ದುಡಿ
ಊ :– ಊರಿಗಾಗಿ ನಮ್ಮೆಲ್ಲರ ದೇಹವು ಮುಡಿಪು
ಋ :– ಋಣ ಮುಕ್ತನಾಗಿ ತಾಯಿಯ ಮಡಿಲಲ್ಲಿ ದುಡಿ
ಎ :– ಎಂದೂ ನೀನು ಸತ್ಯವನ್ನೇ ನುಡಿ
ಏ :– ಏಕೆ ನಮಗೆ ಆಡಂಬರದ ಜೀವನ
ಐ :– ಐಶ್ವರ್ಯವೆಲ್ಲ ನಮ್ಮದಲ್ಲದೆಂದು ತಿಳಿ
ಒ :– ಒಂದೇ ತಾಯಿಯ ಮಕ್ಕಳೆಂದು ತಿಳಿ
ಓ :– ಓದುತಿ ಬರೆಯುತ ಪಾಠವ ಕಲಿ
ಔ :– ಔದಾರ್ಯದಿಂದ ಹಿರಿಯರಿಗೆ ತಲೆ ಬಾಗುವುದನ್ನು ಕಲಿ
ಅಂ :– ಅಂದಿಗೆ ನಮ್ಮಯ ಕನ್ನಡನಾಡು ಚಿನ್ನದ ನಾಡೆಂದು ತಿಳಿ
ಅಃ :– ಅಃ ಈ ಕವನ ಎಷ್ಟು ಸೊಗಸಾಗಿದೆ

## ಅ-ಇಂದ ಅಃ ನಡುವೆ ಇರುವ ಬದುಕಿನ ಸಾರ

ಎನ್. ಮೇಘ
ತೃತೀಯ ಬಿ.ಕಾಂ.

ಅ – ಅಮ್ಮ ಎಂಬ ಪುಟ್ಟ ಜಗತ್ತಿನಿಂದ ಅಳುತ್ತಾ ಬಂದು ಯಾರನ್ನು ಮುಂದೆಂದು ಅಳಿಸಬಾರದೆಂದು ಶಪಥವ ಮಾಡಿ ಇಂದು

ಆ – ಆನಂಧ ಭಾಷ್ಪವನ್ನು ಹೆತ್ತವರಿಗೆ ತಂದು

ಇ – ಇರುವಷ್ಟು ದಿವಸ ಇವರೆಲ್ಲರು ನನ್ನವರೆಂದು

ಈ – ಈ ಜಗತ್ತು ಪ್ರತಿಯೊಂದು ಜೀವಿಯ ಸ್ವತ್ತೆಂದು

ಉ – ಉಡುಗೆ ತೊಡುಗೆಗಳು ಭಾವನೆಗಳ ಪ್ರತೀಕ ಸಂಸ್ಕೃತಿಯ ಕನ್ನಡಿಯಾಗಿರಲೆಂದು

ಊ – ಊಟಕ್ಕೆ ತಕ್ಕ ಬೆಲೆಯೇ ಕಾಯಕವೆಂದು

ಋ – ಋಣ ಮುಕ್ತರಾಗಬೇಕು ಬದುಕಿನ ದೀಪವು ನಂದುವ ಮೊದಲು ನಮ್ಮಲ್ಲಿರಲಿ ಆ ಹಟ ಒಂದು

ಎ – ಎದ್ದೇಳ ಬೇಕು ಕಂಡ ಕನಸನ್ನು ನನಸು ಮಾಡಲೆಂದು

ಏ – ಏರಬೇಕು ಹಾರಬೇಕು ಸಾಧನೆಯ ಭಾನೆತ್ತರಕೆ ಛಲದ ರೆಕ್ಕೆಯ ಕಟ್ಟಿಕೊಂಡು ನಾವಿಂದು

ಐ – ಐಕ್ಯತೆಯ ಭಾವನೆ ಬದುಕಿಗೆ ಜೀವಾಳವಿಂದು

ಒ – ಒಳಿತಾಗಲು ಒಗ್ಗಟ್ಟೇ ಮೂಲ ಮಂತ್ರವಿಂದು

ಓ – ಓದಬೇಕು ಬದುಕು ಇರುವವರೆಗೂ ಇತರರೂ ಓದುವಂತವರಾಗಬೇಕು ನಮ್ಮ ಬದುಕಿನ ನಂತರವು

ಔ – ಔನ್ನತ್ಯಕ್ಕೆ ಪರಿಶ್ರಮವೆ ಔಷಧಿಯಿಂದು

ಅಂ – ಅಂಗೀಕಾರವಾಗಬೇಕು ನಾವು ಬದುಕುವ ರೀತಿ ನಮ್ಮ ಬದುಕು ಭವಿಷ್ಯದಲ್ಲಿ ಇತಿಹಾಸ ಸೇರಲೆಂದು

ಅಃ – ಪುನಃರಪಿ ಜನನಂ ಪುನಃರಪಿ ಮರಣಂ

ಹೆತ್ತವಳ ಒಡಲಿಂದ ಬಂದ ನಾವುಗಳು ಭೂತಾಯಿ ಒಡಲ ಸೇರುವವರೆಗೂ ಶಾಂತಿ ಧರ್ಮ ನ್ಯಾಯ ನೀತಿ ನಮ್ಮೆಲ್ಲರಲ್ಲಿ ನೆಲೆಸಲಿ

---

## ಚಿರಕಾಲ ವಿರಲಿ.....

ಕಾವ್ಯಶ್ರೀ ಪಿ
ತೃತೀಯ ಬಿ.ಕಾಂ.

ಕಾಲೇಜಿನಲ್ಲಾದ ಈ ಬಂಧ
ಜನ್ಮ ಜನ್ಮಾಂತರದ ಅನುಬಂಧ
ನಾವು ಕಳೆದ ಸೊಗಸಾದ ಪ್ರತಿಕ್ಷಣ
ನೆನಪಿರಲಿ ಸಾವಿರಾರು ದಿನ
ನನ್ನಲ್ಲಿ ತಪ್ಪಿದ್ದರೆ ಯಾವುದಾದರೂ
ಒಂದು ದಿನ
ಕ್ಷಮಿಸುವಿರಾ.... ಈ ಗೆಳತಿಯ
ಚಿರಕಾಲ ಅಳಿಯದಿರಲಿ
ನಮ್ಮ ಗೆಳೆತನ....

## ಬಾಳು

ತಾಯಿ ಇಲ್ಲದ ಬಾಳು ನಕ್ಷತ್ರವಿಲ್ಲದ ಬಾನಿನಂತೆ
ಶಾಂತಿ ಇಲ್ಲದ ಬಾಳು ನಾಟ್ಯ ಮರೆತ ನವಿಲಿನಂತೆ
ಕರುಣೆ ಇಲ್ಲದ ಬಾಳು ಕಂಠ ಕಟ್ಟಿದ ಕೋಗಿಲೆಯಂತೆ
ವಿದ್ಯೆ ಇಲ್ಲದ ಬಾಳು ಸುಟ್ಟ ಬೂದಿಯಂತೆ

ಕಾವ್ಯಶ್ರೀ ಪಿ.
ತೃತೀಯ ಬಿ.ಕಾಂ.

## ನಮ್ಮ ಕಾಲೇಜು

ಡಿಗ್ರಿ ಓದುವುದಕ್ಕೆ ಬಂದೆ ಕೊಳ್ಳೇಗಾಲ ನಗರಕ್ಕೆ
ಏನೋ ಹೊಸ ಪರಿಸರದ ಪರಿಚಯವಾಯ್ತು ಮನಕೆ
ಉತ್ತಮ ಕಾಲೇಜು ಸೇರಬೇಕೆಂದು ಆಗಿತ್ತು ಬಯಕೆ
ನನ್ನ ಓದಿಗೆ ಅಪ್ಪ, ಅಮ್ಮ ಕಟ್ಟಿದ್ರೂ ನೂರಾರು ಹರಕೆ

ಸಿಕ್ಕಿತು ಸೀಟು ನನಗೆ ಜೆಎಸ್ಎಸ್ ಕಾಲೇಜಿನಲ್ಲಿ
ಸಿಕ್ಕಿದಾಗ ತೇಲಾಡಿದೆ ಹರ್ಷದ ಕಡಲಿನಲ್ಲಿ
ಸೇರಿಕೊಂಡೆ ಆ ಭವ್ಯವಾದ ತಾಣದಲ್ಲಿ
ಸಿಹಿಜೇನು ತಿಂದಂತಾಯ್ತು ಮನಸ್ಸಿನಲ್ಲಿ

ಕಾಲೇಜು ಸುತ್ತಲೂ ಹಸಿರು ತುಂಬಿದ ಮರಗಳು
ಅವುಗಳಲ್ಲಿ ನೂರಾರು ಬಗೆಯ ಹೂಗಳು
ಮನೆ ಹರ್ಷ ನೀಡುತ್ತಿದ್ದವು ಅವುಗಳು
ಜ್ಞಾನ ಸಂಪತ್ತ ಧಾರೆ ಎರೆಯುತ್ತಿರುವ ಗುರುಗಳು

ನಮ್ಮ ಕಾಲೇಜು ಮಹಾ ಸರಸ್ವತಿಯ ವಿದ್ಯಾಪೀಠವಾಗಿ
ಕೊಳ್ಳೇಗಾಲದ ಕೀರ್ತಿ ಪೀಠವಾಗಿ
ಓದುಗರ ಕೀರ್ತಿಗಾಗಿ
ಬೆಳೆಯಲಿ, ಚಿರವಾಗಲಿ ನಮ್ಮ ಕಾಲೇಜು

ಸಾವಿರಾರು ವಿದ್ಯಾರ್ಥಿಗಳು ಓದಿದ ಕಾಲೇಜಿದು
ಒಳ್ಳೆಯವರಿಗೆ ಕೈ ಬೀಸಿ ಕರೆಯುವ ತಾಣವಿದು
ಸುಜ್ಞಾನ ಸಂಪನ್ನರಾಗಿ ಮಾಡುವ ಸ್ಥಾನವಿದು
ಅತ್ಯುತ್ತಮ ವಿದ್ಯಾರ್ಥಿಗಳಾಗಿ ಮಾಡಿ ಹಾರೈಸಿ ಕಳಿಸುವುದು
ಈ ನಮ್ಮ ಜೆಎಸ್ಎಸ್ ಕಾಲೇಜು

## ರೈಲು

ಜೀವನ ಎಂಬ ರೈಲಿನಲ್ಲಿ
ಭೂಮಿ ಎಂಬ ಹಳಿಗಳ ಮೇಲೆ
ಸಾವು ಯಾವಾಗ ಬೇಕಾದರೂ ಬರಬಹುದು
ಅಲ್ಲಿಯವರೆಗೂ
ವೃತ್ತಿ ಎಂಬ ವಿವಿಧ ಭೋಗಿಗಳಲ್ಲಿ
ವಿವಿಧ ಜನರೊಂದಿಗೆ ಜಾಗೃತರಾಗಿರಬೇಕು

## ಕಲಿಯ ಬನ್ನಿ

ಬುದ್ಧಿವಂತರಿಗೆ ಮಾತ್ರ ಇಲ್ಲಿ Eligibility
ಎಲ್ಲರಿಗೂ ಇದೆ ಇಲ್ಲಿ Facility
ಕಲಿಯಬೇಕು ನಾವೆಲ್ಲಾ Morality
ನಮ್ಮಲ್ಲಿ ಇರಬೇಕು Unity
ಅದರಿಂದ ಬೆಳೆಸಬಹುದು Integrity
ಇರಬೇಕು ಎಲ್ಲರಿಗೂ Humanity
ಮೈಗೂಡಿಸಿಕೊಳ್ಳಲೇಬೇಕು University
ಇಲ್ಲಿರುವ ಗುರುಗಳಿಗೆ ಇದೆ Spirtiuality
ಅದನ್ನು ಪಡೆಯುವುದೇ ನಮ್ಮ Capacity
ನಮ್ಮಲ್ಲಿ ತುಂಬಿ ತುಳುಕುತ್ತಿದೆ Diversity
ನಮ್ಮಲ್ಲಿರಬೇಕು ಮಾನವೀಯ ಮೌಲ್ಯಗಳು Quantity

## ಸ್ನೇಹ

ಸ್ನೇಹ ತುಂಬಿದ ಭಾರತದಲ್ಲಿ
ಕನಸು ತುಂಬಿದ ಕರ್ನಾಟಕದಲ್ಲಿ
ಬದುಕು ತುಂಬಿದ ನಮ್ಮೂರಿನಲ್ಲಿ
ಪ್ರೀತಿ ತುಂಬಿದ ಹೃದಯದಲ್ಲಿ
ಈ ನಮ್ಮ ಸ್ನೇಹ ನೆನಪಿರಲಿ

ಸ್ನೇಹ ಅನ್ನೋದು ಕಣ್ಣು ಮತ್ತು
ಕೈಗಳ ನಡುವಿನ ಸಂಬಂಧದಂತೆ
ಕೈಗೆ ನೋವಾದಾಗ ಕಂಬನಿ ಮಿಡಿಯುತ್ತದೆ
ಹಾಗೆ ಕಣ್ಣು ನೀರು ತುಂಬಿದಾಗ ಕೈ ಬೆರಳು ಒರೆಸುತ್ತದೆ

ಅಂಜು ಎಸ್
ಪ್ರಥಮ ಬಿ.ಎ. [ಹೆಚ್.ಇ.ಜಿ.]

## ತಾಯೇ ದೇವರು

ಸಾವೆಂಬ ಯುದ್ಧದಲ್ಲಿ ಹೋರಾಡಿ
ಒಡಲೆಂಬ ಕರುಳ ಬಳ್ಳಿಯಿಂದ
ಜನ್ಮ ನೀಡಿದ ತಾಯೇ
ಎದೆ ಹಾಲನ್ನು ಉಣಿಸಿ
ತೋಳ ಬಂದಿಯಿಂದ ಎತ್ತಾಡಿಸಿ
ನಿನ್ನ ಮಡಿಲಲ್ಲಿ ಸಂತೈಸಿ
ಮಮತೆಯ ಒಲವನ್ನು ನೀಡಿದ – ತಾಯೇ
ನೀನೆ ನನ್ನ ನಿಜವಾದ ದೇವರು

## ಮುಂಜಾನೆಯ ಸೊಬಗು

ಅಂಜು ಎಸ್
ಪ್ರಥಮ ಬಿ.ಎ. [ಹೆಚ್.ಇ.ಜಿ.]

ಮೂಡಣದಿ ಉದಯಿಸಿದ ರವಿಯು
ಅದೆಷ್ಟು ಸುಂದರ
ಇಬ್ಬನಿಯ ಹಾಸಿಗೆಯಲಿ ಅರಳಿದ
ಪುಷ್ಪದ ಘಮವು ಅತಿ ಮಧುರ
ಮುಂಜಾನೆ ಮಂಜಿನಲಿ ಪಕ್ಷಿಗಳ
ಇಂಚರವು ಕಿವಿಗಳಿಗೆ ಇಂಪು
ಸೊಗಸಾದ ತಂಗಾಳಿಯ ಬೆಚ್ಚನೆಯ
ಅನುಭವವು ಮನಸ್ಸಿಗೆ ಇಂಪು

ಹರಡುತಿವೆ ಎಲ್ಲೆಡೆ ಪ್ರಜ್ವಲಿಸುವ
ಬೆಳಕಿನ ಕಿರಣಗಳು
ಸಿದ್ಧವಾಗುತ್ತಿವೆ ತಮ್ಮ ಕೆಲಸಗಳಿಗೆ
ಎಲ್ಲ ಜೀವಗಳು
ಉತ್ತರದಿ ಹರಿಯುವ ನದಿಗಳ
ಜುಳು ಜುಳು ನಾದ
ಕೋಗಿಲೆಯ ಕಂಠದ ಸಂಗೀತ
ಗಾನಗಳ ಸುಮಧುರ ನಿನಾದ

ಹಿಮಾಲಯದ ಶಿಖರಗಳಲಿ ತಂಪಾದ
ಮಂಜಿನ ಸಿಂಗಾರ
ನೋಡುಗರ ಕಣ್ಣಿಗೆ ಮನ ಸೆಳೆಯುವ
ಅಚ್ಚರಿಯ ಬಂಗಾರ
ನೀಲಿಯ ಬಾನಲಿ ಹಾದು ಹೋಗುವ
ಶ್ವೇತ ಮೋಡದ ಪ್ರತಿಭೆ
ಸೃಷ್ಟಿಯ ನಿಯಮಕ್ಕೆ ಜಗತ್ತಿನ ವಿಸ್ಮಯಕ್ಕೆ
ಅದೇ ಶೋಭೆ

ಮತ್ತೆ ಕವಿಯುತಿದೆ ಮೈ
ನಡುಗಿಸುವ ಕರಾಳ ಕತ್ತಲು
ಸಾಗುತಲಿದೆ ನಿಗೂಢ ಜೀವಗಳ
ಅನ್ವೇಷಣೆಯ ಸುತ್ತಲು
ಮುದ ನೀಡುವ ನಿಸರ್ಗದ
ರಮಣೀಯ ದೃಶ್ಯಗಳ ನೋಟಗಳು
ಆಹ್ಲಾದಕರ ಎನಿಸುವುದು ಬಾಳ
ಬಂಡಿಯ ಪಯಣಗಳು

## ವಿವೇಕ ವಾಣಿ

ಮೇಘ ಬಿ
ತೃತೀಯ ಬಿ.ಕಾಂ.

ಸ್ವೀಕರಿಸುವ ಮನಸ್ಸಿದ್ದರೆ ಸದ್ಗುಣಗಳನ್ನು ಸ್ವೀಕರಿಸು
ಈಜುವ ಮನಸ್ಸಿದ್ದರೆ ಜ್ಞಾನ ಸಾಗರದಲ್ಲಿ ಈಜು
ನಡೆಯುವ ಮನಸ್ಸಿದ್ದರೆ ಸನ್ಮಾರ್ಗದಲ್ಲಿ ನಡೆ
ಮಾತಾಡುವುದಿದ್ದರೆ ಸತ್ಯವನ್ನೇ ಮಾತಾಡು
ಹಾಡುವುದಿದ್ದರೆ ಅನುಭವದ ಮಾತುಗಳನ್ನು ಹಾಡು
ಕೇಳುವುದಿದ್ದರೆ ಸದುಪದೇಶಗಳನ್ನು ಕೇಳು
ದೊರಕಿಸುವುದಿದ್ದರೆ ಜಯವನ್ನೇ ದೊರಕಿಸು
ನುಂಗುವ ಇಚ್ಛೆ ಇದ್ದಲ್ಲಿ ಸಿಟ್ಟನ್ನೆ ನುಂಗು
ತ್ಯಜಿಸುವುದಿದ್ದಲ್ಲಿ ದುರ್ಗುಣಗಳನ್ನೇ ತ್ಯಜಿಸು
– ಸ್ವಾಮಿ ವಿವೇಕಾನಂದ

## ಪ್ರೇಮ ಪತ್ರ

ನಾನು ಬರೆದ ಪ್ರೇಮ ಪತ್ರ
ಹೋಗಿ ತಲುಪಿತು ಪ್ರಿನ್ಸಿಪಾಲರ ಹತ್ರ
ಕೈಗೆ ಬಂದಿತು ವರ್ಗಾವಣೆ ಪತ್ರ
ಹೊಡೆತಾ ಬಿದ್ದಿತು ನಮ್ಮಪ್ಪನ ಹತ್ರ

## ಪರೀಕ್ಷೆ

ಪರೀಕ್ಷೆಯೆಂದರೆ ಬಲು ಇಷ್ಟ
ಗೊತ್ತಿಲ್ಲದಿದ್ದರೆ ಬಲು ಕಷ್ಟ
ಪ್ರಶ್ನೆ ಉತ್ತರವೆಲ್ಲ ಅಸ್ಪಷ್ಟ
ಇಂಕು ಪೇಪರುಗಳು ನಷ್ಟ
ಅಂಕಗಳು ಬಂದವು ಅತಿ ಕನಿಷ್ಟ
ಬೈಗುಳ ಬಿದ್ದವು ಅನಿಷ್ಟ

## ನುಡಿಮುತ್ತು

ಅರಿವಿಲ್ಲದೇ ಓದಬೇಡ
ಶೃತಿಯಿಲ್ಲದೇ ಹಾಡಬೇಡ
ಅಂದವಿಲ್ಲದೇ ಬರೆಯಬೇಡ
ನಯವಿಲ್ಲದೇ ನಡೆಯಬೇಡ
ಸ್ನೇಹವಿಲ್ಲದೇ ಜೀವಿಸಬೇಡ

## ಏನಿದ್ದರೇನಂತೆ

ಪಿ.ಕೆ. ಪಂಕಜಾಂಬಿಕ
ಪ್ರಥಮ ಬಿ.ಎ. [ಹೆಚ್.ಇ.ಕೆ.]

ಹಾಸಿಗೆ ಕೊಳ್ಳಬಹುದು – ನಿದ್ರೆಕೊಳ್ಳಲಾಗದು
ಮನೆ ಕೊಳ್ಳಬಹುದು – ನೆಮ್ಮದಿ ಕೊಳ್ಳಲಾಗದು
ಪುಸ್ತಕ ಕೊಳ್ಳಬಹುದು – ವಿದ್ಯೆ ಕೊಳ್ಳಲಾಗದು
ವಿದ್ಯೆ ಇದ್ದರೇನಂತೆ – ವಿವೇಕ ಇಲ್ಲದಿದ್ದರೆ
ಹಣ ಇದ್ದರೇನಂತೆ – ಗುಣ ಇಲ್ಲದಿದ್ದರೆ
ಪ್ರಾಣ ಇದ್ದರೇನಂತೆ – ತ್ರಾಣ ಇಲ್ಲದಿದ್ದರೆ
ಗುರು ಇದ್ದರೇನಂತೆ – ಅರಿವು ಇಲ್ಲದಿದ್ದರೆ
ರೂಪ ಇದ್ದರೇನಂತೆ – ಮಾನ ಇಲ್ಲದಿದ್ದರೆ
ಸುಖ ಇದ್ದರೇನಂತೆ – ಶಾಂತಿ ಇಲ್ಲದಿದ್ದರೆ
ಏನಿದ್ದರೇನಂತೆ – ಮಾನವೀಯತೆ ಇಲ್ಲದಿದ್ದರೆ

## ಆದರ್ಶ ಗುರು

ಮೇಘ ಬಿ
ತೃತೀಯ ಬಿ.ಕಾಂ.




ಗುರುವೆಂದರೆ ಹೀಗಿರಬೇಕು
ತಾಯಿಯ ಪ್ರೀತಿ
ತುಂಬಿರಬೇಕು
ತಂದೆಯ ಸ್ಥಾನ
ತುಂಬಿರಬೇಕು
ಗೆಳೆಯನ ಸ್ನೇಹ
ಹೊಂದಿರಬೇಕು
ಮುಖದಲ್ಲಿ ನಗುವಿನ
ನೆಲೆಯಿರಬೇಕು
ನೀತಿಯ ಬೋದನೆ ಮಾಡಲೇಬೇಕು
ಗುರುವೆಂದರೆ ಹೀಗಿರಬೇಕು

---

ದೀಪಾ ಜಿ.
ತೃತೀಯಾ ಬಿ.ಎ. [ಹೆಚ್.ಇ.ಪಿ.]

ಗುಂಡ :– ಹಲೋ ದೇವರೇ ಹೇಗಿದ್ದಿಯಾ
ದೇವರು :– ಆರಾಮಾಗಿದ್ದೀನಿ ಏನ್ ವಿಷಯ
ಗುಂಡ :– ನಮ್ಮ ಏರಿಯಾದಲ್ಲಿ function ಇಟ್ಕೊಂಡಿದ್ದೀವಿ ರಂಬೆ, ಊರ್ವಶಿ, ಮೇನಕೆನಾ ಕಳುಹಿಸು
ದೇವರು :– ಹಾಗೆಲ್ಲ ಕಳಿಸೊಕ್ಕಾಗಲ್ಲ ಮಗು
ಗುಂಡ :– ಯಾಕಾಗಲ್ಲ ನಾವು ಸಿಲ್ಕ್‌ಸ್ಮಿತ, ಡಿಸ್ಕೋಶಾಂತಿ, ಸೌಂದರ್ಯ ಇವರನೆಲ್ಲ ಕಳಿಸಿಲ್ವ
ದೇವರು :– ಮಗು ನಮ್ಮಲ್ಲಿ incoming ಮಾತ್ರ outgoing ಇಲ್ಲ



ಮದುವೆ – ಜೀವನದ ಜೈಲು
ಡಾಕ್ಟರ್ – ಯಮಧರ್ಮರಾಯನ ಏಜೆಂಟ್
ಅಪ್ಪ – ನಮ್ಮ ಸ್ವಂತ ಬ್ಯಾಂಕ್
ಫಾಲಿಡಾಲ್ – ಬೇಜಾರಾದಾಗ ಸಂತೋಷಕ್ಕೆ ತೆಗೆದುಕೊಳ್ಳುವ ಔಷಧಿ
ಖಾಯಿಲೆ – ದೇಹವು ಆತ್ಮಕ್ಕೆ ಕಟ್ಟುವ ಕಂದಾಯ
ನರಕ – ಇಬ್ಬರು ಹೆಂಡತಿಯರು ಇರುವ ಮನೆ
ಪೂಜಾರಿ – ದೇವರನ್ನು ಕತ್ತಲಲ್ಲಿಟ್ಟು ದುಡ್ಡು ಮಾಡುವ ಅಧಿಕಾರಿ
ಬೆಂಕಿ – ಮಾನವ ಕುಲ ದಹಿಸಲು ಹೆದರುವ ಹೇಡಿ
ಸೀಮೆ ಸುಣ್ಣ – ಶಿಕ್ಷಕ/ಶಿಕ್ಷಕಿಗೆ ನಾಮ ಹಾಕುವ ಪೌಡರ್
ಪೆನ್ನು – ಪತ್ರಕರ್ತನ ದೊಡ್ಡ ಆಭರಣ

## ತಾಯಿ

ಶ್ವೇತ ಎಸ್, ದ್ವಿತೀಯ ಬಿ.ಎ. [ಹೆಚ್.ಇ.ಪಿ.]

ಮಮತೆಯ ರೂಪವಾಗಿ
ಮಗುವಿನ ಅರಿವಾಗಿ
ವಾತ್ಸಲ್ಯದ ಕಣ್ಣಾಗಿ
ಕರುಣೆಯ ಸಿರಿಯಾಗಿ
ಲೋಕದ ಹಿತಕ್ಕಾಗಿ
ಸದಾ ಸ್ಮರಿಸುವವಳು ತಾಯಿ

## ನೆನಪಿರಲಿ

ನಿಮ್ಮ ಹಾರ್ಟ್‌ನಲ್ಲಿ ಯಾರೋ ಇರಬಹುದು
ನಿಮ್ಮ ಕನಸಿನಲ್ಲಿ ಯಾರೊ ಬರಬಹುದು
ನಿಮ್ಮ ಜೀವನದಲ್ಲಿ ಯಾರೊ ಜೊತೆಯಾಗಬಹುದು
ಆದರೆ ನಿಮ್ಮ ನೆನಪಿನಲ್ಲಿ ಯಾರು ಇಲ್ಲದೆ ಇದ್ದಾಗ
ಈ ಗೆಳತಿಯಾ ನೆನಪಿರಲಿ

## ಜೀವನ

ಜೀವನವೆಂಬುದು ಪ್ರಶಾಂತಸಾಗರ
ಸ್ನೇಹವೆಂಬುದು ಆದರ ಮಂದಿರ
ನಂಬಿಕೆಯೆ ಅದಕ್ಕೆ ಆಧಾರ
ತಿಳಿದರೆ ಜೀವನ ಆಗುವುದು ಸುಂದರ

## ಓದು

ರವಿ ಇಲ್ಲದ ಬಾನು
ಸವಿ ಇಲ್ಲದ ಜೇನು
ನೀ ಇಲ್ಲದ ನಾನು
ಪ್ರಯೋಜನವೇನು

## ಸ್ನೇಹ–ಪ್ರೀತಿ

ಸ್ನೇಹ ಮಾತನಾಡಿಸುತ್ತೆ
ಪ್ರೀತಿ ಸುಮ್ಮನಿರುಸುತ್ತೆ
ಸ್ನೇಹ ನಗಿಸುತ್ತೆ ಪ್ರೀತಿ ಅಳಿಸುತ್ತೆ ಸ್ನೇಹ
ಕೂಡಿಸುತ್ತೆ ಪ್ರೀತಿ ದೂರ ಮಾಡುತ್ತೆ
ಇಷ್ಟಾದ್ರು ಜನಯಾಕೆ
"ಸ್ನೇಹ ಬಿಟ್ಟು ಪ್ರೀತಿ ಬೇಕು ಅಂತಾರೆ"

## ಪ್ರೀತಿ

ಕೆ. ಸುಕನ್ಯ
ಪ್ರಥಮ ಬಿ.ಕಾಂ.

ನೀನು ಕಂಡ ಕನಸುಗಳು
ಬಣ್ಣ ಬಣ್ಣದ ಆಸೆಗಳಾಗಬಾರದು
ಮನಸ್ಸಿನಿಂದ ಹುಟ್ಟಿದ ಭಾವನೆಗಳು
ಅನುಮಾನದಿಂದ ಕೂಡಿರಬಾರದು
ನಿನ್ನನ್ನು ಪ್ರೀತಿಸಿದ ಹೃದಯವಿದು
ಬೇರೆ ಯಾರನ್ನು ಪ್ರೀತಿಸಲಾರದು
ನೆನಪಿರಲಿ ಇದು ಮನಸ್ಸಿನ
ಭಾವನೆಗಳ ಪಿಸುಮಾತು"

"ಕರುಣೆ ತುಂಬಿದ ಕರುನಾಡಿನಂತೆ
ಮಮತೆ ತುಂಬಿದ ಜನ್ಮದಾತೆಯಂತೆ
ಅಕ್ಕರೆಯ ಸವಿನುಡಿಯ ಸ್ನೇಹದ ಕಡಲಂತೆ
ಪ್ರೀತಿಯಲಿ ಮನಸ್ಸೆಳೆದ ಸಾಗರದ
ಮುತ್ತಿನಂತೆ
ಇದು ಸ್ನೇಹನಾ... ಪ್ರೀತಿನಾ...."

"ಆಕಾಶದ ಮೇಲಿರುವ ನಕ್ಷತ್ರ ನೀನು
ಪ್ರೀತಿಸಿದೆ ಕೈ ಸೇರುವೆ ಎಂದು,
ನಾ ಭೂಮಿಯ ಮೇಲಿರುವ ಕಲ್ಲುಬಂಡೆ
ಗೊತ್ತಿದ್ದರೂ ನನ್ನ ಹೃದಯ ಕದ್ದೆ ನೀನು
ಪ್ರೀತಿಸಿದರೆ ಸುಂದರ ಶಿಲೆಯಾಗುವೆ
ದ್ವೇಷಿಸಿದರೆ ಕಲ್ಲು ಬಂಡೆಯಾಗೆ ಇರುವೆ
ಹೇಗೆ ತಿಳಿಸಲಿ ನಿನಗೆ ನನ್ನ ಮನಸ್ಸಿನ
ಭಾವನೆಗಳ ಪಿಸುಮಾತನ್ನಾ"

"ಹೂವಿನ ತೋಟದಲ್ಲಿ ಸಾವಿರ ಹೂಗಳಿದ್ದು
ಇಷ್ಟ ಆಗೋದು ಗುಲಾಬಿನೇ,
ಹಾಗೇ ಈ ಕಣ್ಣಿನ ಮುಂದೆ
ನೂರು ಜನ ಇದ್ರೂ
ಈ ಮನಸ್ಸಿಗೆ ಇಷ್ಟವಾಗುವುದು
ನೀವೇನೆ"...

## ಅಮ್ಮ

ಕೆ. ಸುಕನ್ಯ, ಪ್ರಥಮ ಬಿ.ಕಾಂ.

"ಕಂಬನಿ ಇಲ್ಲದ ಕಂಗಳಲ್ಲಿ
ಪ್ರೀತಿಸದ ಹೃದಯವಿಲ್ಲ
ಸ್ವಾರ್ಥ ಇಲ್ಲದ ಬಂಧುಗಳಲ್ಲಿ
ಅಮ್ಮ ನಿನಗಿಂತ ಮಿಗಿಲಾದ
ದೇವರಿಲ್ಲ"

## ಸ್ನೇಹ

"ಪ್ರೀತಿ ಮಾಡಿ ಆದರೆ
ಪ್ರೀತಿ ಮಾಡುವ ಫ್ರೆಂಡ್ಸ್‌ಗೆ ನೋವ
ಮಾಡಬೇಡಿ,
ಫ್ರೆಂಡ್ಸ್‌ಗಾಗಿ ಎಲ್ಲಾ ಸಂತೋಷವನ್ನು
ತ್ಯಾಗ ಮಾಡಿ ಆದರೆ
ಆ ಸಂತೋಷಕ್ಕಾಗಿ ಫ್ರೆಂಡ್ಸ್‌ನಾ ತ್ಯಾಗ
ಮಾಡಬೇಡಿ"

"ಹಾರುವ ಹಕ್ಕಿ ನೀರಲ್ಲಿ
ಈಜಲಾರದು ಹಾಗೆ,
ಈಜುವ ಮೀನು ಯಾವತ್ತು
ಹಾರಲಾಗದು ಅದೇ ರೀತಿ
ಮಾಡಿದ ಸ್ನೇಹ ದೂರ ಆಗಬಹುದು
ಆದ್ರೆ,
ಸ್ನೇಹದ ನೆನಪು ದೂರ ಆಗಲ್ಲ"

"ಪ್ರೀತಿ ಇರಬೇಕು ಬಾನು ಭೂಮಿಯಂತೆ
ಪ್ರೇಮ ಇರಬೇಕು ಸೂರ್ಯ ಚಂದ್ರರಂತೆ
ಸ್ನೇಹ ಇರಬೇಕು ಮಳೆ ಮೋಡದಂತೆ
ನೀವು ನಗು-ನಗುತ ಇರಬೇಕು
ಅರಳುವ ಹೂವಿನಂತೆ"

## ನೆನಪು

"ಬಾಳು ಎಂಬ ಕನ್ನಡಿಯಲಿ
ನಿನ್ನ ಮುಖ ನಗುತಿರಲಿ
ಆ ನಗೆಯ ಸುಳಿಯಲಿ
ನನ್ನ ಸವಿ ನೆನಪಿರಲಿ"

## ನಕ್ಷತ್ರ-ಮಿತ್ರ

ಶಾಂಭವಿ ಎನ್, ಪ್ರಥಮ ಎಂ.ಕಾಂ.

ಆಕಾಶದಲ್ಲಿ ನಕ್ಷತ್ರ
ಕಾಣುವುದು ಚಿತ್ರವಿಚಿತ್ರ
ಅವು ಬಳಿಬರುವಂತೆ ನಾ ಕಳಿಸುವೆ ಪತ್ರ
ಅವು ಬಂದರೆ ನನ್ನ ಹತ್ರ
ಮಾಡಿಕೊಳ್ಳುವೆ ನನ್ನ ಮಿತ್ರ

## ಅಮ್ಮ ಎಂದರೆ ಪ್ರೀತಿ ಕನ್ನಡ

ಕನ್ನಡ ಎಂಬುವುದು ಕನ್ನಡಿಗರ ಮೊದಲ ನುಡಿ
ಅಮ್ಮ ಎಂಬುದು ಕಂದನ ತೊದಲು ನುಡಿ
ಕನ್ನಡ ಎಂಬುವುದು ಕರ್ನಾಟಕದ ಗಂಧದ ನುಡಿ

## ವಿವೇಕಾನಂದ

ಓ ವಿವೇಕಾನಂದ
ಅಂದಾಗ ಮನಕಾಯಿತು ಆನಂದ
ಅಂದು ನೀ ಅಮೇರಿಕಾದ ಚಿಕಾಗೊದಲ್ಲಿಂದ
My Brothers and My Sisters ಮಾತೆಂದ
ಕೇಳಿದ ಅಮೇರಿಕಾದ ಜನರಿಂದ
ನೀ ಗಳಿಸಿದ ಭ್ರಾತೃ ಸಂಬಂಧ
ಅದ ಕೇಳಿದ ನಮಗಾಯಿತು ಆನಂದ
'ಸಿಸ್ಟರ್ ನಿವೇದಿತಾಳಿಂದ ಪ್ರೇರೇಪಣೆಯ ಮೋಹ
ಸಂಬಂಧಕ್ಕೆ
ಹೇಳಿ ನೀ ಪಡೆದೆ ಮಗನ ಸಂಬಂಧ
ಅದರಿಂದ ನೀನಾದೆ ಶುದ್ಧ ಬೈರಾಗಿ, ತಂದೆ
ಮನಕಾನಂದ
ಓ ಗುರು ವಿವೇಕಾನಂದ ನೀ ಬಲು ಚೆಂದ

## ತಾಯಿ

ತಾಯಿಗೆ ಸಮನಾದವರು ಯಾರೂ ಇಲ್ಲ
ಯಾಕೆ ಗೊತ್ತಾ?
ಪ್ರಪಂಚವನ್ನು ಕಾಯೋ ಆ ನನ್ನ
ಶಿವ ಪರಮಾತ್ಮನಿಗೂ ಜನ್ಮ ನೀಡಿರುವುದು
ಒಬ್ಬ ಮಹಾತಾಯಿ ಅಲ್ಲವೆ

## ನಗೆಹನಿಗಳು

ಟೀಚರ್ : ಒಂದು ಕವನ ಹೇಳು...
ವಿದ್ಯಾರ್ಥಿ : ನಾ ಪ್ರೀತಿಸಿದ ಹುಡುಗಿ ಹೆಸರು ಆಶಾ...!
ಅವಳಿಂದ ನನ್ನ ಲೈಫು ನಾಶ....!
ಅವಳನ್ನು ನಂಬಿದಕ್ಕೆ ನನಗೆ ಕೊಟ್ಟಳು ವಿಷ....!
ಆದರೂ ನಾ ಬದುಕಿರಲು ಕಾರಣ ಅವಳ ತಂಗಿ ಉಷಾ!
ಟೀಚರ್ : ಆಶಾ, ಉಷಾ, ಯಾರೋ...?
ವಿದ್ಯಾರ್ಥಿ : ನಿಮ್ಮ ಮಕ್ಕಳು, ಟೀಚರ್



ಪೋಲಿಸ್ : ನಿಮ್ಮ ಸ್ನೇಹಿತ ಹೇಗೆ ತೀರಿಕೊಂಡರು?
ಸರದಾರ್ : ಹೇಗಂತ ಗೊತ್ತಿಲ್ಲ, ಅವನ ಹೊಟ್ಟೆಯಲ್ಲಿ ಇಲಿ ಓಡಾಡಿದ ಹಾಗೆ ಆಗುತ್ತಿದೆ ಅಂದ ಅದಕ್ಕೆ ನಾನು ಇಲಿ ಪಾಶಾಣ ಕೊಟ್ಟೆ ಅಷ್ಟೇ.

ಟೀಚರ್ : ಲೋ ಗುಂಡ ನಿನ್ನಂತ ಪೋಲಿಗೆ 'ಸರಸ್ವತಿ' ಒಲಿಯುವುದಿಲ್ಲ ಕಣೋ
ಗುಂಡ : ಅದಕ್ಕೆ ಟೀಚರ್ ನಾನು ಕೊನೆಯ ಬೆಂಚ್ ಲಕ್ಷ್ಮೀ ನಾ ಒಲಿಸೋಕೆ ಟ್ರೈ ಮಾಡುತ್ತಿದ್ದೀನಿ.

ಟೀಚರ್ : ಮಕ್ಕಳೇ ಆನೆ ದೊಡ್ಡದಾ, ಇಲ್ಲ ಸಿಂಹ ದೊಡ್ಡದಾ?
ಗುಂಡ : ಸುಮ್ಮ-ಸುಮ್ಮನೆ ಉತ್ತರ ಹೇಳೋಕೆ ಆಗೋಲ್ಲ ಟೀಚರ್ ಅದಕ್ಕೆ ಹುಟ್ಟಿದ ದಿನಾಂಕ ಬೇಕು

### ನಗೆ ಹನಿ

ಶಿವರಂಜಿನಿ ಎಂ.
ಪ್ರಥಮ ಬಿ.ಕಾಂ.

**ಅಮೇರಿಕ : ಓ ದೇವರೇ ನನಗೆ ರೂಮ್ ತುಂಬಾ ಚಿನ್ನ ಕೊಡು**
**ಜಪಾನ್ : ಓ ದೇವರೇ ನನಗೆ ರೂಮ್ ತುಂಬಾ ವಜ್ರ ಕೊಡು**
**ಭಾರತ : ಓ ದೇವರೇ ನನಗೆ ಅವರಿಬ್ಬರ ರೂಮ್ ಬೀಗ ಕೊಡು**

ಶ್ವೇತ ಎಸ್
ದ್ವಿತೀಯ ಬಿ.ಎ. [ಹೆಚ್.ಇ.ಪಿ.]

### ನೀನಾಗು

ಉರಿಯುವ ದೀಪದಲ್ಲಿ ಬೆಳಕಾಗು ನೀ
ಹರಿಯುವ ನೀರಲ್ಲಿ ಮೀನಾಗು ನೀ
ಬರೆಯುವ ಲೇಖನಿಯಲ್ಲಿ ಶಾಹಿಯಾಗು ನೀ
ಮಿನುಗುವ ತಾರೆಗಳ ಮಧ್ಯೆ ಚಂದ್ರನಾಗು ನೀ
ಎಂದೆಂದೂ ಸುಖವಾಗಿರು ನೀ

# ಜೀವನದಲ್ಲಿ ಸ್ನೇಹದ ಮಹತ್ವ



ಶ್ವೇತ ಎಸ್
ದ್ವಿತೀಯ ಬಿ.ಎ. [ಹೆಚ್.ಇ.ಪಿ.]

ಸ್ನೇಹ ಪ್ರತಿಯೊಬ್ಬರ ಜೀವನದಲ್ಲಿ ಪ್ರಮುಖ ವಿಷಯ ಪ್ರೀತಿ. ಪ್ರೇಮ, ಮಮತೆ, ವಾತ್ಸಲ್ಯ ಇವುಗಳೆಲ್ಲಕ್ಕಿಂತ ಮಹತ್ವದ ಸ್ಥಾನದಲ್ಲಿ ಸ್ನೇಹ ಕುಳಿತಿದೆ. ಪ್ರತಿಯೊಬ್ಬರಿಗೂ ಸ್ನೇಹಿತರಿರುತ್ತಾರೆ. ಸ್ನೇಹಿತರಿಲ್ಲದ ವ್ಯಕ್ತಿಯೇ ಇಲ್ಲ. ಸ್ನೇಹವು ಸನ್ನಿಹಿತವೂ ಹೌದು ಬೇರೆ ಯಾವುದೇ ರೂಪದಲ್ಲಿ ಬೇಕಾದರೂ ಇರಬಹುದು ಸ್ನೇಹಕ್ಕೆ ಕೊನೆ ಇಲ್ಲ. ಅದು ನಿರಂತರವಾಗಿರುತ್ತದೆ. ಬಹುಶಃ ಪ್ರೀತಿ ಪ್ರೀತಿಸಿದ ಗೆಳೆಯ-ಗೆಳತಿ ವಸ್ತುಗಳು ದೂರ ಆಗಬಹುದು. ದೂರವಾಗಿ ನಮ್ಮನ್ನು ಮರೆಯಬಹುದು ಆದರೆ ಸ್ನೇಹಿತೆಯಾದವರು ವೈರಿ ಆಗಿರಲಿ ಅವನಲ್ಲಿ ಸ್ನೇಹಿತನ ಪ್ರೀತಿ ಚಿರಸ್ಮರಣಿಯ ವಾಗಿರುತ್ತವೆ. ಇದಕ್ಕೆ ಅತ್ಯುತ್ತಮ ಆದರೆ ಸ್ನೇಹಿತೆಯಾದವಳು ವೈರಿಯೇ ಆಗಿರಲಿ ಅವನಲ್ಲಿ ಸ್ನೇಹವನ್ನು ಪಡೆಯಲು ಇಚ್ಛಿಸುತ್ತೇವೆ. ಉದಾಹರಣೆ ಮಹಾಭಾರತದಲ್ಲಿ ಬರುವ ದುರ್ಯೋಧನ ಮತ್ತು ಕರ್ಣನ ಸಂಬಂಧ ಕರ್ಣನಿಗೆ ದುರ್ಯೋಧ ನನು ತನ್ನ ವೈರಿಯೆಂದು ತಿಳಿದ ಮೇಲು ತನ್ನ ತಮ್ಮಂದಿರ ಮೇಲೆ ಯುದ್ಧ ಕೈಗೊಳ್ಳಲು ಸಿದ್ಧನಾಗು ತ್ತಾನೆ. ಜೀವನದಲ್ಲಿ ಇದೇ ಅಲ್ಲವೆ ಸ್ನೇಹದ ಮಹತ್ವ ಜೀವನ ದಲ್ಲಿ ಸ್ನೇಹವು ಬಹು ಮುಖ್ಯ ಪಾತ್ರ ವಹಿಸುತ್ತದೆ. ಸ್ನೇಹಿತರು ಇಲ್ಲದ ಜೀವನ ಇಲ್ಲ. ಸ್ನೇಹಿತರು ಇಲ್ಲದ ವ್ಯಕ್ತಿಯಿಲ್ಲ. ಆದ್ದರಿಂದ ಜೀವನವು ಜೀವನದ ಒಂದು ಭಾಗವಾಗಿದೆ.

# ಸ್ಮೈಲ್ ಫಾರ್ವರ್ಡ್

ಅನುಶ್ರೀ ಎಸ್
ತೃತೀಯ ಬಿ.ಕಾಂ



1] ವಿನುತಾ : 'ನಿನ್ನ ಕೂದಲು ಇಷ್ಟೊಂದು ಉದ್ದವಾಗಿ ದಟ್ಟವಾಗಿದೆಲ್ಲಾ, ಹೇಗೆ?'
ಅನಿತಾ : 'ಬೆಳಿಗ್ಗೆ ಶಾಂಪು ಹಾಕಿ ಸ್ನಾನ ಮಾಡುತ್ತೇನೆ. ಸಂಜೆ ಹೇರ್ ಆಯಿಲ್ ಹಚ್ಚುತ್ತೇನೆ'
ವಿನುತಾ : 'ರಾತ್ರಿ?'
ಅನಿತಾ : 'ಕಳಚಿ ಮೊಳೆಯಲ್ಲಿ ಸಿಕ್ಕಿಸುತ್ತೇನೆ

2] ಮಂಕ : ನಾಲ್ಕು ತಾಸು ಎಲ್ಲಿಗೆ ಹೋಗಿದ್ದೆ?
ಪತ್ನಿ : ಶಾಪಿಂಗ್‌ಗೆ ಹೋಗಿದ್ದೆ
ಮಂಕ : ಏನೇನ್ ತಗೊಂಡೆ?
ಪತ್ನಿ : ಒಂದು ಹೇರ್‌ಬ್ಯಾಂಡ್ ಮತ್ತು 45 ಸೆಲ್ಫಿ ತಗೊಂಡೆ!

3] ಅಳಿಯ : ನಿಮ್ಮ ಮಗಳಲ್ಲಿ ಸಾವಿರ ಕೊರತೆಗಳಿವೆ...
ಅತ್ತೆ : ಹೌದು ಅಳಿಯಂದಿರೆ, ಇದೇ ಕಾರಣದಿಂದಾಗಿ ಅವಳಿಗೆ ಒಳ್ಳೆಯ ಗಂಡು ಸಿಗಲಿಲ್ಲ!

4] ಗಂಡ : ಏಯ್ ಟ್ವೆಂಟಿ-ಟ್ವೆಂಟಿ ಮ್ಯಾಚ್ ಹಾಕು
ಹೆಂಡತಿ : ಆಗಲ್ಲ ಏನ್ ಮಾಡ್ತೀರ?
ಗಂಡ : ನೋಡ್ಕೊಳ್ತೀನಿ
ಹೆಂಡತಿ : ಏನ್ ನೋಡ್ಕೊಳ್ತೀರ
ಗಂಡ : ಯಾವ ಚಾನೆಲ್ ಹಾಕ್ತಿಯೋ ಅದನ್ನೇ ನೋಡ್ಕೊಳ್ತೀನಿ

# ನಗೆ ಹನಿ

ರಮ್ಯ ಎಂ., ತೃತೀಯ ಬಿ.ಎ. [ಹೆಚ್.ಇ.ಜಿ.]

ಶಿಕ್ಷಕ : ಲೋ ಗುಂಡ, ಭಾರತದಲ್ಲೆಲ್ಲಾ ಪ್ರಸಿದ್ಧವಾದ ಪತ್ರಿಕೆ ಯಾವುದು?
ಗುಂಡ : ಲಗ್ನ ಪತ್ರಿಕೆ ಸಾರ್

ಟೀಚರ್ : ಯಾಕೋ ರಾಮು ನೋಟ್ಸ್ ಬರೆದಿಲ್ಲ
ರಾಮು : ಇಲ್ಲ ಟೀಚರ್ ನೀವೇ ಹೇಳಿದ್ರಲ್ಲ ನೋಟ್ಸ್ ಕ್ಲೀನಾಗಿ ಇಡಿ ಅಂತ ಅದಕ್ಕೆ ಬರೆದಿಲ್ಲ

ಗುಂಡ : ಯಾಕೋ ನೀನು ನೆನ್ನೆ ನನಗೆ ಫೋನ್ ಮಾಡಲೇ ಇಲ್ಲ?
ಡಿಂಕು : ನಿನ್ನ ಮನೆಗೆ ಫೋನ್ ಮಾಡಿ ಸಾಕಾಯ್ತು. ಪ್ರತಿ ಸಲವೂ ಎಂಗೇಜ್ ಆಗಿತ್ತು
ಗುಂಡ : ಸಾಧ್ಯವೇ ಇಲ್ಲ. ನಿನ್ನೆ ನಾನು ಇಡೀ ದಿನ ನಿನ್ನ ಫೋನ್ ಬರುತ್ತೆ ಅಂತ ರಿಸೀವರನ್ನು ಕಿವಿ ಹತ್ತಿರ ಇಟ್ಟುಕೊಂಡೆ ಕೂತಿದ್ದೆ.

ಅವನು : ನಾನು ಜಿರಳೆ ಆಗಿ ಹುಟ್ಟಿದ್ದರೆ ಚೆನ್ನಾಗಿತ್ತು ಕಣೋ
ಇವನು : ಇದ್ದಕ್ಕಿದ್ದ ಹಾಗೆ ಹೀಗೇಕೆ ಹೇಳ್ತಿಯಾ
ಅವನು : ನನ್ನ ಹೆಂಡತಿ ಜಿರಳೆಗೆ ಮಾತ್ರ ಹೆದರ್ತಾಳೆ ಕಣೋ

ರಾಜು : ನೆಪೋಲಿಯನ್ ಡಿಕ್ಷನರಿಯಲ್ಲಿ 'ಇಂಪಾಸಿಬಲ್' ಎಂಬ ಪದವೇ ಇರಲಿಲ್ವಂತೆ
ರವಿ : ಈಗ ದೂರಿ ಏನು ಪ್ರಯೋಜನ?
ರಾಜು : ಡಿಕ್ಷನರಿ ಖರೀದಿಸುವ ಮುನ್ನವೇ ಚೆಕ್ ಮಾಡಿಕೊಳ್ಳಬೇಕಾಗಿತ್ತು.

ಸೇಲ್ಸ್‌ಮನ್ : ಸರ್, ಇದು ಇರುವೆಗೆ ಹಾಕೋ ಪೌಡರ್ ದಯವಿಟ್ಟು ತಗೋಳಿ
ಸರ್ದಾರ್ : ಬೇಡಪ್ಪ...! ಇವತ್ತು ಪೌಡರ್ ಹಾಕಿದ್ರೆ ನಾಳೆ "LIPSTICK, FAIR & LOVELY" ಎಲ್ಲಾ ಕೇಳ್ತಾವೆ...!

---

# ನೀರು

ಪದ್ಮಪ್ರಿಯ
ದ್ವಿತೀಯ ಬಿ.ಕಾಂ.

ಬಂತು ಬಂತು
ಬೇಸಿಗೆ
ನೀರು ಕೊಳ್ಳಿ
ಕಾಸಿಗೆ

ಕೆರೆಯಲ್ಲಿಲ್ಲ
ನೀರು

ಬತ್ತಿದೆ ಜಲದ
ಬೇರು

ವಿದ್ಯುತ್ ಇಲ್ಲ
ಊರಿಗೆ
ನೀರಿನ ಚಿಂತೆ
ಜನರಿಗೆ

ದಿನವೂ ನೀರಿಗೆ
ಹೋರಾಟ
ಸರ್ಕಾರಕ್ಕೆ
ಸಂಕಟ

ಬಂತು ಬಂತು
ನೀರಿನ ಗಾಡಿ

ಬನ್ನಿ ಬನ್ನಿ
ಓಡೋಡಿ

ಬೇಕು ಬೇಕು
ನೀರು
ನಿತ್ಯ ಅದರದೆ
ಕಾರುಬಾರು

# ಅ(ನ)ರ್ಥ ಕೋಶ

ತವಮಣಿ
ತೃತೀಯ ಬಿ.ಬಿ.ಎಂ.

ಅತಿಥಿ : ಕರೆದವರ ತಿಥಿಮಾಡುವವನು
ಚಿತ್ರಮಂದಿರ : ತಿಗಣೆಗಳ ಹಾಸ್ಟೆಲ್
ಇಡ್ಲಿ : ಹೋಟೆಲ್‌ನಲ್ಲಿ ಮಾರುವ ಬಿಳಿ ಮಾತ್ರೆ
ಭಿಕ್ಷುಕ : ಚಿಲ್ಲರೆ ನಾಣ್ಯದ ಬ್ಯಾಂಕು
ಸೀಮೆಸುಣ್ಣ : ಉಪಾಧ್ಯಾಯರ ಪೌಡರ್
ಏಕಮಾತ್ರಪುತ್ರ : ಅಪ್ಪನ ಹಣವನ್ನು ಖಾಲಿ ಮಾಡುವ ಸಾಧನ
ಸ್ಪೆಷಲ್ ಕ್ಲಾಸ್ : ಸಿನಿಮಾ ನೋಡಲು ಸುಳ್ಳು ಹೇಳುವ ಒಂದು ನೆಪ
ಸಾಲ : ರೈತರ ಪಿತ್ರಾರ್ಜಿತ ಆಸ್ತಿ
ಕಂಟ್ರಾಕ್ಟರ್ : ರಸ್ತೆ, ಮೋರಿ, ಸೇತುವೆಗಳನ್ನು ಆಸ್ತಿ ಮಾಡಿಕೊಂಡವನು
ಟಿ.ವಿ. : ಕುಳಿತಲ್ಲೇ ಕಾಣುವ ಸ್ವರ್ಗ

---

# ಮಾಡ್ರನ್ ಗಾದೆಗಳು

ಸುಪ್ರೀತ ಎಸ್.
ದ್ವಿತೀಯ ಬಿ.ಬಿ.ಎಂ.

- ಹಾಲು ಒಡೆದರೂ ಆಲ್ಕೋ ಹಾಲು ಒಡೆಯದು
- ಕರೆನ್ಸಿ ಓಕೆ? ಮಿಸ್ ಕಾಲೆ ಯಾಕೆ?
- ದೇವಸ್ಥಾನವಿಲ್ಲದ ಬಡಾವಣೆ ಇಲ್ಲ, ಬಾರ್ ಇಲ್ಲದ ಪ್ರದೇಶವಿಲ್ಲ
- ಸಿಗರೇಟು ಚಿಕ್ಕದಾದರೂ ಅನಾಹುತ ದೊಡ್ಡದು
- ಕುಡುಕನಿಗೆ ಮಿತ್ರನೇ ಮೊದಲ ಗುರು, ಬಾರುಗಳೇ ಮೊದಲ ಪಾಠಶಾಲೆ
- ಬ್ಯಾಟ್ಸ್ಯಾಮನ್‌ಗಳಿಗೊಂದು ಕಾಲ, ಬೌಲರ್‌ಗಳಿಗೊಂದು ಕಾಲ, ರನ್ ಓಟ್‌ಗೆ ಅವಸರವೇ ಕಾರಣ
- ಹೋಮ್‌ಪಿಚ್‌ನಲ್ಲಿ ಹುಲಿ, ಫಾರಿನ್ ಪಿಚ್‌ನಲ್ಲಿ ಇಲಿ
- ಒಲೆಗೆ ವರುಷ ಸ್ಟವಗೆ ನಿಮಿಷ
- ಹೋದೆಯಾ ಜೈಲಿಗೆ ಅಂದರೆ ನಿಂತೆ ಚುನಾವಣೇಲಿ ಅಂದ
- ಕೇಡುಗಾಲಕ್ಕೆ ರಾಜಕಾರಣಿ ನಿಜ ನುಡಿದ
- ದೇಶ ತಿರುಗಿ ನೋಡು, ಇಂಟರ್‌ನೆಟ್ ಜಾಲಿಸಿ ನೋಡು
- ಟಿ.ವಿ. ಕರೆಂಟ್ ಇರುವ ತನಕ, ರೇಡಿಯೋ ಸೆಲ್ ಇರುವ ತನಕ
- ಸೆಂಚುರಿಗೋಸ್ಕರ ತಂಡವನ್ನು ಬಲಿಕೊಟ್ಟ

# ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ಜಿ. ನಾಗರಾಜು,** ಪರಿಚಾರಕರು
ಜೆ.ಎಸ್.ಎಸ್. ಮಹಿಳಾ ಕಾಲೇಜು, ಕೊಳ್ಳೇಗಾಲ

# ENGLISH SECTION





ಪರಿವಿಡಿ

## Contents


| | | | |
|---|---|---|---|
| 1. | Mother | Kumari Nethra B.N. | 49 |
| 2. | 10 ways to protect our environment | Ruchitha S | 50 |
| 3. | Articles | Shilpa M | 51 |
| 4. | How to manage your home waste | Thejashree | 52 |
| 5. | Kinds of Students | Meghana H.S. | 54 |
| 6. | Honesty is the best policy | Supritha S | 55 |
| 7. | Dr. Avul Pakir Jainulabdeen Abdul Kalam | Anjum Ara A.H. | 56 |
| 8. | In search of a friend | Vajra N | 57 |
| | The Best | Kavyshree P | |
| | Mother | Chaithra | |
| 9. | Coumputer | Anjum Ara A.H. | 58 |
| 10. | Inspiring Words | Kavya R.P. | 59 |
| 11. | The Relevance of Beauty Pageant | Vajra N | 60 |
| 12. | Mom, A Thought for Mother's Day | Chaithra C | 61 |
| | Success | K. Sukanya | |
| 13. | Friendship, Friendship Day | Chaithra C | 62 |
| 14. | Principle Language Of India | Divya N.M | 65 |
| 15. | Swami Vivekananda's Education and Society | Vajra N | 63 |
| | Life | K. Sukanya | |
| 16. | Teacher | Tejaswini R | 65 |
| 17. | Reaching Goals | Maheshree P | 66 |
| | Balance Sheet of Life | Deepu M | |
| 18. | Speech and Silence | Vajra N | 67 |
| | Time for Everything | Pooja M | |
| | God and Mom | Chandana S | |
| 19. | Friend | Anitha M | 68 |
| | It's Up To You | Kruthika V | |

# Mother





**Kumari Nethra B.N.**
I M.Com

When god created the earth and filled it with life he bestowed a number of gifts on the living beings. He gave the food to satisfy their hunger, water to quench their thirst and shelter for protection but to the infant who could neither seek nor obtain these on his own, God gave mother. The body of the child is formed inside the mother from her own flesh and blood. She gives birth to the child and nourishes, protects and brings up the infants, her milk satisfies hunger and thirst and her lap provides the best care and shelter.

It is said that since "God could not be everywhere", he created "mother". The ancient Hindu religion, worships God as "mother". The Bible celebrates the law of the holy "mother" Mary. The Kuran says that "heaven lies beneath the feet of the mother". The motherkangaroo a unique mother.

While female kangaroo can bear young ones throughout the year. It manages the time, breeding to coincide with the availability of food and water. The body is born after a short gestation period of nearly 33 days. At birth, the baby is still underdeveloped and just as big as a man's thumb with the help of its strong arms the tiny baby crawls into the pouch on the belly of its mother and attaches itself to a nipple in it. For the next 70 days it remains stuck to the nipple and sucks the mother milk which remain its only diet by the time it first emerges from the pouch. It weighs about 7 pounds Soon the mother produces another baby. The new baby also crawls into the pouch although for over a year difference the new born baby needs milk rich in fat. The mother at the same time supplies the required nourishment to suit its babies need.

Isn't it a unique mother ?

# 10 ways to protect our environment



Ruchitha S
II B.Com

**1] Turn off electrical devices -** don't leave them on "stand by". If you leave electrical appliances on stand by :- They are still using and wasting electricity. Help protect the environment by switching off completely when you are not using them.

**2] Turn off electric lights when you leave the room :-** If everyone did this we would use over 20% less electricity! Help protect the environ ment by switching off lights when no one is using them.




**3] Only boil the amount of water you need :-** Whether you heat your water in a kettle (or) a pan a huge amount of energy is wasted and ultimately thrown away through boiling unwanted water.

**4] Save water :-** Turn the tap off when you brush your teeth. Reduce the amount of time you are in the shower. Take a shower instead of a bath (or) less water for your bath. Reuse your bath water for odd jobs around the garden and in the home. Our water supplies are the natural resource that is most at risk.

